ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 33 ಆಗಸ್ಟ್ 14, 2005 ಬೆಲೆ ರೂ. 3.00








ಜನರ ಮೂಲಭೂತ ಅಗತ್ಯ

ಆಹಾರ - ಭೂಮಿ - ಉದ್ಯೋಗಕ್ಕಾಗಿ

ರಾಜ್ಯವ್ಯಾಪಿ ಚಳುವಳಿ

ತಲ್ಲಣಗೊಂಡ





ರಾಜ್ಯದ ರಾಜಕೀಯ




ಪೊಲೀಸರು ಕಾರ್ಪೊರೇಟ್ ಕ್ರೌರ್ಯದ ಪ್ರತಿನಿಧಿಗಳೇ?

ನೈಸ್ ಕಂಪನಿಯ ಭೂ ಕಬಳಿಕೆ ವಿರುದ್ಧ ವಸತಿ ಹೀನರ ಹೋರಾಟ



- ವರ್ಷ ಪೂರೈಸುವತ್ತ ಆಪ್ತಮಿತ್ರ - ಅಂಥದ್ದೇನಿದೆ ?
- ವಯೋಮಿತಿ ಮೀರಿದ ಶಿಕ್ಷಕರ ಬವಣೆ



- ಆಕಾಶವ ಎತ್ತಿ ನಿಲ್ಲಿಸಿ ನೀಲಿಯಾಗಿ ನಿಂತವರು...
- ಚಾರಿತ್ರಿಕ ಕೆರಿಬಿಯನ್ ತೈಲ ಒಪ್ಪಂದ



ಪೊಲೀಸ್ ಕಾರ್ಪೊರೇಟ್ ಕ್ರೌರ್ಯದ ಪ್ರತಿನಿಧಿಗಳೇ?

ಜಾಗತೀಕರಣ ಉದಾರೀಕರಣ ಯುಗದಲ್ಲಿ ಭಾರತದ ಪೊಲೀಸರೂ ಬದಲಾಗುತ್ತಿದ್ದಾರೆಯೇ? ಖಂಡಿತ! ಆದರೆ ಯಾವ ಕಡೆಗೆ? ಹರಿಯಾಣದ ಗುರ್‌ಗಾಂವ್‌ನಲ್ಲಿ ಕಾರ್ಮಿಕರನ್ನು, ಕೇರಳದ ವಿದ್ಯಾರ್ಥಿ ಯುವಜನರನ್ನು ದಮನಿಸಲು ಪೊಲೀಸರು ನಡೆಸಿದ ಕ್ರೌರ್ಯಗಳ ಹಿಂದೇನಿದೆ?



ಭಾವೋದ್ರೇಕದಿಂದಲೇ ಪರಿಹಾರ ಅರಸುವುದು ಭಾರತೀಯ ಮನಸ್ಥಿತಿ ಎಂದು ಹರಿಯಾಣದ ಗುರ್‌ಗಾವ್‌ನಲ್ಲಿ ಇತ್ತೀಚೆಗೆ ಮುಷ್ಕರನಿರತ ಕಾರ್ಮಿಕರ ಮೇಲೆ ನಡೆದ ಪೊಲೀಸ್ ದಾಳಿಯನ್ನು ಕೆಲವರು ವ್ಯಾಖ್ಯಾನಿಸಬಹುದು. ಆದರೆ ಈ ವ್ಯಾಖ್ಯಾನ ಈ ಘಟನೆಗಷ್ಟೇ ಸೀಮಿತವಾಗಿ ಉಳಿಯುವುದಿಲ್ಲ. ಈ ಘಟನೆಯ ಹಿಂದೆ ಭಾರತ ಅನುಸರಿಸಿಕೊಂಡು ಬಂದಿರುವ ಮುಕ್ತ ಆರ್ಥಿಕ ನೀತಿಯ ಎಲ್ಲ ದುಷ್ಟ ಮುಖ ಹಾಗೂ ಮುಖವಾಡಗಳು ಅನಾವರಣಗೊಂಡಿವೆ.

ವಿದೇಶಾವರಿ ನಗೆ

ಜಾಗತೀಕರಣ ಉದಾರೀಕರಣ ಯುಗದಲ್ಲಿ ಭಾರತದ ಪೊಲೀಸರೂ ಬದಲಾಗುತ್ತಿದ್ದಾರೆಯೇ? ಖಂಡಿತ! ಆದರೆ ಯಾವ ಕಡೆಗೆ? ಹರಿಯಾಣದ ಗುರ್‌ಗಾಂವ್‌ನಲ್ಲಿ ಕಾರ್ಮಿಕರನ್ನು, ಕೇರಳದ ವಿದ್ಯಾರ್ಥಿ ಯುವಜನರನ್ನು ದಮನಿಸಲು ಪೊಲೀಸರು ನಡೆಸಿದ ಕ್ರೌರ್ಯಗಳ ಹಿಂದೇನಿದೆ?

14 ವರ್ಷಗಳ ಹಿಂದೆ ನಮ್ಮ ದೇಶದ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಗೆ ವಿದೇಶಿ ನೇರ ಬಂಡವಾಳ (ಎಫ್‌ಡಿಐ)ದ ಹುಚ್ಚು ಹತ್ತಿದ ಮೇಲೆ, ಬಹುರಾಷ್ಟ್ರೀಯ ಹಾಗೂ ದೇಶೀಯ ಕಾರ್ಪೊರೇಟ್ ಕಂಪನಿಗಳೇ ಎಲ್ಲಾ ಬಗೆಯ ಅಭಿವೃದ್ಧಿಗಳಿಗೆ ಕಾರಣ ಎಂಬ ಭ್ರಮೆ ಅಮರಿಕೊಂಡ ಮೇಲೆ ನಮ್ಮ ಸರ್ಕಾರಗಳ ಯೋಜನಾ ಆದ್ಯತೆಗಳೇ ಬದಲಾಗಿವೆ. ವಿದೇಶಿ ಬಂಡವಾಳ ಹೆಚ್ಚೆಚ್ಚು ಹರಿದು ಬರಲೆಂದು ಕಂಪನಿಗಳಿಗೆ ಇನ್ನಿಲ್ಲದ ಆಮಿಷಗಳನ್ನು ರಿಯಾಯತಿ ಒಡ್ಡಲಾಗುತ್ತ ಬರಲಾಗಿದೆ. ಸ್ವತಃ ನಮ್ಮ ನಾಯಕರು ವಿದೇಶಿ ಯಾತ್ರೆ ಮಾಡಿ ವಿದೇಶಿ ಬಂಡವಾಳ ಆಕರ್ಷಿಸಲು ಯಾತ್ರೆಗೆ ತೆರಳುತ್ತಿದ್ದೇವೆ ಎಂದು ದೇಶಾವರಿ ನಗೆ ಬೀರುತ್ತಾರೆ. ಸ್ವತಃ ತಾವೇ ವಿದೇಶದ ಆಕರ್ಷಣೆಗಳಿಗೆ ಬಲಿಯಾಗಿ ವಾಪಾಸಾಗುತ್ತಾರೆ. ಇಲ್ಲಿ ಬಂದ ಮೇಲೆ ಆ ಕಂಪನಿಗಳಿಗೆ ಪೂರಕ ವಾತಾವರಣ ಸೃಷ್ಟಿಸಲು ಶಿರಸಾವಹಿಸಿ ಯೋಜನೆ ರೂಪಿಸುತ್ತಾರೆ. ಕಂಪನಿಗಳಿಗೆ ಸೊಂಟ ಬಾಗಿಸುವ ನಾಯಕರಿಂದ ನಮ್ಮ ದೇಶದ ಸಂಪನ್ಮೂಲಗಳು ಬರಿದಾಗುತ್ತಾ ಸಾಗುತ್ತಿವೆ. ನಮ್ಮ ಸ್ವಾಭಾವಿಕ ಕಾಡುಗಳನ್ನು ನಾಶಮಾಡಿ, ಲಕ್ಷಾಂತರ ಜನರನ್ನು ಒಕ್ಕಲೆಬ್ಬಿಸಲಾಗುತ್ತದೆ. ಮೂಲಸೌಕರ್ಯ ಕಲ್ಪಿಸಲೆಂದು ಎಲ್ಲವನ್ನೂ ಮಾರಲಾಗುತ್ತದೆ. ನಮ್ಮ ಜನರಿಗೆ ಕುಡಿಯಲು ನೀರೊದಗಿಸದಿದ್ದರೂ ಪರವಾಗಿಲ್ಲ, ಈ ಕಂಪನಿಗಳಿಗೆ ಗ್ಯಾಲನ್‌ಗಟ್ಟಲೆ ನೀರು ಬಳಸಲು ಯಾವ ಷರತ್ತನ್ನೂ ನಾವು ವಿಧಿಸುವುದಿಲ್ಲ. ಬಂಡವಾಳ ಹೂಡುತ್ತಿವೆ ಎಂಬ ಒಂದೇ ಕಾರಣಕ್ಕೆ ಸ್ಟ್ಯಾಂಪ್ ಡ್ಯೂಟಿಯಲ್ಲಿ ರಿಯಾಯತಿ ನೀಡಿ (ಹಲವು ವೇಳೆ ಸಂಪೂರ್ಣ ವಿನಾಯತಿ ನೀಡಿ) ಉದ್ದಿಮೆ ಆರಂಭಿಸಲು ನಿವೇಶನ ಒದಗಿಸಲಾಗುತ್ತದೆ. ಕಂಪನಿಯ ಬಾಗಿಲಿಗೇ ಒಳ್ಳೆಯ ರಸ್ತೆ ನಿರ್ಮಿಸಿಕೊಡುತ್ತೇವೆ (ಸ್ವಾತಂತ್ರ್ಯ ಬಂದು 58 ವರ್ಷಗಳಾಗಿದ್ದರೂ ನಮ್ಮ ಬಹಳಷ್ಟು ಹಳ್ಳಿಗಾಡುಗಳು ಇನ್ನೂ ಡಾಂಬರು ರಸ್ತೆ ಕಾಣದಿದ್ದರೂ ನಿನ್ನೆ ಮೊನ್ನೆ ಬಂದ ಕಂಪನಿಗಳಿಗೆ ನಾವೆಷ್ಟು, ಪ್ರಾಮುಖ್ಯತೆ ನೀಡಿದ್ದೇವೆ ನೋಡಿ),

ಕಂಪನಿಗಳ ದರ್ಬಾರು

ಇಷ್ಟೆಲ್ಲ ಮಾಡಿಯೂ ಆ ಕಂಪನಿಗಳಿಗೆ ನಷ್ಟವಾದರೆ ಅದನ್ನು ಸರ್ಕಾರದ ಬೊಕ್ಕಸದಿಂದಲೇ ಭರಿಸುವ ಭರವಸೆ (Counter guarantee agrement) ನೀಡಲಾಗುತ್ತದೆ. ಹೀಗೆ ನಮ್ಮ ನೆಲ, ನೀರು, ವಿದ್ಯುತ್ ಎಲ್ಲವನ್ನು ರಿಯಾಯತಿ ದರದಲ್ಲಿ ಪಡೆಯುವ ಕಂಪನಿಗಳು ಕಾಲಕಾಲಕ್ಕೆ ತೆರಿಗೆಗಳನ್ನಾದರೂ ಪ್ರಾಮಾಣಿಕವಾಗಿ ಪಾವತಿಸುತ್ತವೆಯೋ ಇಲ್ಲ, (ಕಳೆದ ಮಾರ್ಚ್ 31ರ ವೇಳೆಗೆ ದೇಶದ ಬಹುಪಾಲು ಕಂಪನಿಗಳು ಬಾಕಿ ಉಳಿದಿರುವ ಆದಾಯ ತೆರಿಗೆ, ಅಬಕಾರಿ ತೆರಿಗೆ, ಕಾರ್ಪೊರೇಟ್ ತೆರಿಗೆ, ಕೇಂದ್ರ ಅಬಕಾರಿ ಸುಂಕ ಇತ್ಯಾದಿಗಳು 1 ಲಕ್ಷ ಕೋಟಿ ರೂಗಳಿಗೆ ತಲುಪಿದೆ. ಎಷ್ಟೋ ಕಂಪನಿಗಳು ಕೋಟ್ಯಾಂತರ ಮೌಲ್ಯದ ನೀರು ಹಾಗೂ ವಿದ್ಯುತ್ ಬಿಲ್ಲುಗಳನ್ನು ವರ್ಷಗಟ್ಟಲೆ ಪಾವತಿಸಿಲ್ಲ ಎಂಬುದೂ ಬಚ್ಚಿಟ್ಟ ಗುಟ್ಟಲ್ಲ). ಇದೆಲ್ಲ ಸಾಲದೆಂಬಂತೆ ಭಾರತೀಯ ಕಾರ್ಮಿಕರು ಪ್ರಪಂಚದಲ್ಲೇ ಅತೀ ಅಗ್ಗದ ಸಂಬಳಕ್ಕೆ ದುಡಿಯುವ ಶ್ರಮಜೀವಿಗಳು (Cheap Labour) ಎಂಬ ಅಂಶವೂ ಈ ಕಂಪನಿಗಳ ನೆರವಿಗಿದೆ. ಹೀಗೆ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಹೊಣೆಗಾರಿಕೆಯಿಂದ ಜಾರಿಕೊಂಡು ತಮ್ಮ ಲಾಭ ಉಳಿಸಿಕೊಳ್ಳಲು ಪ್ರಯತ್ನಿಸುವ ಈ ಕಂಪನಿಗಳು ಕಾರ್ಮಿಕರು ಒಂದು ಇಂಕ್ರಿಮೆಂಟ್ ಕೇಳಿದ ಕೂಡಲೇ ಉರಿದುಬೀಳುತ್ತವೆ. ಅವರು ಸಂಘಕಟ್ಟಿಕೊಂಡರೆ ಕೆಲಸದಿಂದ ವಜಾ ಮಾಡುತ್ತವೆ. ಇದನ್ನು ಪ್ರತಿಭಟಿಸಿ ಬೀದಿಗಿಳಿದರೆ ಅವರನ್ನು ಹತ್ತಿಕ್ಕಲು ಸರ್ಕಾರಗಳನ್ನು ಒಳಹಾಕಿಕೊಳ್ಳುತ್ತವೆ. ಪೊಲೀಸರನ್ನು ಛೂಬಿಡುತ್ತವೆ. ಈ ಧೋರಣೆಯ ನಗ್ನ ಉದಾಹರಣೆಯೇ ಗುರ್‌ಗಾವ್ ಘಟನೆ. ಸಂವಿಧಾನದ ಹಕ್ಕುಗಳನ್ನು ಎತ್ತಿಹಿಡಿಯಬೇಕಾದ ಪೊಲೀಸ್ ವ್ಯವಸ್ಥೆಯೇ ಅವುಗಳನ್ನು ಹತ್ತಿಕ್ಕಲು ಹೊರಟಾಗ ನಿರ್ಲಜ್ಜ ಸರ್ಕಾರಗಳು ಅಂತಹ ಪೊಲೀಸರನ್ನು ಸಮರ್ಥಿಸಿಕೊಂಡರೆ, ನಮ್ಮವರನ್ನು ನಮ್ಮವರಿಂದಲೇ ಚಚ್ಚಿಸುವ ತಂತ್ರವನ್ನು ನೇರ ಬಂಡವಾಳ ಸುರಿಯುವ ಕಂಪನಿಗಳು ಅನುಸರಿಸಿದರೆ ಕಾರ್ಮಿಕ ಹಕ್ಕುಗಳನ್ನು ಅಣಕಿಸಿದಂತೆ. ಭಾರತೀಯ ಕಾರ್ಮಿಕನ ಶ್ರಮ ಅಗ್ಗವಾಗಿರಬಹುದು. ಆದರೆ ಅವನ ವ್ಯಕ್ತಿತ್ವವನ್ನು Cheep ಎಂದು ಪರಿಗಣಿಸುವ ಜಾಗತೀಕರಣಗೊಂಡ ವ್ಯವಸ್ಥೆಯ ವಿರುದ್ಧ ದನಿಗಳು ಗಟ್ಟಿಗೊಳ್ಳುತ್ತ ಸಾಗಬೇಕಿದೆ.

ಹರ್ಯಾಣ : ಮುಕ್ತ ಆರ್ಥಿಕ ನೀತಿಯ ಕಾಶಿ! ಒಂದು ಪ್ರಯೋಗಾಲಯ :

ಈಗ ಹರಿಯಾಣಕ್ಕೆ ಬರೋಣ. ಹರಿಯಾಣದ ಪೊಲೀಸರಿಗೆ ಕ್ರೌರ್ಯದ ರಕ್ತಸಿಕ್ತ ಇತಿಹಾಸವಿದೆ. ಬನ್ಸಿಲಾಲರ ಸರ್ಕಾರವಿದ್ದಾಗ ರಾಜ್ಯಾದ್ಯಂತ 6000 ಸಫಾಯಿ ಕರ್ಮಚಾರಿಗಳು ತಿಂಗಳ ವೇತನವನ್ನು ಸಕಾಲದಲ್ಲಿ ಪಾವತಿಸಿ ಎಂದು 80 ದಿನಗಳ ಮುಷ್ಕರ ಹೂಡಿದಾಗ ಆ ಬಡಪಾಯಿಗಳ ಮೇಲೆ ಎಸ್ಮಾ ಜಾರಿ ಮಾಡಿ 700 ಮಹಿಳೆಯರೂ ಸೇರಿದಂತೆ ಎಲ್ಲರನ್ನು ಜೈಲಿನಲ್ಲಿ ಕೂಡಿ ಅಮಾನುಷವಾಗಿ ಬಡಿದ ಪೊಲೀಸರ ರಾಜ್ಯವಿದು. ಝಜ್ಜರ್‌ನಲ್ಲಿ ಐವರು ದಲಿತರು ಸತ್ತ ಹಸುವಿನ ಚರ್ಮ ಸುಲಿಯುತ್ತಿದ್ದಾಗ ಗೋಹತ್ಯೆ ಮಾಡಿದ್ದಾರೆಂದು ವಿಶ್ವ ಹಿಂದೂ ಪರಿಷತ್‌ನ ಕಾರ್ಯಕರ್ತರು ಆ ದಲಿತರನ್ನು ಹೊಡೆದು ಕೊಲ್ಲುವಾಗ ಮೂಕ ಪ್ರೇಕ್ಷಕರಾಗಿ ನಿಂತ ಪೊಲೀಸರ ರಾಜ್ಯವಿದು. ಇದೇ ಸಾಲಿನಲ್ಲಿ ಗುರ್‌ಗಾವ್ ಘಟನೆಯೂ ಒಂದು ಎಂದು ಹೇಳಿದರೆ ಈ ಘಟನೆಯನ್ನು ಹಗುರವಾಗಿ ತಳ್ಳಿಹಾಕಿದಂತಾಗುತ್ತದೆ. ಪೊಲೀಸ್ ಕ್ರೌರ್ಯದ ಇತಿಹಾಸಕ್ಕೆ ಸನ್ನಿವೇಶ ಸೃಷ್ಟಿಸುವ ಕಾರಣ ಮಾತ್ರ ವಿದೇಶಿ ಕಂಪನಿಯದು ಎಂಬುದೇ ಈ ಘಟನೆಯ ವಿಶೇಷ.

ಹರಿಯಾಣದ ಗುರ್‌ಗಾವ್ ಮುಕ್ತ ಆರ್ಥಿಕ ನೀತಿಯ 'ಕಾಶಿ' ಎನಿಸಿದೆ. ವಿದೇಶಿ ನೇರ ಬಂಡವಾಳದ ಪ್ರಯೋಗಾಲಯವನ್ನಾಗಿ ಅದನ್ನು ಪರಿವರ್ತಿಸಲಾಗಿದೆ. ದೇಶದ ರಾಜಧಾನಿಗೆ ಅದು ಸಮೀಪವಿರುದ ಕಾರಣ ಬಹುರಾಷ್ಟ್ರೀಯ ಕಂಪನಿಗಳಿಗೆ ಗುರ್‌ಗಾವ್ ಆಕರ್ಷಣೀಯ ಗುರಿಯಾಗಿದೆ. ಹರಿಯಾಣದ ಸರ್ಕಾರ ಎಲ್ಲ ಬಗೆಯ 'ಸಹಕಾರ' ನೀಡಲು ಕಟಿಬದ್ಧವಾಗಿದೆ. ಕಾರ್ಖಾನೆಗಳು, ಕೈಗಾರಿಕೆಗಳು ಹಾಗೂ ಉದ್ದಿಮೆಗಳು ಒಂದೆಡೆ ಕೇಂದ್ರೀಕೃತಗೊಂಡಾಗ ಸಹಜವಾಗಿಯೇ ಅಲ್ಲಿರುವ ಕಾರ್ಮಿಕರು ಒಗ್ಗಟ್ಟಾಗುತ್ತಾರೆ (ಸರ್ಕಾರದಿಂದ ಸವಲತ್ತು ಕೇಳಲು ಉದ್ದಿಮೆದಾರರೇ ಒಗ್ಗಟ್ಟಾಗುತ್ತಾರೆ ಎಂದರೆ ಕಾರ್ಮಿಕರು ಒಂದಾಗುವುದರಲ್ಲಿ ತಪ್ಪೇನಿದೆ. ಇಷ್ಟಕ್ಕೂ ಟ್ರೇಡ್ ಯೂನಿಯನ್‌ಗಳ ಅಸ್ತಿತ್ವ ಸಂವಿಧಾನಬದ್ಧವಾಗಿಯೇ ಇದೆ. ಅಸೋಚಾಮ್, ಸಿ.ಐ.ಐ., ಫಿಕಿಯಂತಹ ಉದ್ದಿಮೆದಾರರ ಸಂಘಟನೆಗಳಿಗೆ ಇದೆಲ್ಲ ಗೊತ್ತೇ ಇದೆ). ಜಾಗತೀಕರಣವಾದರೇನು ಕಾರ್ಮಿಕ ಶಕ್ತಿಯ ಅನನ್ಯತೆ ಎಲ್ಲ ಕಾಲಕ್ಕೂ ಪ್ರಸ್ತುತವಾಗಿ ಉಳಿದೇ ಇರುತ್ತದೆ. ಆದರ ಮೇಲೆ ಗುರ್‌ಗಾವ್‌ನಲ್ಲಿ ನಡೆದ ದಾಳಿ ಮಾತ್ರ ಜಾಗತೀಕರಣದ ಆರ್ಥಿಕ ಧೋರಣೆ ಹಾಗೂ ಶೋಷಣೆಗಳ ಮುಂದುವರಿದ ಹಂತವಾಗಿ ಕಂಡುಬರುತ್ತಿದೆ.

ಕ್ರೌರ್ಯ, ದುರ್ವರ್ತನೆಗಳು ಹಿಂದೆ....

ಸಂವೇದನಾಶೀಲ ಬರಹಗಾರರೆಂದೇ ಪ್ರಖ್ಯಾತರಾಗಿರುವ ಪಿ.ಸಾಯಿನಾಥ್‌ರವರು ಒಂದು ಪ್ರಸಂಗವನ್ನು ಹೀಗೆ ನಿರೂಪಿಸುತ್ತಾರೆ. ಗಂಡನ ದುರ್ನಡತೆ ಮತ್ತು ದುರಭ್ಯಾಸಗಳಿಂದ ಬೇಸತ್ತುಹೋದ ಹೆಂಡತಿಯೊಬ್ಬಳು ಜಗಳ ಆಡುವಾಗ ಗಂಡನ ಕೆನ್ನೆಗೆ ಒಂದು ಸಾರಿ ಬಿಗಿಯುತ್ತಾಳೆ. ಕೂಡಲೇ ಆ ಗಂಡನ ಗಂಡಸುತನ ಜಾಗೃತಗೊಂಡು ಅವನು ಕೆರಳಿ ಹೆಂಡತಿಗೆ ಮೂವತ್ತು ಸಾರಿ ಚಚ್ಚುತ್ತಾನೆ. ಕೊನೆಗೆ ಅವನು ಹೇಳುತ್ತಾನೆ "ಈಗ ನಾವಿಬ್ಬರೂ ಸಮಾನರು" ಎಂದು. ನಿರಾಯುಧ ಕಾರ್ಮಿಕರನ್ನು ಚಚ್ಚಿದ ಗುರ್‌ಗಾವ್ ಪೊಲೀಸರ ದುರ್ವರ್ತನೆ ಈ ಗಂಡನ ದುರ್ವರ್ತನೆಗಿಂತ ಏನೂ ಭಿನ್ನವಾಗಿಲ್ಲ. ಇತ್ತೀಚೆಗೆ, ಕೇರಳದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಸುಲಿಗೆಕೋರ ನೀತಿಯನ್ನು ಪ್ರತಿಭಟಿಸಿದ ವಿದ್ಯಾರ್ಥಿ- ಯುವಜನರ ಮೇಲೆ ಎಗ್ಗಿಲ್ಲದೇ ಮಾರಣಾಂತಿಕವಾಗಿ ಚಚ್ಚಿದ ಪೊಲೀಸರ ದುಂಡಾವರ್ತನೆ ಹೇಗೆ ಭಿನ್ನವಾದೀತು?

ಹಿಂದೆ ಬ್ರಿಟಿಷ್ ವಸಾಹತುಶಾಹಿಗಳ, ನಂತರ ಭಾರತದ ಆಳುವವರ್ಗಗಳಿಂದ ಕುಲುಮೆಯಲ್ಲಿ ಸಿದ್ಧಗೊಂಡ ಪೊಲೀಸ್ ವ್ಯವಸ್ಥೆಯನ್ನು 'ಆಧುನಿಕ ಭಾರತದ' 'ಪ್ರಗತಿ'ಗನುಗುಣವಾಗಿ ಆಧುನೀಕರಿಸಲಾಗುತ್ತಿದೆ. ಕಾರ್ಪೊರೇಟ್ ಕಂಪನಿಗಳ ಹಿತಾನುಭವದಂತೆ ಜನಚಳುವಳಿ ದಮನಿಸಲು, ವಿಶೇಷ ತರಬೇತಿಯನ್ನು ಅಮೇರಿಕಾ ಜನ ಚಳುವಳಿಗಳನ್ನು ಇಸ್ರೇಲ್, ಸ್ಕಾಟ್‌ಲ್ಯಾಂಡ್‌ಗಳಲ್ಲಿ ತರಬೇತಿ ನೀಡಲಾಗುತ್ತಿದೆ. ದಮನಕಾಂಡದ 'ಬೃಹ್ಮಾಂಡ' ಯೋಜನೆಯಲ್ಲಿ ಇತ್ತೀಚಿನ ಘಟನೆಗಳು ಕೇವಲ ಪ್ರಯೋಗಾತ್ಮಕವಷ್ಟೆ.

ಭಾರತ ಇನ್ನು ಮುಂದೆ ಇಂತಹ ಅತಿರೇಕಗಳನ್ನು ಹೆಚ್ಚೆಚ್ಚು ಕಾಣುತ್ತದೆ. ಪೊಲೀಸರು ಕಾರ್ಪೊರೇಟ್ ಕ್ರೌರ್ಯದ ಹೊಸ ಮುಖವಾಡವಾಗಿ ಹೊರಹೊಮ್ಮುತ್ತಿದ್ದಾರೆ. ಕೋಮುವಾದ, ಭಯೋತ್ಪಾದನೆ, ನಕ್ಸಲ್ ಹಿಂಸೆಗೆ ಹೊಸ ಸೇರ್ಪಡೆ ಪೊಲೀಸರ ಈ ಕ್ರೌರ್ಯಗಳು.

■ ಕೆ.ಎಸ್. ರವಿಕುಮಾರ್
ಹಾಸನ

ಅಂಕಿ ಸಂಖ್ಯೆ

ಸಾಮ್ರಾಜ್ಯಶಾಹಿಯ ಉದಾರ ನೀತಿ!

- ಕ್ಯೂಬಾದಲ್ಲಿ ಸುಂಟರಗಾಳಿ ಬಡಿದಾಗ ಅಮೆರಿಕಾ ಸೂಚಿಸಿದ ಸಹಾಯಧನ - 50,000 ಡಾಲರುಗಳು
- ರೇಡಿಯೋ ಮತ್ತು ಟಿ.ವಿ. ಮೂಲಕ ಕ್ಯೂಬಾದ ಕಮ್ಯುನಿಸ್ಟ್ ಸರ್ಕಾರದ ವಿರುದ್ಧ ಅಪಪ್ರಚಾರ ನಡೆಸಲು ಬುಶ್ ಬೆಂಬಲದ ಕಾನೂನು ತಜ್ಞರು ಮಂಡಿಸಿದ ಮಸೂದೆ ಪ್ರಕಾರ ಕೋರಿದ ಸಹಾಯ ಧನ - 2006 ಕ್ಕೆ - 37931,000 ಡಾಲರುಗಳು, 2007 ಕ್ಕೆ - 29931,000 ಡಾಲರುಗಳು.

(ಸುಂಟರಗಾಳಿ ಬಡಿದಾಗ ಸೂಚಿಸಿದ ಧನ ಸಹಾಯಕ್ಕಿಂತ ಕ್ಯೂಬಾ ವಿರುದ್ಧ ಪ್ರಚಾರ ನಡೆಸಲು ಮಂಜೂರು ಮಾಡಲು ಕೋರಿದ ಹಣ 1357 ಪಟ್ಟು ಜಾಸ್ತಿ!)

ತಲ್ಲಣಗೊಂಡ ರಾಜ್ಯದ ರಾಜಕೀಯ

ಈಗ ರಾಜ್ಯ ರಾಜಕೀಯ ಪಕ್ಷಗಳಲ್ಲಿ ತಳಮಳ ಉಂಟಾಗಿದೆ. ಪ್ರಮುಖವಾಗಿ ಜನತಾದಳ(ಜಾತ್ಯತೀತ) ಪಕ್ಷದಲ್ಲಿ ದೇವೇಗೌಡ ಮತ್ತು ಸಿದ್ದರಾಮಯ್ಯನವರ ನಡುವೆ ಎದ್ದಿದ್ದ ಭಿನ್ನಾಭಿಪ್ರಾಯ ಸಿದ್ದರಾಮಯ್ಯನವರನ್ನು ಶಾಸಕಾಂಗ ಪಕ್ಷದ ನಾಯಕತ್ವ ಮತ್ತು ಉಪಮುಖ್ಯಮಂತ್ರಿ ಸ್ಥಾನದಿಂದ ಪಲ್ಲಟಗೊಳಿಸುವ ಮುಖಾಂತರ ನಿರ್ಣಾಯಕ ಹಂತ ತಲುಪಿದೆ. ಕರ್ನಾಟಕದಲ್ಲಿ ಕೋಮುವಾದಿ ಬಿಜೆಪಿಗೆ ಪರ್ಯಾಯ ಶಕ್ತಿಯಾಗಿ ಮೂಡಿಬಂದಿದ್ದ ಜನತಾದಳ(ಎಸ್) ನ ಈ ಬೆಳವಣಿಗೆ ಮತ್ತೆ ಬಿಜೆಪಿ ತಲೆ ಎತ್ತುವ ಅವಕಾಶ ಕಲ್ಪಿಸದಂತೆ ನೋಡಿಕೊಳ್ಳುವ ಜವಾಬ್ದಾರಿ ಜೆಡಿ(ಎಸ್) ಮೇಲಿದೆ. ರಾಜ್ಯದ ಸಮ್ಮಿಶ್ರ ಸರ್ಕಾರದ ಅಸ್ತಿತ್ವಕ್ಕೆ ಧಕ್ಕೆ ಆಗದಂತೆ ನೋಡಿಕೊಳ್ಳುವುದೂ ಕೂಡ ಜೆಡಿ(ಎಸ್)ನ ಜವಾಬ್ದಾರಿ ಎಂಬುದು ಜಾತ್ಯತೀತ ಜನತೆಯ ಆಶಯ.

ಮಾಜಿ ಪ್ರಧಾನಿ ಎಚ್.ಡಿ.ದೇವೆಗೌಡರ ಮತ್ತು ಉಪ ಮುಖ್ಯಮಂತ್ರಿ ಸಿದ್ಧರಾಮಯ್ಯನವರ ನಡುವೆ ನಡೆಯುತ್ತಿದ್ದ ಗುದ್ದಾಟವು ಸಿದ್ಧರಾಮಯ್ಯನವರನ್ನು ಜೆಡಿ(ಎಸ್) ಶಾಸಕಾಂಗ ಪಕ್ಷದ ನಾಯಕತ್ವದಿಂದ ಉಚ್ಚಾಟಿಸುವುದರಲ್ಲಿ ಪ್ರರ್ಯಾವಸಾನಗೊಂಡಿದೆ. ಸಿದ್ಧರಾಮಯ್ಯನವರೊಂದಿಗೆ ಡಾ|| ಎಚ್.ಸಿ.ಮಹದೇವಪ್ಪ ಮತ್ತು ಸತೀಶ್ ಜಾರಕಿಹೊಳಿ ಅವರನ್ನು ರಾಜ್ಯ ಸಚಿವ ಸಂಪುಟದಿಂದ ಕೈ ಬಿಡಲಾಗಿದೆ. ಇದರಿಂದಾಗಿ ರಾಜ್ಯದ ರಾಜಕೀಯದಲ್ಲಿ ಮಹತ್ತರವಾದ ಬದಲಾವಣೆಗಳಗುವುದೇನೋ ನಿಜ. ಆದರೆ ಇದರಿಂದಾಗಿ ರಾಜ್ಯದ ಜನತೆಯ ಹಿತರಕ್ಷಣೆಯಾಗಲಿದೆ ಎಂದೇನು ಹೇಳಲಾಗದು.

ಜಾತ್ಯಾತೀತ ಜನತಾದಳದ ನಾಯಕರಾದ ದೇವೇಗೌಡರು ಮತ್ತು ಸಿದ್ಧರಾಮಯ್ಯನವರು ಕಳೆದ ಸುಮಾರು ಒಂದೂವರೆ ದಶಕದಿಂದ ಜೊತೆಗೂಡಿ ಬಂದವರಾಗಿದ್ದರೂ ಅವರ ನಡುವೆ ಇದ್ದ ಅಭಿಪ್ರಾಯಗಳ ವೆತ್ಯಾಸ ಗುಟ್ಟಿನ ವಿಷಯವೇನೂ ಆಗಿರಲಿಲ್ಲ. ಕಳೆದ ವಿಧಾನ ಸಭಾ ಚುನಾವಣೆಗಳ ನಂತರ ಅಸ್ತಿತ್ವಕ್ಕೆ ಬಂದ ಕಾಂಗ್ರೇಸ್- ಜೆಡಿ(ಎಸ್) ಸಮ್ಮಿಶ್ರ ಸರ್ಕಾರದಲ್ಲಿ ಉಪಮುಖ್ಯಮಂತ್ರಿ ಸ್ಥಾನದೊಂದಿಗೆ ಹಣಕಾಸು ಖಾತೆಯನ್ನು ದೊರಕಿಸಿಕೊಂಡು ಸಮ್ಮಿಶ್ರ ಸರ್ಕಾರದ ಪ್ರಥಮ ಬಜೆಟ್ ಮಂಡಿಸುವುದರೊಂದಿಗೆ ಸಿದ್ಧರಾಮಯ್ಯನವರು ರಾಜ್ಯದ ಗಮನ ಸೆಳೆಯುವುದರೊಂದಿಗೆ ದೇವೇಗೌಡರ ಅಸಹನೆ ಬಯಲಿಗೆ ಬರಲಾರಂಬಿಸಿತು. ಸಿದ್ಧರಾಮಯ್ಯನವರನ್ನು ಕಡೆಗಣಿಸಲಾರಂಭಿಸಲಾಯಿತು, ಅವರನ್ನು ಕನ್‌ಸಲ್ಟ್ ಮಾಡುವುದನ್ನು ಕೈಬಿಡಲಾಯಿತು, ಕನಕಗೋಪುರ ವಿವಾದ ವಿಷಯದಲ್ಲಿ ಸಿದ್ಧರಾಮಯ್ಯನವರ ಅಭಿಪ್ರಾಯಕ್ಕೆ ದೇವೆಗೌಡರ ಬೆಂಬಲ ದೊರೆಯಲಿಲ್ಲ. ಸಿದ್ಧರಾಮಯ್ಯನವರ ಮತ್ತು ಅವರ ಗುಂಪಿನವರೆಂದು ಗುರುತಿಸಲ್ಪಡುತ್ತಿದ್ದವರ ವಿರೋಧಿಗಳನ್ನು ಪಕ್ಷಕ್ಕೆ ಸೇರಿಸಿಕೊಳ್ಳಲಾಯಿತು. ಸಿದ್ಧರಾಮಯ್ಯನವರಿಗೆ ಪರ್ಯಾಯವಾಗಿ ಇನ್ನೊಬ್ಬ ಕುರುಬ ಮುಖಂಡನನ್ನು ಮುಂದೆ ತರುವ ಪ್ರಯತ್ನವನ್ನೂ ಆರಂಭಿಸಲಾಯಿತು.

ಹುಬ್ಬಳ್ಳಿಯಲ್ಲಿ ನಡೆದ ಅಹಿಂದ ಸಮಾವೇಶದಲ್ಲಿ ಭಾಗವಹಿಸುವ ಬಗ್ಗೆ ಕೊನೆಯವರೆಗೆ ಸುಮ್ಮನಿದ್ದು, ಕೊನೆಯಗಳಿಗೆಯಲ್ಲಿ ಸಿದ್ಧರಾಮಯ್ಯ ಅದರಲ್ಲಿ ಪಾಲ್ಗೊಳ್ಳಬಾರದೆಂದು ದೇವೇಗೌಡರು ಆರ್ಡರ್ ಮಾಡಿದ್ದು ಪಕ್ಷದ ಶಿಸ್ತು ಉಲ್ಲಂಘನೆಗೆ ಅವರನ್ನು ತಳ್ಳುವುದೇ ಉದ್ದೇಶವಾಗಿತ್ತು ಎನ್ನುವಂತೆ ಕಾಣುತ್ತದೆ.



ಸಿದ್ಧರಾಮಯ್ಯನವರಾದರೂ ದೇವೇಗೌಡರ ತಾಕೀತನ್ನು ಮೀರಿ ಹುಬ್ಬಳ್ಳಿ ಸಮಾವೇಶದಲ್ಲಿ ಏಕೆ ಭಾಗವಹಿಸಿದರು ಎಂಬ ಬಗ್ಗೆ ಅನೇಕ ರೀತಿಯ ಜಿಜ್ಞಾಸೆ ನಡೆಯುತ್ತಿದೆ. ಸಿದ್ದರಾಮಯ್ಯನವರು ದುಡುಕಿದ್ದಾರೆ ಎಂಬ ಮಾತೂ ಕೇಳಿಬರುವಂತಾಗಿದೆ.

ಜೆಡಿ(ಎಸ್) ನಲ್ಲಿಯೂ ಉಳಿಯದೆ ಕಾಂಗ್ರೆಸ್ಸಿಗೂ ಹೋಗಲಾಗದೆ ಸಿದ್ದರಾಮಯ್ಯನವರು ಭಿನ್ನವಾದ ದಾರಿಯನ್ನು ತುಳಿಯಲು ಹೊರಟಿರಬಹುದೇ? ಹಿಂದುಳಿದ ಜನ ವಿಭಾಗಗಳನ್ನು ಒಂದುಗೂಡಿಸಿ ಲಾಲು ಪ್ರಸಾದ್ ಯಾದವ್ ಮಾದರಿಯಲ್ಲಿ ಮುನ್ನಡೆಯುವ ಕನಸು ಕಾಣುತ್ತಿರಬಹುದೇ? ಅವರ ಅಕಾಲಿಕ ಪದಚ್ಯುತಿಯನ್ನು ರಾಜ್ಯದ ಹಿಂದುಳಿದ ಜನ ವಿಭಾಗಗಳು ಗಂಭೀರವಾಗಿ ಪರಿಗಣಿಸಿದಂತೆ ಕಾಣುತ್ತದೆ. ಆದರೆ ಹೊಸಕೋಟೆ ಮೊದಲಾದ ಕಡೆ ಅಹಿಂದ ಕಾರ್ಯಕರ್ತರಿಂದ ನಡೆಯಿತೆನ್ನಲಾದ ಹಿಂಸಾಚಾರದ ಹಿಂದೆ ಕಾಂಗ್ರೆಸ್ಸಿನಲ್ಲಿರುವ ಹಿಂದುಳಿದ ಜಾತಿ ಮುಖಂಡರ ಕೈವಾಡವಿದ್ದರೂ ಆಶ್ಚರ್ಯವೇನಿಲ್ಲ. ಇದುವರೆಗೆ ಸ್ವಚ್ಛ ರಾಜಕೀಯ ಇಮೇಜ್ ಹೊಂದಿರುವ ಸಿದ್ಧರಾಮಯ್ಯನವರು ರಾಜ್ಯದಲ್ಲಿ ಜಾತಿರಾಜಕೀಯವನ್ನು ಬಲಪಡಿಸುವತ್ತ ಹೆಜ್ಜೆ ಇಡುತ್ತಿದ್ದರೆ ಅದು ರಾಜ್ಯದ ಜನತೆಯ ಹಿತಕ್ಕೆ ಮಾರಕವಾಗಲಿದೆ ಎಂದೇ ಹೇಳಬೇಕಾಗುತ್ತದೆ.

ಇದಕ್ಕೆ ಪ್ರತಿಯಾಗಿ ಜಾತ್ಯತೀತ ಜನತಾದಳದ ಮುಖಂಡರಾದ ದೇವೇಗೌಡರು ಸಹ ಜಾತಿ ರಾಜಕೀಯಕ್ಕೆ ಜೋತುಬೀಳಲು ಹೊರಟಿದ್ದಾರೆ ಎಂಬಂತೆ ಕಾಣುತ್ತಿದೆ. ಒಕ್ಕಲಿಗರ ನಡುವೆ ತಮ್ಮ ಹಿಡಿತವನ್ನು ಬಲಪಡಿಸಲು ಆದ್ಯತೆ ನೀಡುತ್ತಿದ್ದಂತೆ ಈಗ ಎಂ.ಪಿ.ಪ್ರಕಾಶ್ ಅವರಿಗೆ ಉಪಮುಖ್ಯಮಂತ್ರಿ ಪಟ್ಟ ಕಟ್ಟುವ ಮೂಲಕ, ಎಂ.ವಿ.ರಾಜಶೇಖರಮೂರ್ತಿ ಅವರನ್ನು ಸೆಳೆಯಲು ಪ್ರಯತ್ನ ಮಾಡುವ ಮೂಲಕ ಮತ್ತೆ ಈಗ ಯಡಿಯೂರಪ್ಪನವರಿಗೆ ಆಮಿಷ ಒಡ್ಡುವ ಮೂಲಕ ರಾಜ್ಯದ ಲಿಂಗಾಯತ ಸಮುದಾಯಕ್ಕೆ ನೀಡುತ್ತಿರುವ ಸಂದೇಶ ಸ್ಪಷ್ಟವಾಗಿಯೇ ಇದೆ. ವ್ಯಕ್ತಿಗತವಾದ ತತ್ತ್ವರಹಿತವಾದ ರಾಜಕೀಯ ಹೇಗೆ ಅದೋಗತಿಗೆ ಇಳಿಯುತ್ತದೆ ಎಂಬುದನ್ನು ದೇವೇಗೌಡರು ಸಹ ಸಾಬೀತು ಮಾಡಲು ಹೊರಟಿದ್ದರೆ ಕರ್ನಾಟಕದ ಜನತೆಯ ಹಿತದೃಷ್ಟಿಯಿಂದ ಅದು ದುರದೃಷ್ಟಕರವಾಗಿದೆ.

ಬದಲಾಗುತ್ತಿರುವ ರಾಜ್ಯದ ರಾಜಕೀಯ ಸನ್ನಿವೇಶವು ಬಿಜೆಪಿಯಲ್ಲಿ ಅಧಿಕಾರದ ಆಸೆ ಚಿಗುರಿಸಿದ್ದು ಆಶ್ಚರ್ಯವೇನಿಲ್ಲ. ಬಿಜೆಪಿಗೆ ಸೇರಿದರೆ ಅಧಿಕಾರ ಸಿಗುತ್ತದೆ ಎಂದು ಬೇರೆ ಪಕ್ಷಗಳಿಂದ ಬಂದು ಚುನಾವಣೆಯಲ್ಲಿ ಕೋಟಿಗಟ್ಟಲೆ ರೂ ಖರ್ಚು ಮಾಡಿ, ಆಯ್ಕೆಯಾದ ಶಾಸಕರಿಗೆ ಹೇಗಾದರೂ ಮಾಡಿ ಅಧಿಕಾರಕ್ಕೆ ಬರಬೇಕೆನ್ನುವ ಬಯಕೆ ತೀವ್ರವಾಗಿದೆ. ಯಾರ ಜೊತೆಯಲ್ಲಾದರೂ ಸೇರಿ ಅಧಿಕಾರಕ್ಕೆ ಬರಲು ಅವರು ತುದಿಗಾಲ ಮೇಲೆ ನಿಂತಿದ್ದಾರೆ. ಇಂತಹ ಸನ್ನಿವೇಶದಲ್ಲಿ ಬಿ.ಎಸ್.ಯಡಿಯೂರಪ್ಪ ಬಿಜೆಪಿಯ ಬಹುತೇಕ ಶಾಸಕರನ್ನು ಕಟ್ಟಿಕೊಂಡು ಜೆಡಿ(ಎಸ್) ಸೇರಲು ಹೊರಟಿರುವುದು ಬಿಜೆಪಿಯಲ್ಲಿ ಭಾರಿ ಕಂಪನವನ್ನು ಉಂಟುಮಾಡಿದೆ. ಯಡಿಯೂರಪ್ಪನವರನ್ನು ವಿರೋಧಿಸುತ್ತಾ ಬಂದಿರುವ ಅನಂತಕುಮಾರ ಹಿಂದೆ ಕೇವಲ ಆರ್‌ಎಸ್‌ಎಸ್ ಗೆ ನಿಷ್ಠೆಯುಳ್ಳ ಕೆಲವೇ ಕೆಲವು ಶಾಸಕರು ಉಳಿದಿರುವುದು ಬಿಜೆಪಿಯ ಆತಂಕವನ್ನು ತೀವ್ರಗೊಳಿಸಿದೆ. ಇದರೊಂದಿಗೆ 'ಭಾರಿ ತತ್ವಬದ್ಧ ಪಕ್ಷ' ಎಂದುಕೊಳ್ಳುತ್ತಿದ್ದ ಭಾರತೀಯ ಜನತಾಪಕ್ಷದ ಹೂರಣ ಹೊರಬಿದ್ದಿದೆ. ಮುಂದಿನ ಚುನಾವಣೆಯಲ್ಲಿ ಬಿಜೆಪಿಯಿಂದ ಗೆಲ್ಲಲು ಸಾಧ್ಯವಿಲ್ಲ ಎಂದು ಮನವರಿಕೆಯಾಗಿರುವ ಬಿಜೆಪಿ ಶಾಸಕರಿಗೆ ಈ ಬೆಳವಣಿಗೆಗಳು ಹಗಲು ಕನಸು ಕಾಣುವಂತೆ ಮಾಡಿದ್ದು ಆಶ್ಚರ್ಯದ ಸಂಗತಿಯಲ್ಲ.

ಪರಿಸ್ಥಿತಿ ಗಳಿಗೆಯಿಂದ ಗಳಿಗೆಗೆ ಬದಲಾಗುತ್ತಿದೆ. ಸಚಿವ ಸಂಪುಟವನ್ನು ಪುನರ್ರಚಿಸುವ ಪ್ರಕ್ರಿಯೆ ಆರಂಭವಾದಾಗ ರಾಜ್ಯ ಸಮ್ಮಿಶ್ರ ಸರ್ಕಾರದ ಪರಿಸ್ಥಿತಿ ಗಂಭೀರವಾಗಲಿದೆ. ಮಂತ್ರಿ ಪದವಿಗೆ ಆಕಾಂಕ್ಷಿಗಳಾಗಿದ್ದು ಅದನ್ನು ಗಿಟ್ಟಿಸಿಕೊಳ್ಳಲಾಗದ ಕಾಂಗ್ರೆಸ್ ಶಾಸಕರು ಯಾವ ತೀರ್ಮಾನ ಕೈಗೊಳ್ಳುತ್ತಾರೆ ಎಂಬುದು ಮುಖ್ಯವಾಗಲಿದೆ. ಏನಿದ್ದರೂ ಈ ಎಲ್ಲಾ ಬೆಳವಣಿಗೆಗಳಲ್ಲಿ ರಾಜ್ಯದ ಜನತೆಯ ಹಿತ ಕಡೆಗಣಿಸಲ್ಪಡುತ್ತಿದೆ ಎಂಬುದೇ ಆತಂಕದ ವಿಷಯವಾಗಿದೆ.

■ ನಿತ್ಯಾನಂದ ಸ್ವಾಮಿ

ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟದ 13ನೇ ರಾಷ್ಟ್ರೀಯ ಸಮ್ಮೇಳನ

ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟದ 12ನೇ ರಾಷ್ಟ್ರೀಯ ಸಮ್ಮೇಳನವು 29 ಡಿಸೆಂಬರ್ 2005ರಿಂದ 1 ಜನವರಿ 2006ರವರೆಗೆ ಕೋಲ್ಕತ್ತಾದಲ್ಲಿ ನಡೆಯಲಿದೆ. ಈ ಸಮ್ಮೇಳನದಲ್ಲಿ ವಿವಿಧ ರಾಜ್ಯಗಳ ಸಂಯೋಜಿತ ಸಂಘಟನೆಗಳ ಸುಮಾರು 2,000 ಪ್ರತಿನಿಧಿಗಳು ಮತ್ತು ವೀಕ್ಷಕರು ಭಾಗವಹಿಸಲಿರುವರು. ಸಮ್ಮೇಳನದ ಭಾಗವಾಗಿ ಮಹಿಳಾ ಅಧಿವೇಶನವೂ ನಡೆಯಲಿರುವುದರಿಂದ ಪ್ರತಿಯೊಂದು ರಾಜ್ಯ ಸಂಘಟನೆಯಿಂದಲೂ ಕನಿಷ್ಠ ಶೇಕಡಾ 15ರಷ್ಟು ಮಹಿಳಾ ಪ್ರತಿನಿಧಿ-ವೀಕ್ಷಕರು ಭಾಗವಹಿಸತಕ್ಕದೆಂದು ತೀರ್ಮಾನಿಸಲಾಗಿದೆ.

ಪಶ್ಚಿಮ ಬಂಗಾಳ ಸರಕಾರಿ ನೌಕರರ ಸಂಘಟನೆಗಳ ಸಮನ್ವಯ ಸಮಿತಿಯ ಸುವರ್ಣ ಮಹೋತ್ಸವದ ಅಂಗವಾಗಿ 28 ಡಿಸೆಂಬರ್ 2005ರಂದು ಕೋಲ್ಕತ್ತಾದಲ್ಲಿ ಬೃಹತ್ ರ್‍ಯಾಲಿಯನ್ನು ಏರ್ಪಡಿಸಲಾಗಿದ್ದು, ಒಕ್ಕೂಟದ ರಾಷ್ಟ್ರೀಯ ಸಮ್ಮೇಳನದ ಪ್ರತಿನಿಧಿಗಳು ಈ ರ್‍ಯಾಲಿಯಲ್ಲಿ ಭಾಗವಹಿಸಲು ಅನುಕೂಲವಾಗುವಂತೆ 28 ಡಿಸೆಂಬರ್ 2005ರಂದು ಬೆಳಗ್ಗೆ ಕೋಲ್ಕತ್ತಾ ತಲುಪುವಂತೆ ಕೋರಲಾಗಿದೆ.

ಸಮ್ಮೇಳನದಲ್ಲಿ ಭಾಗವಹಿಸುವ ಪ್ರತಿನಿಧಿಗಳು ಮತ್ತು ವೀಕ್ಷಕರನ್ನು ಕಡ್ಡಾಯವಾಗಿ 'ಎಂಪ್ಲಾಯೀಸ್ ಫೋರಮ್' ಪತ್ರಿಕೆಗೆ ಚಂದಾದಾರನ್ನಾಗಿ ಮಾಡಿರಬೇಕು. ಅಲ್ಲದೇ ಎಐಎಸ್‌ಜಿಇಎಫ್‌ನ ಸಂಘಟನಾ ನಿಧಿಗೆ ಐದು ರೂಪಾಯಿ ಪಾವತಿಸಬೇಕು ಹಾಗೂ ಇತರ ನೌಕರರಿಂದ ನಿಧಿ ಸಂಗ್ರಹಿಸಬೇಕೆಂದು ಸೂಚಿಸಲಾಗಿದೆ.

ಇದು ರಾಷ್ಟ್ರಮಟ್ಟದ ಸಂಘಟನೆಯ ಮಹತ್ವದ ಕೆಲಸವಾಗಿರುವುದರಿಂದ ಎಲ್ಲಾ ರಾಜ್ಯ ಸಂಘಟನೆಗಳು ಸಮ್ಮೇಳನದ ಪ್ರತಿನಿಧಿಗಳನ್ನು ಆಯ್ಕೆ ಮಾಡುವಾಗ ಈ ಅಂಶಗಳ ಕುರಿತು ಗಮನ ಹರಿಸುವಂತೆ ಕೋರಲಾಗಿದೆ.

ನೈಸ್ ಕಂಪನಿ ಹಾಗೂ ಭೂಗಳ್ಳರಿಂದ ಭೂಮಿ ಕಬಳಿಕೆ ವಿರುದ್ಧ ಬೃಹತ್ ಸಮಾವೇಶ

ನಿವೇಶನರಹಿತರ ಹೋರಾಟಕ್ಕೆ ನಿರ್ಧಾರ

ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ನೀತಿಗಳು ನಮ್ಮ ದೇಶದ ಜನರನ್ನು, ದೇಶವನ್ನು ದಿವಾಳಿಗೆ ದೂಡುತ್ತಿವೆ. ಹಿಂದಿನ ಕಾಂಗ್ರೆಸ್ ಸರ್ಕಾರದ 'ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್' ಯೋಜನೆಯಿಂದ ರಾಜ್ಯದಲ್ಲಿರುವ ರೈತರು ಭೂಮಿಯನ್ನು ಕಳೆದುಕೊಂಡು ಬೀದಿ ಪಾಲಾಗುತ್ತಿದ್ದಾರೆ. ಬೆಳೆದ ಬೆಳೆಗೆ ಬೆಂಬಲ ಬೆಲೆಯಿಲ್ಲದೆ, ಬರಗಾಲದಂತಹ ಸಂದರ್ಭದಲ್ಲಿ ಅನಿವಾರ್ಯವಾಗಿ ಭೂಮಿಯನ್ನು ಮಾರುವಂತಹ ಪರಿಸ್ಥಿತಿ ರೈತರಿಗೆ ಬಂದಿರುವ ಹಿನ್ನೆಲೆಯಲ್ಲಿ ಕಡಿಮೆ ಹಣಕ್ಕೆ ಭೂಮಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಈ ಭೂಮಿಯನ್ನು ಬಂಡವಾಳಗಾರ ಶ್ರೀಮಂತರು ಕೊಂಡು ಲಕ್ಷಾಂತರ ರೂಪಾಯಿಗಳಿಗೆ ಮಾರಾಟ ಮಾಡುತ್ತಿದ್ದಾರೆ. ಡಿ.ಕೆ.ಶಿವಕುಮಾರ್, ಬಾಲಗಂಗಾಧ ಸ್ವಾಮೀಜಿ, ಎಂ.ಶ್ರೀನಿವಾಸ್ ರಂತಹವರು, ಶಿವಪುರ ಸ್ವಾಮೀಜಿಯಂತಹವರು, ಬಹುರಾಷ್ಟ್ರೀಯ ಕಂಪನಿಗಳು ಭೂ ಕಬಳಿಕೆ ಮಾಡುತ್ತಿದ್ದಾರೆ. ಬೆಂಗಳೂರು ದಕ್ಷಿಣ ತಾಲ್ಲೂಕಿನ ಕಂಬಿಪುರ ಗ್ರಾಮದಲ್ಲಿ 45 ಎಕರೆ ಭೂಮಿ ಬಾಲಗಂಗಾಧರ ಸ್ವಾಮೀಜಿಗೆ ಮಂಜೂರಾಗಿದೆ. ಕೆಂಗೇರಿ ಹೋಬಳಿ, ಅಗರ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಬಿ.ಎಂ.ಕಾವಲ್ ಪ್ರದೇಶದ ಸರ್ವೆ ನಂ. 4 ರಲ್ಲಿ 84 ಎಕರೆ ಸರ್ಕಾರಿ ಜಾಗ ಇದ್ದು 33 ಎಕರೆ ಭೂಮಿಯನ್ನು ಕೆಡಿಬಿ ಮೂಲಕ ನೈಸ್ ಕಂಪೆನಿಗೆ ಕಡಿಮೆ ಬೆಲೆಗೆ ಮಾರಾಟ ಮಾಡಿದೆ. ಇನ್ನುಳಿದ ಸ್ವಲ್ಪ ಭೂಮಿಯ ಭಾಗದಲ್ಲಿ ಸಾವಿರಾರು ನಿವೇಶನ



ರಹಿತರು ಗುಡಿಸಲುಗಳನ್ನು ಹಾಕಿ ಜೀವನ ಸಾಗಿಸುತ್ತಿದ್ದಾರೆ. ನೈಸ್ ಕಂಪೆನಿಯು ಇಡೀ ಒಟ್ಟು ಭೂಮಿಯನ್ನು ಕಬಳಿಸಲು ಹೊಂಚು ಹಾಕುತ್ತಿದೆ. ಪೋಲೀಸ್ ಇಲಾಖೆ ನೈಸ್ ಕಂಪೆನಿಯ ಪರವಾಗಿ ಜನರನ್ನು ಒಕ್ಕಲೆಬ್ಬಿಸಲು ಪ್ರಯತ್ನಿಸುತ್ತಿದೆ.

ಸರ್ಕಾರದ ಬಹುರಾಷ್ಟ್ರೀಯ ಕಂಪೆನಿಗಳ ಗಮನ ಸೆಳೆಯಲು ದಿನಂಕ 30.07.05ರಂದು ಆ ಪ್ರದೇಶದಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ಪ್ರಾಂತ ರೈತ ಸಂಘಟನೆ ಜಂಟಿಯಾಗಿ ಸಮಾವೇಶವನ್ನು ಸಂಯೋಜಿಸಿದ್ದವು. ಈ ಸಮಾವೇಶದಲ್ಲಿ ಸುಮಾರು 1500 ಜನ ನಿರಾಶ್ರಿತರು ಪಾಲ್ಗೊಂಡಿದ್ದರು. ಸಮಾವೇಶವನ್ನು ಉದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ಜಿಲ್ಲಾ ಅಧ್ಯಕ್ಷರಾದ ಎನ್.ವೆಂಕಟಾ ಚಲಯ್ಯ ಮಾತನಾಡಿದರು. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಲಕ್ಷ್ಮಿ, ಜಿಲ್ಲಾ ಉಪಾಧ್ಯಕ್ಷರಾದ .ಯಶೋಧ ಮತನಾಡಿದರು. ಆಟೋ ಚಾಲಕ ಸಂಘಟನೆಯ ಪುಟ್ಟಲಿಂಗಯ್ಯ ಹಾಗೂ ತಾಲ್ಲೂಕಿನ ಮುಖಂಡರುಗಳು ಡಿವೈಎಫ್‌ಐನ ಧನರಾಜ್ ಪಾಲ್ಗೊಂಡಿದ್ದರು. ಸಮಾವೇಶ ಯಶಸ್ವಿಯಾಗಿದೆ.

ಸಮಾವೇಶದಲ್ಲಿ 50 ಜನರ ಒಂದು ಸಮಿತಿ ರಚನೆಯಾಗಿದೆ. ಅಧ್ಯಕ್ಷರಾಗಿ ಕಾಂ. ವೆಂಕಟಾ ಚಲಯ್ಯ, ಸಂಚಾಲಕರಾಗಿ ಕಾಂ. ಯಶೋಧ ಖಜಾಂಚಿಯಾಗಿ ಶಿವಲಿಂಗಯ್ಯ ಆಯ್ಕೆಯಾಗಿರುತ್ತಾರೆ.

ಮುಂದುವರಿದ ಹೋರಾಟ

5.8.2005ರಂದು ಟೌನ್‌ಹಾಲ್ ನಿಂದ ಮೆರವಣಿಗೆ ಹೊರಟು ಜಿಲ್ಲಾಧಿಕಾರಿಯವರಿಗೆ ಮನವಿ ನೀಡಲಾಯಿತು. ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಬಾಗೇಪಲ್ಲಿ ಶಾಸಕ, ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿಸದಸ್ಯರಾದ ಜಿ.ವಿ. ಶ್ರೀರಾಮರೆಡ್ಡಿಯವರು 'ನೈಸ್ ಕಂಪನಿಯವರು ಸರ್ಕಾರದಿಂದ ಪಡೆದಿರುವ ಭೂಮಿಯ ಒಟ್ಟು ರಿಜಿಸ್ಟ್ರೇಷನ್ ಶುಲ್ಕ 570ಕೋಟಿ. ಆದರೆ ಸರ್ಕಾರ ಈ ಶುಲ್ಕವನ್ನೇ ಮನ್ನಾ ಮಾಡಿದೆ. ಇತ್ತ ರೈತರಿಂದ ಕಡಿಮೆ ಬೆಲೆಯಲ್ಲಿ ಅಗತ್ಯಕ್ಕಿಂತ ಹೆಚ್ಚು ಭೂಮಿಯನ್ನು ಕಿತ್ತು ನೈಸ್ ಕಂಪನಿಗೆ ಅತಿ ಕಡಿಮೆ ಬೆಲೆಗೆ ನೀಡಿದೆ. ಮೈಸೂರು ಕಾರಿಡಾರ್ ಯೋಜನೆಗೆ ಅಗತ್ಯವಿರುವ ಭೂಮಿ 9000 ಎಕರೆಯಾದರೆ, ಸರ್ಕಾರ ರೈತರಿಂದ ವಶಪಡಿಸಿ ಕೊಂಡದ್ದು 29,000 ಎಕರೆ. ಸರ್ಕಾರದ ಈ ಸಂಚಿನ ವಿರುದ್ಧ ಕಳೆದ ಒಂದು ವರ್ಷದಿಂದ ಅಧಿವೇಶನದಲ್ಲಿ ಹೋರಾಡುತ್ತಿದ್ದು, ಇಂದು ಜನತೆಯೊಂದಿಗೆ ಹೋರಾಡುತ್ತಿದ್ದೇನೆ ಎಂದರು. ನಂತರ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿಯವರು, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಕೆ.ಎಸ್. ವಿಮಲಾ, ಕಾರ್ಮಿಕ ಮುಖಂಡರಾದ ಕೆ.ಪ್ರಕಾಶ್, ಜೆಎಂಎಸ್ ನ ಗೌರಮ್ಮ ಕೆಪಿಆರ್‌ಎಸ್ ನ ಜಿಲ್ಲಾ ಕಾರ್ಯದರ್ಶಿ ಮನೋಹರ್ ರವರು ಮಾತನಾಡಿದರು. ಮನವಿ ಪತ್ರ ಸ್ವೀಕರಿಸಲು ಬಂದ ವಿಶೇಷ ಜಿಲ್ಲಾಧಿಕಾರಿಗಳು 'ಈಕೂಡಲೇ ಒಟ್ಟು ಭೂಮಿಯ ಸರ್ವೆ ಮಾಡಿ ನೈಸ್ ಕಂಪನಿ ಒತ್ತುವರಿ ಮಾಡಿರುವ ಹೆಚ್ಚುವರಿ ಭೂಮಿಯನ್ನು ನಿವೇಶನ ರಹಿತರಿಗೆ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಪ್ರತಿಭಟನೆಯ ನೇತೃತ್ವವನ್ನು ನಿವೇಶನ ರಹಿತರ ಹೋರಾಟ ಸಮಿತಿಯ ಮುಖಂಡರಾದ ವೆಂಕಟಾಚಲಯ್ಯ, ಯಶೋಧಮ್ಮ ಮುಂತಾದವರು ವಹಿಸಿದ್ದರು.

- ಯಶೋಧ ವಿ.ಎನ್.
ಕೆ.ಎಸ್.ಲಕ್ಷ್ಮಿ

ಕಂಪನಿ-ಸರ್ಕಾರದ ತಾತ್ಸಾರ - ಔಷಧ ಪ್ರತಿನಿಧಿಗಳ ಧಿಕ್ಕಾರ

ರಾಮ-ರಾವಣರ ಯುದ್ಧದಲ್ಲಿ ಲಕ್ಷ್ಮಣ ಮೂರ್ಛೆ ಬಿದ್ದಾಗ ಔಷಧ ಸಸ್ಯಗಳ ಸಂಜೀವಿನಿ ಪರ್ವತವನ್ನೇ ಹೊತ್ತು ತಂದನಂತೆ ಆಂಜನೇಯ. ನಮ್ಮ ಸಮಾಜದಲ್ಲಿ ಹೊಸ ಹೊಸ ಔಷಧಗಳನ್ನು ದೇಶದ ಮೂಲೆ ಮೂಲೆ ಹೊತ್ತು ತಲುಪಿಸುವ ನಮ್ಮ ಔಷಧ ಪ್ರತಿನಿಧಿಗಳ ಸಾಹಸವೇನು ಕಮ್ಮಿ ಇಲ್ಲ. ಅಂತಹ ಮಹತ್ಕಾರ್ಯ ಮಾಡುತ್ತಿರುವ ಈ ನೌಕರ ವರ್ಗ ತಮ್ಮ ಮೇಲಿನ ಕಾರ್ಯಭಾರದಿಂದ ಕುಸಿದುಬಿದ್ದರೂ ಕೇಳುವವರಿಲ್ಲ - ಜೀವನ ಭದ್ರತೆಯಿಲ್ಲ. ಔಷಧ ಕಂಪನಿಗಳೂ - ಆಳುವ ಸರ್ಕಾರಗಳೂ ಎರಡೂ ಇವರನ್ನು ನಿರ್ಲಕ್ಷಿಸುತ್ತಿರುವ ಪರಿಯನ್ನು ನೋಡಿದರೆ ಸ್ವಾತಂತ್ರ್ಯ ಪೂರ್ವದ 'ಕಂಪನಿ-ಸರ್ಕಾರ'ದ ನೀತಿಯೇ ನೆನಪಾಗುತ್ತದೆ. ಈ ನೌಕರರ ಹೋರಾಟದ ವರದಿ ಇಲ್ಲಿದೆ.

ಕರ್ನಾಟಕ ರಾಜ್ಯದಲ್ಲಿ ಹಲವಾರು ಔಷಧ ತಯಾರಿಕಾ ಕಂಪನಿಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳ ಮಾರುಕಟ್ಟೆ ವ್ಯವಸ್ಥೆ ಎಲ್ಲೆಡೆ ಹರಡಿದೆ. ದೇಶಾದ್ಯಂತ ಸಾವಿರಾರು ಪ್ರತಿನಿಧಿಗಳು ಈ ಕಂಪನಿಗಳ ಅಡಿ ಕೆಲಸ ಮಾಡುತ್ತಿರುವರು. ಆದರೆ ಈ ಔಷಧ ಪ್ರತಿನಿಧಿಗಳು ಮೂಲಭೂತ ಸೌಲಭ್ಯಗಳಾದ ಕನಿಷ್ಠ ವೇತನ ನೀತಿ, ರಜೆ ಸೌಲಭ್ಯ, ಪ್ರಾವಿಡೆಂಟ್ ಫಂಡ್, ಗ್ರಾಚ್ಯುಯಿಟಿ ಮುಂತಾದವುಗಳಿಂದ ವಂಚಿತರಾಗಿದ್ದಾರೆ. ಈ ಬೇಡಿಕೆಗಳಿಗೋಸ್ಕರ 18 ಜುಲೈ 2005ರಂದು ದೇಶದ ವಿವಿಧ ಭಾಗಗಳಿಂದ ಬಂದು ಸೇರಿದ ಸಾವಿರಾರು ಔಷಧ ಪ್ರತಿನಿಧಿಗಳು ಬೆಂಗಳೂರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಈ ಮೇಲ್ಕಂಡ ಬೇಡಿಕೆಗಳ ಕುರಿತು ರಾಜ್ಯ ಸರಕಾರದ ಗಮನ ಸೆಳೆಯಲು ಸಿಪಿಎಂ ಶಾಸಕರಾದ ಕಾಂ.ಜಿ.ವಿ.ಶ್ರೀರಾಮರೆಡ್ಡಿಯವರ ಸಹಾಯ ಪಡೆಯಲಾಯಿತು. ಔಷಧ ಪ್ರತಿನಿಧಿ ಸಂಘಟನೆಯ ರಾಜ್ಯ ಪದಾಧಿಕಾರಿಗಳು ಹಾಗೂ ಕಾಂ.ಜಿ.ವಿ



ಶ್ರೀರಾಮರೆಡ್ಡಿಯವರೊಂದಿಗೆ ಕಾರ್ಮಿಕ ಸಚಿವರಾದ ತನ್ವೀರ್ ಸೇಠರನ್ನು ಭೇಟಿಯಾಗಿ ಸುದೀರ್ಘ ಚರ್ಚೆ ನಡೆಸಲಾಯಿತು.

18 ಜುಲೈರಂದು ನಡೆದ ಬೆಂಗಳೂರು ಚಲೋ ಕಾರ್ಯಕ್ರಮದ ಅಂಗವಾಗಿ ಬನ್ನಪ್ಪ ಪಾರ್ಕ್‌ನಲ್ಲಿ ಬಹಿರಂಗ ಸಭೆ ನಡೆಸಲಾಯಿತು. ಈ ಬಹಿರಂಗ ಸಭೆಯನ್ನು ಉದ್ದೇಶಿಸಿ ಸಿಐಟಿಯು ಅಖಿಲಭಾರತ ಉಪಾಧ್ಯಕ್ಷರಾದ ಕಾಂ.ವಿ.ಜೆ.ಕೆ ನಾಯರ್ ಹಾಗೂ ರಾಜ್ಯ ಕಾರ್ಯದರ್ಶಿ ಕಾಂ.ಪ್ರಸನ್ನಕುಮಾರ್ ಮಾತನಾಡಿದರು. ಜಿ.ವಿ.ಶ್ರೀರಾಮರೆಡ್ಡಿಯವರು ಕೂಡ ಈ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಶ್ರೀರಾಮರೆಡ್ಡಿ ಹಾಗೂ ಸಿಐಟಿಯುನ ಒತ್ತಡದಿಂದಾಗಿ ಸ್ಥಳಕ್ಕೆ ಆಗಮಿಸಿದ ಕಾರ್ಮಿಕ ಸಚಿವ ತನ್ವೀರ್ ಶೇಠ್‌ರು ಬೇಡಿಕೆ ಪತ್ರವನ್ನು ಸ್ವೀಕರಿಸಿದರು. ಪಶ್ಚಿಮ ಬಂಗಾಳ ರಾಜ್ಯ ಸರಕಾರ ಔಷಧ ಪ್ರತಿನಿಧಿಗಳಿಗೆ ಲಭ್ಯವಾಗುವ ಕಾನೂನು ತಿದ್ದುಪಡಿಯನ್ನು, ಕರ್ನಾಟಕ ರಾಜ್ಯದಲ್ಲಿಯೂ ಕೂಡ ತರುವುದಾಗಿ ಕಾರ್ಮಿಕ ಸಚಿವರು ಭರವಸೆ ನೀಡಿದರು.

ಈ ಕುರಿತು ಔಷಧ ಪ್ರತಿನಿಧಿಗಳ ಪರವಾಗಿ ವಿಧಾನಸಭೆಯಲ್ಲಿ ಶ್ರೀರಾಮರೆಡ್ಡಿಯವರು ವಿಷಯ ಚರ್ಚೆಗೆ ತರುವುದಾಗಿ ತಿಳಿಸಿದರು. ಇದಲ್ಲದೇ ಔಷಧ ತಯಾರಿಕಾ ಕಂಪನಿ ಮಾಲಿಕರು, ಔಷಧ ಪ್ರತಿನಿಧಿ ಸಂಘಟನೆ ಮುಖಂಡರುಗಳು ಹಾಗೂ ರಾಜ್ಯಸರ್ಕಾರಗಳ ತ್ರಿಪಕ್ಷೀಯ ಮಾತುಕತೆಗೆ ವೇದಿಕೆ ರಚನೆಗೆ ಒತ್ತಾಯಿಸುವುದಾಗಿ ತಿಳಿಸಿದರು. ಇದಕ್ಕೆ ಪೂರಕವಾಗಿ ದಾಖಲೆಗಳನ್ನು ಔಷಧ ಪ್ರತಿನಿಧಿ ಸಂಘ ಒದಗಿಸಿದೆ.

ಮುಂಬರುವ ಸೆಪ್ಟೆಂಬರ್ 29ರಂದು ಕಾರ್ಮಿಕ ಸಂಘಟನೆಗಳ ಒಕ್ಕೂಟ ಕರೆಕೊಟ್ಟ ಒಂದು ದಿನದ ಮುಷ್ಕರದಲ್ಲಿ ಔಷಧ ಪ್ರತಿನಿಧಿಗಳು ಭಾಗಿಯಾಗಲಿದ್ದಾರೆ. ಸೆಪ್ಟೆಂಬರ್‌ನಲ್ಲಿ ಕೇಂದ್ರ ಕಾರ್ಮಿಕ ಸಚಿವಾಲಯದ ಎದುರು ಔಷಧ ಪ್ರತಿನಿಧಿ ಫೆಡರೇಷನ್ ಪ್ರತಿಭಟನೆ ಹಮ್ಮಿಕೊಂಡಿದ್ದು ಕೇಂದ್ರ ಕಾರ್ಮಿಕ ಕಾನೂನುಗಳಿಗೆ ಒತ್ತಾಯಿಸಲಾಗುವುದು. ಜನಪರ ಔಷಧ ನೀತಿ ಹಾಗೂ ಬೇಡಿಕೆಗಳ ಕುರಿತು ಡಿಸೆಂಬರ್‌ನಲ್ಲಿ ಔಷಧ ಪ್ರತಿನಿಧಿಗಳು ಮೂರು ದಿನಗಳ ಮುಷ್ಕರಕ್ಕೆ ತಯಾರಿ ನಡೆಸುತ್ತಿದ್ದಾರೆ.

ವಾಜೇಂದ್ರ ಕುಲಕರ್ಣಿ
ಪ್ರಧಾನ ಕಾರ್ಯದರ್ಶಿ, KSMR & SRA

ಮಹಾರಾಣಿ ಕಾಲೇಜಿನಲ್ಲಿ 'ಪ್ರಗತಿ' ತಂಡದ ಪ್ರಚಂಡ ವಿಜಯ

ಬೆಂಗಳೂರಿನ ಪ್ರತಿಷ್ಠಿತ ಮಹಾರಾಣಿ ಕಾಲೇಜಿನ ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಎಸ್ಎಫ್ಐ ಬೆಂಬಲಿತ ತಂಡ ಪ್ರಚಂಡವಾದ ಜಯ ಸಾಧಿಸಿದೆ. ಇದಲ್ಲದೆ ಎಸ್ಎಫ್ಐನ ಬೆಂಗಳೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಹಲವು ಶೈಕ್ಷಣಿಕ ಸಮಸ್ಯೆಗಳ ವಿರುದ್ಧ 'ಬೆಂಗಳೂರು ವಿ.ವಿ. ಚಲೋ' ಸಂಘಟಿಸಲಾಗಿದೆ. ಈ ಕುರಿತು ವರದಿಗಳು ಇಲ್ಲಿವೆ.

ಬೆಂಗಳೂರಿನ ಪ್ರಖ್ಯಾತ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜಿನ ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ. ಎಸ್‌ಎಫ್‌ಐ ಬೆಂಬಲಿತ 'ಪ್ರಗತಿ' ತಂಡವು ಸಂಪೂರ್ಣವಾಗಿ ವಿಜಯ ಸಾಧಿಸುವುದರ ಮೂಲಕ ಇತಿಹಾಸ ನಿರ್ಮಿಸಿದೆ. ಅಲ್ಲದೆ ಈ ಬಾರಿ ('ಪ್ರಗತಿ' ತಂಡದ) ವಿಶೇಷತೆಳು, ಇದೇ ಮೊದಲ ಬಾರಿಗೆ ಎಸ್‌ಎಫ್‌ಐನ ಇಡೀ ತಂಡ ವಿಜಯವಾಗಿದೆ, ಇದೇ ಮೊದಲ ಬಾರಿಗೆ ಒಂದೇ ಸಿಂಡಿಕೇಟ್‌ನ ಎಲ್ಲಾ ಸ್ಪರ್ಧಿಗಳೂ ವಿಜಯಿಯಾಗಿದ್ದಾರೆ, ಇದೇ ಮೊದಲ ಬಾರಿಗೆ ಪೂರ್ಣವಾಗಿ ಹಾಸ್ಟೆಲ್ ಹುಡುಗಿಯರ ತಂಡ ಸ್ಪರ್ಧಿಸಿ ಗೆಲುವು ಸಾಧಿಸಿದೆ.

ಕಳೆದ 2-3 ವರ್ಷಗಳ ಹಿಂದೆ ಕಾಲೇಜಿನ ಒಳಗೆ ಪ್ರವೇಶಿಸಲೂ ಕಷ್ಟಕರವಾಗಿದ್ದ ಸಂದರ್ಭದಲ್ಲಿ, ಕಾಲೇಜಿನದೇ ಸಮಸ್ಯೆಗಳ ಪರಿಹಾರಕ್ಕಾಗಿ ದೊಡ್ಡ ಹೋರಾಟಗಳನ್ನು ರೂಪಿಸುವುದರ ಮೂಲಕ ವಿದ್ಯಾರ್ಥಿಗಳೊಂದಿಗೆ ಸಂಪರ್ಕ ಸಾಧಿಸಲು ಸಾಧ್ಯವಾಗಿತ್ತು. ಆಧುನಿಕ ಜಗತ್ತಿನ ಮಹಿಳಾ ಕಾಲೇಜಿನ ಆಂತರಿಕ ವಾತಾವರಣವು ನಮಗೆ ಸವಾಲಾಗಿತ್ತಾದರೂ ಹಾಸ್ಟೆಲ್‌ನ ಗಂಭೀರ ಸಮಸ್ಯೆಗಳನ್ನು ಬಗೆಹರಿಸಲು ಹೋರಾಟ ನಡೆಸಿದ್ದರಿಂದ ಹಾಗು ನಿರಂತರವಾಗಿ ವಿವಿಧ ವಿಭಾಗದ ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಅವರೊಂದಿಗೆ ಸಂಪರ್ಕ ಸಾಧಿಸಿದ್ದರಿಂದ ಕಾಲೇಜಿನಲ್ಲಿ ಎಸ್‌ಎಫ್‌ಐನ ವಿಚಾರವನ್ನು ಹರಡಲು ಸಾಧ್ಯವಾಗಿತ್ತು.

ಶ್ರೀಮಂತ- ಮಧ್ಯಮ - ಕೆಳಮಧ್ಯಮ - ನಗರ - ಗ್ರಾಮೀಣ - ದಲಿತ-ದಲಿತೇತರ ಹೀಗೆ ವೈವಿಧ್ಯಮಯ ಆರ್ಥಿಕ ಸಾಮಾಜಿಕ ಹಿನ್ನೆಲೆಯಿಂದ

ಪುಟ 8 ಕೆ

ಜನಗಳ ಹೋರಾಟಗಳು ಭುಗಿಲೇಳುತ್ತಿವೆ ವಿಫಲ ಸರ್ಕಾರಗಳನ್ನು ಎಚ್ಚರಿಸುತ್ತಿವೆ

ದೇಶದ ವಿವಿಧ ಭಾಗಗಳಲ್ಲಿ, ವಿಶೇಷವಾಗಿ ಉತ್ತರ ಭಾರತದಲ್ಲಿ ಜನಗಳ ಹೋರಾಟಗಳು ಭುಗಿಲೆದ್ದಿವೆ. ಗುರ್‌ಗಾಂವ್‌ನಲ್ಲಿ ಕಾರ್ಮಿಕ ವರ್ಗದ ದೃಢ ಹೋರಾಟ ಕುಖ್ಯಾತ ಹೊಂಡಾ ಕಾರ್ಖಾನೆ ಕಾರ್ಮಿಕರ ನೈಜ ಬೇಡಿಕೆಗಳನ್ನು ಒಪ್ಪಿಕೊಳ್ಳುವಂತೆ ಮಾಡಿದೆ. ಆದರೂ ತಮಗೆ ಬೇಕಾದ ಸಂಘವನ್ನು ರಚಿಸಿಕೊಳ್ಳುವ ಕಾರ್ಮಿಕರ ಮೂಲಭೂತ ಹಕ್ಕಿಗಾಗಿ ಹೋರಾಟ ತೀವ್ರಗೊಳ್ಳುತ್ತದೆ. ಕಾರ್ಮಿಕ ಸಂಘಗಳ ನೋಂದಾವಣೆಗೆ ಅವಕಾಶ ಕೊಡದೆ ಪರೋಕ್ಷವಾಗಿ 'ಹೈರ್ ಅಂಡ್ ಫೈರ್' ಎಂಬ ಕಾನೂನುಬಾಹಿರ ಧೋರಣೆ ಜಾರಿಗೆ ತರಲು ಅವಕಾಶ ಕಲ್ಪಿಸಲು ಸಾಧ್ಯವಿಲ್ಲ ಎಂಬ ಪಾಠವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಲಿಯಬೇಕಾಗಿದೆ.

ರೈತ-ಕಾರ್ಮಿಕರ ನ್ಯಾಯಬದ್ಧ ಹಕ್ಕುಗಳಿಗಾಗಿ ಚಳುವಳಿಗಳು ಭುಗಿಲೆದ್ದಿವೆ. ಸರ್ಕಾರಗಳು ಈ ಚಳುವಳಿ ದಮನ ಮಾಡುವ ಯತ್ನ ನಡೆಸಿವೆ. ದುಡಿಯುವ ವರ್ಗ ಮೈಕೊಡವಿ ಎದ್ದು ನಿಂತರೆ ಸರ್ಕಾರಗಳ ಈ ದುಷ್ಟ ಸಂಚುಗಳು ಮಣ್ಣು ಪಾಲಾಗಲಿವೆ.



ಸಂಘಗಳನ್ನು ರಚಿಸಿಕೊಳ್ಳುವ ಹಕ್ಕು ಕಾರ್ಮಿಕರ ಮೂಲಭೂತ ಹಕ್ಕನ್ನೇ ಅಲ್ಲ, ಕಾರ್ಮಿಕ ಸಂಘಗಳು ಇಲ್ಲದಿದ್ದರೆ ಕಾರ್ಮಿಕ ಕಾನೂನುಗಳ ನಗ್ನ ಉಲ್ಲಂಘನೆಯಿಂದ ಅರಾಜಕತೆ ಮತ್ತು ಅಸ್ತವ್ಯಸ್ತತೆ ಉಂಟಾಗುತ್ತದೆಯಷ್ಟೆ. ಹೀಗಾದಾಗ ಕಾನೂನುಗಳನ್ನು ಜಾರಿಗೆ ತರಬೇಕಾದ ಶಕ್ತಿಗಳು ಬಹಿರಂಗವಾಗಿ ಮಾಲಕರು, ಮ್ಯಾನೇಜ್‌ಮೆಂಟ್‌ಗಳ ಪಕ್ಷ ವಹಿಸಲು ಸಾಧ್ಯವಿಲ್ಲ ಎಂಬ ಇನ್ನೊಂದು ಪಾಠವನ್ನು ಸರ್ಕಾರಗಳು ಕಲಿಯಬೇಕು. ಆದರೆ ಗುರ್‌ಗಾಂವ್ ಘಟನೆಯಿಂದ ಸರ್ಕಾರಗಳು ತಾವಾಗಿಯೇ ಈ ಪಾಠಗಳನ್ನು ಕಲಿಯುಯುತ್ತವೆ ಎಂದು ನಿರೀಕ್ಷಿಸುವುದು ಭೋಳೆತನವಾದೀತು. ಕಾರ್ಮಿಕರ ಹಕ್ಕುಗಳನ್ನು ಗೌರವಿಸುವಂತೆ ಕಾರ್ಮಿಕ ಸಂಘಗಳ ಕಾನೂನುಬದ್ಧ ಚಟುವಟಿಕೆಗಳಿಗೆ ಅವಕಾಶ ನೀಡುವಂತೆ ಮಾಡಲು ತೀವ್ರ ಹೋರಾಟ ನಡೆಸಲೇಬೇಕು.

ತಾವಾಗಿಯೇ ಪಾಠ ಕಲಿಯುತ್ತಿಲ್ಲ

ಸರ್ಕಾರಗಳು ತಾವಾಗಿಯೇ ಪಾಠ ಕಲಿಯುವುದಿಲ್ಲ ಎಂಬುದು ಜುಲೈ 31 ರ ಲೂಧಿಯಾನ ಘಟನೆಯಿಂದ ಸ್ಪಷ್ಟವಾಗುತ್ತದೆ. ಪಂಜಾಬಿನ ಈ ಕೈಗಾರಿಕಾ ನಗರದಲ್ಲಿ ಕಾರ್ಖಾನೆ ಮಾಲಕರು ಕಾರ್ಮಿಕಸಂಘಗಳ ನೋಂದಣಿಯನ್ನು ವಿರೋಧಿಸುತ್ತಾ ಬಂದಿದ್ದಾರೆ. ಸರ್ಕಾರ ಮತ್ತು ಕಾರ್ಮಿಕ ಆಯುಕ್ತರು ಅವರ ರಾಗಕ್ಕೆ ತಾಳ ಹಾಕುತ್ತಾ ಬಂದಿದ್ದಾರೆ. ಕಾರ್ಮಿಕ ಸಂಘಗಳ ನೋಂದಾವಣೆಗೆ ಅವಕಾಶ ನೀಡಿದರೆ ಲೂಧಿಯಾನ ನಗರ ಇನ್ನೊಂದು ಕೊಲ್ಕತ್ತಾ ಆಗಿಬಿಡುತ್ತದೆ ಎಂದು ಸರ್ಕಾರಕ್ಕೆ ಅರ್ಜಿ ಹಾಕುವವರೆಗೂ ಈ ಫ್ಯಾಕ್ಟರಿ ಮಾಲಕರು ಹೋಗಿದ್ದಾರೆ. ನಿಜ ಸಂಗತಿಯೆಂದರೆ, ಲೂಧಿಯಾನ ಇನ್ನೊಂದು ಕೊಲ್ಕತ್ತ ಆದರೆ ಬಹಳ ಒಳ್ಳೆಯದು. ಕಾರ್ಮಿಕ ಕಾನೂನುಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಲೇ, ಪಶ್ಚಿಮ ಬಂಗಾಳದಲ್ಲಿ ಜಪಾನಿ ಕಂಪನಿಗಳು ಅತಿ ಹೆಚ್ಚು ಪ್ರಮಾಣದಲ್ಲಿ ಬಂಡವಾಳ ಹೂಡಿರುವಾಗ ಲೂಧಿಯಾನದಲ್ಲೂ ದೇಶಿ-ವಿದೇಶಿ ಬಂಡವಾಳ ಕಾರ್ಮಿಕ ಕಾನೂನುಗಳನ್ನು ಪಾಲಿಸುತ್ತಲೇ ಏಕೆ ಬರಲಾರವು? ದೇಶದ ಕಾನೂನು ಕೋಲ್ಕತ್ತಾವಾಗಲಿ, ಲೂಧಿಯಾನವಾಗಲೀ, ಬೇರೆ ಯಾವುದೇ ನಗರವಾಗಲಿ ಎಲ್ಲಾ ಕಡೆಯೂ ಅನ್ವಯವಾಗುತ್ತದೆ. ಜುಲೈ 31 ರಂದು ಲೂಧಿಯಾನದಲ್ಲಿ ನಡೆದ ಕಾರ್ಮಿಕರ ಬೃಹತ್ ರ್‍ಯಾಲಿ ಈ ಸಂದೇಶವನ್ನು ಸರ್ಕಾರ ಮತ್ತು ಸಂಬಂಧಪಟ್ಟವರಿಗೆ ತಲುಪಿಸಿದೆ. ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡದಿದ್ದರೆ ಅದು ಪಂಜಾಬ್ ಮತ್ತು ಅಲ್ಲಿನ ಜನತೆಗೆ ಕೇಡು ತರುತ್ತದೆ ಎಂದು ಎಚ್ಚರಿಸಿದೆ.

ಒಪ್ಪಿದ್ದನ್ನೂ ಮಾನ್ಯ ಮಾಡುತ್ತಿಲ್ಲ

ಪಕ್ಕದ ರಾಜಸ್ಥಾನದಲ್ಲಿ ರೈತರ ಒಂದು ಬೃಹತ್ ಸಮರಶೀಲ ಹೋರಾಟ ಸಾಗಿದೆ. ಅವರ ಬೆಳೆಗಳಿಗೆ ಸಾಕಷ್ಟು ನೀರು ಹರಿಸಬೇಕು ಎಂಬುದು ಅವರ ಬೇಡಿಕೆ. ಡಿಸೆಂಬರ್ 2004 ರಲ್ಲೇ ಈ ಕುರಿತು ಒಂದು ಒಪ್ಪಂದ ಸರ್ಕಾರ ಮತ್ತು ಹೋರಾಟಕ್ಕಿಳಿದ ರೈತರ ನಡುವೆ ಆಗಿತ್ತು. ಗಂಗಾನಗರ, ಹನುಮಾನ್‌ಗಡ್, ಬಿಕಾನೇರ್ ಮುಂತಾದ ಪಾಕಿಸ್ತಾನದ ಗಡಿಯಲ್ಲಿರುವ ಪ್ರದೇಶಗಳಲ್ಲಿ ರೈತರ ಒಂದು ಬೃಹತ್ ಸಮರಶೀಲ ಕಾರ್ಯಾಚರಣೆಯ ಫಲವಾಗಿ ಈ ಒಪ್ಪಂದ ಆಗಿತ್ತು. ಈ ಹೋರಾಟದಲ್ಲಿ ಆರು ಮಂದಿ ಹುತಾತ್ಮರಾದರು, ಹತ್ತಾರು ಜನ ಗಾಯಗೊಂಡರು.

ಆದರೆ ರಾಜಸ್ಥಾನ ಸರ್ಕಾರ ಈ ಒಪ್ಪಂದವನ್ನು ಮಾನ್ಯ ಮಾಡುತ್ತಿಲ್ಲ. ಇದರಿಂದಾಗಿ ನೀರಿನ ಅಭಾವವುಂಟಾಗಿ 30 ಶೇಕಡಾ ಬೆಳೆಗಳ ಬಿತ್ತನೆಯಷ್ಟೇ ಆಗದೆ. ಸಾಕಷ್ಟು ನೀರು ಇಲ್ಲ ಎಂಬ ಸರ್ಕಾರದ ಮಾತು ಸಂಪೂರ್ಣ ಸುಳ್ಳು ಎಂದು ರೈತರು ಹೇಳುತ್ತಿದ್ದಾರೆ. ಮೇಲ್ಪಟ್ಟದ ಪ್ರದೇಶಗಳಲ್ಲಿ ಇರುವ ಹೆಚ್ಚುವರಿ ನೀರನ್ನು ಆಣೆಕಟ್ಟುಗಳಲ್ಲಿ ಬಿರುಕು ತರದಂತೆ ತಡೆಯಲು ಪಾಕಿಸ್ತಾನದ ಗಡಿಯ ಕಡೆಗೆ ಹರಿಯಬಿಡಲಾಗುತ್ತಿದೆ. ರಾಜಸ್ಥಾನ ಸರ್ಕಾರ ಫೀಡರ್ ಕಾಲುವೆಗಳನ್ನು ದುರಸ್ತಿ ಮಾಡುವಲ್ಲಿ ಅಕ್ಷಮ್ಯ ನಿರ್ಲಕ್ಷ್ಯ ತೋರಿದ್ದರಿಂದ ಆ ನೀರನ್ನು ರಾಜಸ್ಥಾನದ ರೈತರಿಗೆ ಒದಗಿಸಲಾಗುತ್ತಿಲ್ಲ, ವ್ಯರ್ಥಗೊಳಿಸಲಾಗುತ್ತಿದೆ ಎಂಬುದು ನಿಜ ಸಂಗತಿ. ತನ್ನ ತಪ್ಪುಗಳನ್ನು ಮುಚ್ಚಿಕೊಳ್ಳಲು ಬಿಜೆಪಿ ರಾಜ್ಯ ಸರ್ಕಾರ ಚಳುವಳಿ ಮಾಡುತ್ತಿರುವ ರೈತರ ವಿರುದ್ಧ ಹರಿಹಾಯುತ್ತಿದೆ. ಅವರ ಒಬ್ಬ ಜನಪ್ರಿಯ ಮುಖಂಡರೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ



ಮಂಡಳಿ ಸದಸ್ಯರೂ ಆದ ಹೇತ್‌ರಾಂ ಬೇನಿವಾಲ್‌ರವರ ಮೇಲೆ ಅಮಾನುಷ ಹಲ್ಲೆ ನಡೆಸಿ ನೂರಾರು ರೈತರೊಂದಿಗೆ ಅವರನ್ನು ಬಂಧಿಸಲಾಗಿದೆ. ಇದರ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆ ಭುಗಿಲೆದ್ದಿದೆ. ರಾಜ್ಯ ಸರ್ಕಾರದ ನಿರ್ಲಕ್ಷ್ಯವನ್ನು ಪ್ರತಿಭಟಿಸಿ ಮತ್ತು ಈಗಲಾದರೂ ನೀರು ಹರಿಸಿ ಶೇ 30 ಬೆಳೆಯನ್ನಾದರೂ ಉಳಿಸಿಕೊಳ್ಳಲು ವ್ಯವಸ್ಥೆ ಮಾಡಬೇಕು ಎಂದು ಆಗ್ರಹಿಸಿ 'ಮಹಾ ಪಂಚಾಯ್ತಿ' ಗಳು ನಡೆಯುತ್ತಿವೆ. ಈ ನ್ಯಾಯಬದ್ಧ ಬೇಡಿಕೆಯನ್ನು ಒಪ್ಪಿಕೊಳ್ಳುವ ಬದಲು ರಾಜ್ಯ ಸರ್ಕಾರ ದಮನ ಚಕ್ರವನ್ನು ಮುಂದುವರೆಸುತ್ತಿದೆ. ರೈತರು ಚಳುವಳಿ ನಡೆಸದಂತೆ ತಡೆಯುವ ಪ್ರಯತ್ನ ನಡೆದಿದೆ. ಆದರೆ ಇಂತಹ ಪ್ರಯತ್ನಗಳು ಹಿಂದೆಯೂ ಫಲಕೊಟ್ಟಿಲ್ಲ, ಮುಂದೆಯೂ ಕೊಡಲಾರವು. ಈ ಪ್ರದೇಶದ ರೈತರು ಹೋರಾಟವನ್ನು ಮುಂದುವರೆಸುವ ದೃಢ ನಿರ್ಧಾರ ಮಾಡಿದ್ದಾರೆ. ಮುಂಬರುವ ದಿನಗಳಲ್ಲಿ ಇನ್ನಷ್ಟು ತೀವ್ರಹೋರಾಟಗಳು ನಡೆಯಲಿವೆ.

ಜ್ವಲಂತ ಪ್ರಶ್ನೆಗಳ ಮೇಲೆ ಸಿಪಿಐ(ಎಂ) ಆಂದೋಲನ

ವಿವಿದ ಜನವಿಭಾಗಗಳ ಈ ಎಲ್ಲಾ ಹೋರಾಟಗಳು ಒಂದು ದಿಕ್ಕಿನತ್ತ ಬೊಟ್ಟು ಮಾಡುತ್ತಿವೆ. ಅದೆಂದರೆ ಜನಗಳ ನೈಜ ಅಗತ್ಯಗಳನ್ನು ಪೂರೈಸುವಲ್ಲಿ ಸಂಬಂಧಪಟ್ಟ ಸರ್ಕಾರಗಳ ವಿಫಲತೆ. ಸರ್ಕಾರಗಳು ನಾಡಿನ ಕಾನೂನು ಮುರಿಯುವವರನ್ನು ರಕ್ಷಿಸುತ್ತಲೇ ಇದ್ದರೆ, ತಾವಿತ್ತ ವಚನಗಳನ್ನು ಈಡೇರಿಸದೆ ಮೂಲೆಗೆಸೆಯುತ್ತಿದ್ದರೆ ಜನಗಳ ಮುಂದೆ ತೀವ್ರ ಹೋರಾಕ್ಕಿಳಿಯುವುದಲ್ಲದೆ ಬೇರೆ ದಾರಿ ಉಳಿಯುವುದಿಲ್ಲ ಎಂಬುದು ಸ್ಪಷ್ಟ. ಜನಗಳ ಹಿತಗಳ ರಕ್ಷಣೆಗಾಗಿ, ಭಾರತದ ಸಾರ್ವಭೌಮತ್ವವನ್ನು ಕಾಪಾಡಲು ದೇಶಾದ್ಯಂತ ಇನ್ನು ಮುಂದೆ ಎದ್ದು ಬರಲಿರುವ ಎಲ್ಲಾ ಹೋರಾಟಗಳನ್ನು ಬಲಗೊಳಿಸಬೇಕು.

ಈ ಹಿನ್ನಲೆಯಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಉದ್ಯೋಗ, ಆಹಾರ ಮತ್ತು ಭೂಮಿ ಮುಂತಾದ ಜನಗಳ ಜ್ವಲಂತ ಸಮಸ್ಯೆಗಳ ಮೇಲೆ ದೇಶವ್ಯಾಪಿ ಆಂದೋಲನ ನಡೆಸಲು ಕೊಟ್ಟ ಕರೆಯನ್ನು ಗಮನಿಸಬೇಕು. ಈ ಹೋರಾಟಗಳು ಕೇಂದ್ರದ ಮತ್ತು ರಾಜ್ಯಗಳಲ್ಲಿನ ಸರ್ಕಾರಗಳು ದುಡಿಯುವ ಜನಗಳ ಹಕ್ಕುಗಳನ್ನು ಎತ್ತಿ ಹಿಡಿಯುಂತೆ, ಜನಗಳ ಬದುಕನ್ನು ಉತ್ತಮಗೊಳಿಸಲು ತಾವು ನೀಡಿದ ವಚನಗಳನ್ನು ಈಡೇರಿಸುವಂತೆ ಒತ್ತಡ ತರಬೇಕು. ಇಂತಹ ಹೋರಾಟಗಳನ್ನು ಬಲಿಷ್ಟಗೊಳಿಸುವ ಮೂಲಕ ಮಾತ್ರವೇ ಭಾರತದ ಜನತೆ ತನ್ನ ಅಸ್ತಿತ್ವದ ಹಕ್ಕನ್ನು ರಕ್ಷಿಸಿಕೊಳ್ಳಲು, ಉತ್ತಮಪಡಿಸಲು ಸಾಧ್ಯ. ○

ಅತಿವೃಷ್ಟಿಯಿಂದ ಹಾನಿಗೊಳಗಾದವರ ನೆರವಿಗೆ ಧಾವಿಸಲು ಸಿಪಿಐ(ಎಂ) ಕರೆ

ಜುಲೈ 29 ಮತ್ತು 30ರಂದು ನವದೆಹಲಿಯಲ್ಲಿ ಸೇರಿದ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಪಾಲಿಟ್ ಬ್ಯೂರೋ ಸಭೆಯು ಭಾರೀ ಮಳೆಯಿಂದಾಗಿ ಸಂಭವಿಸಿದ ಅನಾಹುತದಲ್ಲಿ 800 ಕ್ಕೂ ಹೆಚ್ಚು ಜನರು ಜೀವ ಕಳಕೊಂಡಿದ್ದು, ಕೋಟ್ಯಾಂತರ ರೂಪಾಯಿ ಆಸ್ತಿ ನಷ್ಟವುಂಟಾಗಿದೆ. ಪ್ರಕೃತಿಯ ಈ ವಿಕೋಪದಲ್ಲಿ ನೊಂದವರಿಗೆ ಪಾಲಿಟ್ ಬ್ಯೂರೋ ಅತೀವ ದು:ಖವನ್ನು ವ್ಯಕ್ತಪಡಿಸಿದೆ. ಅದೇ ಸಂದರ್ಭದಲ್ಲಿ ಹಾನಿಗೊಳಗಾದ ಮಹಾರಾಷ್ಟ್ರದ ಜನರ ನೆರವಿಗೆ ಧಾವಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಒತ್ತಾಯಿಸಿದೆ. ಈ ಪರಿಸ್ಥಿತಿಯನ್ನು ನಿಭಾಯಿಸಲು ಮುಂಬೈ ನಗರ ಪಾಲಿಕೆಯಾಗಲೀ, ರಾಜ್ಯ ಆಡಳಿತವಾಗಲೀ ವಿಫಲವಾಗಿದ್ದು, ವಿದ್ಯುತ್, ನೀರು ಮತ್ತಿತರ ಅಗತ್ಯವಸ್ತುಗಳು ಜನರಿಗೆ ಸಿಗದಂತಾಗಿತ್ತು. ಮಳೆಯ ಆರ್ಭಟದ 4 ದಿನಗಳ ನಂತರವೂ ಕನಿಷ್ಟ ಅಗತ್ಯ ವಸ್ತುಗಳು ಜನರಿಗೆ ತಲುಪಿಲ್ಲ.



ರೈತರ ಪರಿಸ್ಥಿತಿಯಂತೂ ಇನ್ನಷ್ಟು ತೊಂದರೆಗೆ ಸಿಲುಕಿತ್ತು. ನೆರೆಯಿಂದಾಗಿ ಬೆಳೆ ಮತ್ತು ಪಶು ಸಂಪತ್ತು ನಾಶಗೊಂಡಿದ್ದು ದಿಕ್ಕೇ ತೋಚದಂತಾಗಿದೆ. ಸಂಕಷ್ಟಕ್ಕೆ ಒಳಗಾದವರಿಗೆ ಅಗತ್ಯ ವಸ್ತುಗಳನ್ನು ಕೂಡಲೇ ಒದಗಿಸುವುದು ಮತ್ತು ಪರಿಹಾರ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಮುಂದಿನ ದಿನಗಳಲ್ಲಿ ನಗರ ಪ್ರದೇಶಗಳನ್ನು ಅಭಿವೃದ್ಧಿಗೊಳಿಸಲು ಯೋಜನಾಬದ್ಧ ಹಾಗೂ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದ್ದು ಮಾತ್ರವಲ್ಲದೇ ಕೇಂದ್ರ ಸರ್ಕಾರ ಸಾಕಷ್ಟು ಸಹಾಯಧನ ನಿಡಬೇಕೆಂದು, ಅಗತ್ಯ ಪರಿಹಾರ ಕಾರ್ಯಗಳಲ್ಲಿ ಸಮನ್ವಯಗೊಳ್ಳಬೇಕೆಂದೂ ಒತ್ತಾಯಿಸಿದೆ.

ಅದೇ ಸಂದರ್ಭದಲ್ಲಿ ದೇಶದ ಹಲವಾರು ಆಗುಹೋಗುಗಳ ಮೇಲೆ ಜನತೆಯ ಗಮನ ಸೆಳೆದಿದ್ದ ಪ್ರಮುಖ ಅಂಶಗಳನ್ನು ಪೊಲಿಟ್‌ಬ್ಯೂರೋ ಚರ್ಚಿಸಿತು.

ಬಿಜೆಪಿಯಲ್ಲಿನ ಬಿಕ್ಕಟ್ಟು

ಬಿಜೆಪಿಯೊಳಗಿನ ಬಿಕ್ಕಟ್ಟು ದಿನೇ ದಿನೇ ಹೆಚ್ಚುತ್ತಿದೆ. ಎಲ್.ಕೆ.ಅಡ್ವಾನಿ ಅದರ ಅಧ್ಯಕ್ಷರಾಗಿ ಮುಂದುವರೆಯಬೇಕೆ ಬೇಡವೇ ಎನ್ನುವುದು ಇನ್ನೂ ಅಂತಿಮವಾಗಿ ನಿರ್ಧಾರವಾಗಿಲ್ಲ. ಆರ್.ಎಸ್.ಎಸ್ ಆಣತಿಯಂತೆ ಕಾರ್ಯನಿರ್ವಹಿಸಬೇಕಾಗಿರುವುದರಿಂದ ಒಂದು ಸಾಮಾನ್ಯ ರಾಜಕೀಯ ಪಕ್ಷವಾಗಿ ಕಾರ್ಯನಿರ್ವಹಿಸಲು ಬಿಜೆಪಿಗೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಬಿಜೆಪಿಯು ಆರ್.ಎಸ್.ಎಸ್ ಹೇಳಿದಂತೆ ಕೇಳುವ ಒಂದು ರಾಜಕೀಯ ಪಕ್ಷ ಎಂಬುದರಲ್ಲಿ ಯಾವುದೇ ಅನುಮಾನ ಉಳಿದಿಲ್ಲ. ಹಿಂದುತ್ವ ಅಜೆಂಡಾವನ್ನು ಪುನಃ ಕೈಗೆತ್ತಿಕೊಳ್ಳಬೇಕೆಂದು ಬಿಜೆಪಿ ಬಯಸುತ್ತಿದ್ದರೂ, ಜನ ಸಾಕಷ್ಟು

ಪುಟ 10 ಕ್ಕೆ

ಆಹಾರ-ಕೆಲಸ-ಭೂಮಿಯಂತಹ ಜನರ ಬದುಕಿನ ಮೂಲಭೂತ ಅಗತ್ಯಗಳ ಬಗೆಗೆ ಅಸೀಮ ನಿರ್ಲಕ್ಷ್ಯ ತೋರಿದ ಬಿಜೆಪಿ ನೇತೃತ್ವದ ಸರ್ಕಾರವನ್ನು ಮಣ್ಣುಮುಕ್ಕಿಸಿ ಜನತೆ ನೀಡಿದ ತೀರ್ಪಿನಿಂದ ಪ್ರಸಕ್ತ ಯುಪಿಎ ಸರ್ಕಾರ ಸರಿಯಾದ ಪಾಠ ಕಲಿಯಲು ವಿಫಲವಾಗಿದೆ. ಆದರೆ ಜನತೆ ನೀಡಿದ ಐತಿಹಾಸಿಕ ತೀರ್ಪನ್ನು ಬಳಸಿ ಜನರ ಬದುಕಿನ ಈ ಜ್ವಲಂತ ಪ್ರಶ್ನೆಗಳನ್ನು ಮುಂಚೂಣಿಗೆ ತರಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ರಾಜ್ಯವ್ಯಾಪಿ ಚಳುವಳಿ ನಡೆಸಲು ಕರೆ ನೀಡಿದೆ. ಆಗಸ್ಟ್ ತಿಂಗಳಿನಲ್ಲಿ ಈ ಪ್ರಶ್ನೆಗಳ ಆಧಾರದಲ್ಲಿ ವ್ಯಾಪಕ ಪ್ರಚಾರಾಂದೋಲನಗಳು ನಡೆಯುತ್ತಿದ್ದು, ಸೆಪ್ಟೆಂಬರ್ ತಿಂಗಳಿನಲ್ಲಿ ಈ ಸಂಬಂಧ ನಿರ್ದಿಷ್ಟ ಪ್ರಶ್ನೆಗಳ ಆಧಾರದಲ್ಲಿ ಸಮರಶೀಲ ಹೋರಾಟಗಳು ನಡೆಯಲಿವೆ.

ಭೂಮಿ, ಆಹಾರ ವ
ದೇಶವ್ಯಾಪಿ

ನಿತ್ಯಾನಂದಸ್ವಾಮಿ

ಮಾರ್ಚ್ 1998ರಿಂದ ಏಪ್ರಿಲ್ 2004ರ ವರೆಗೆ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ನೇತೃತ್ವದ ಸರ್ಕಾರವು ಸ್ವತಂತ್ರ ಭಾರತ ಕಂಡ ಅತ್ಯಂತ ಪ್ರತಿಗಾಮಿ ಸರ್ಕಾರವಾಗಿತ್ತು. ಅದರ ಆರ್ಥಿಕ ನೀತಿಗಳು ಇಡೀ ದೇಶದ ಮೇಲೆ, ವಿಶೇಷವಾಗಿ ಗ್ರಾಮೀಣ ಜನತೆಯ ಮೇಲೆ ಭೀಕರವಾದ ಪರಿಣಾಮವನ್ನು ಬೀರಿದವು. ಕಾರ್ಷಿಕ ಕ್ಷೇತ್ರ ಹಿಂದೆಂದೂ ಕಂಡರಿಯದ ಬಿಕ್ಕಟ್ಟಿಗೆ ಬಲಿಯಾಯಿತು. ಕೃಷಿ ಕ್ಷೇತ್ರಕ್ಕೆ ಸಾರ್ವಜನಿಕ ಹೂಡಿಕೆಯ ಕಡಿತದಿಂದಾಗಿ ಕೃಷಿ ಉತ್ಪಾದನೆ, ಮುಖ್ಯವಾಗಿ ಆಹಾರ ಧಾನ್ಯಗಳ ಉತ್ಪಾದನೆ ತೀವ್ರವಾಗಿ ಕುಸಿಯುವಂತಾಯಿತು. ಕೃಷಿ ಲಾಗವಾಡುಗಳ ಮೇಲಿನ ಸಬ್ಸಿಡಿ ಹಿಂಪಡೆತ, ವಿದ್ಯುತ್ ಮತ್ತು ನೀರಾವರಿ ದರಗಳ ಏರಿಕೆಯಿಂದಾಗಿ ಉತ್ಪಾದನಾ ವೆಚ್ಚಗಳು ಗಣನೀಯವಾಗಿ ಏರುವಂತಾಯಿತು. ಆಮದುಗಳ ಮೇಲಿನ ಪ್ರಮಾಣಾತ್ಮಕ ನಿರ್ಬಂಧಗಳನ್ನು ತೆಗೆದು ಹಾಕಿದುದರ ಪರಿಣಾಮವಾಗಿ ಅಗ್ಗದ ವಿದೇಶಿ ಕೃಷಿ ಉತ್ಪನ್ನಗಳು ಪ್ರವಾಹೋಪಾದಿಯಲ್ಲಿ ದೇಶದ ಮಾರುಕಟ್ಟೆಯೊಳಗೆ ನುಗ್ಗುವಂತಾಗಿ ದೇಶೀಯ ಕೃಷಿ ಉತ್ಪನ್ನಗಳು ಬೆಲೆ ಕುಸಿತದ ಆಘಾತಕ್ಕೆ ಒಳಗಾಗುವಂತಾಯಿತು. ರೈತರಿಗೆ ಸ್ವಲ್ಪವಾದರೂ ಸಹಾಯವಾಗುತ್ತಿದ್ದ ಬೆಂಬಲ ಬೆಲೆಯ ಸರ್ಕಾರಿ ಖರೀದಿ ಕಾರ್ಯಕ್ರಮವನ್ನು ಬಹುತೇಕವಾಗಿ ಕುಗ್ಗಿಸಲಾಯಿತು. ಹೀಗೆ ಉತ್ಪಾದನಾ ವೆಚ್ಚಗಳ ಏರಿಕೆ ಮತ್ತು ಕೃಷಿ ಉತ್ಪನ್ನಗಳ ಬೆಲೆ ಕುಸಿತದ ನಡುವಿನ ಇಕ್ಕಳಕ್ಕೆ ರೈತಾಪಿ ವಿಭಾಗಗಳು ಸಿಕ್ಕಿಕೊಳ್ಳುವಂತಾಯಿತು. ಇಂತಹ ಸಂಕಟದ ಸಮಯದಲ್ಲಿ ಸರ್ಕಾರದ ಸಾಲ ನೀತಿ ರೈತರ ನೆರವಿಗೆ ಬರಲಿಲ್ಲ. ಸಾಂಸ್ಥಿಕ ಸಾಲದ ಇಳಿಕೆಯಿಂದಾಗಿ ರೈತರು, ಮುಖ್ಯವಾಗಿ ಬಡ ಮತ್ತು ಮಧ್ಯಮ ರೈತರು ಅನಧಿಕೃತ ಸಾಲದ ಮಾರುಕಟ್ಟೆಗೆ ಶರಣಾಗಿ ಖಾಸಗಿ ಲೇವಾದೇವಿಗಾರರ ಕ್ರೂರ ಶೋಷಣೆಗೆ ಬಲಿಯಾಗುವಂತಾಯಿತು. ಸಾಲದ ಬಾಧೆಗೆ ಒಳಗಾಗಿ ಸಾವಿರಾರು ರೈತರು ಸಾಲು ಸಾಲಾಗಿ ಆತ್ಮಹತ್ಯೆ ಮಾಡಿಕೊಳ್ಳುವಂತಾದರೂ ಇದನ್ನು ಒಂದು ರಾಷ್ಟ್ರೀಯ ದುರಂತ ಎಂದು ಪರಿಗಣಿಸಿ ರೈತರ ನೆರವಿಗೆ ಧಾವಿಸಲು ವಾಜಪೇಯಿ ಸರ್ಕಾರ ಮುಂದಾಗಲಿಲ್ಲ.

ತದ್ವಿರುದ್ಧವಾಗಿ, ಭೂಮಿತಿಯನ್ನು ಏರಿಸುವ ಮೂಲಕ, ಹೆಚ್ಚುವರಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗೆ ನೀಡುವ ಮೂಲಕ ಭೂಸುಧಾರಣೆಗಳನ್ನು ದುರ್ಬಲಗೊಳಿಸಲಾಯಿತು. ಇಂತಹ ಕ್ರಮಗಳಿಂದ ಮರುವಿತರಣೆಗಾಗಿ ಲಭ್ಯವಾಗುವ ಭೂಮಿಯ ಪ್ರಮಾಣ ಕಡಿಮೆಯಾಯಿತು. ಇದರ ಜೊತೆಯಲ್ಲಿ ಭೂಮಿಯನ್ನು ಕಳೆದುಕೊಳ್ಳುತ್ತಿದ್ದ ಬಡ ರೈತರ ಸಂಖ್ಯೆ ಹೆಚ್ಚಾಗುತ್ತಾ ಗ್ರಾಮೀಣ ಪ್ರದೇಶಗಳಲ್ಲಿ ಅಸಮಾನತೆ ತೀವ್ರವಾಯಿತು. ಇದೇ ಸಮಯದಲ್ಲಿ ಅರಣ್ಯ ಸಂರಕ್ಷಣೆಯ ನೆಪದಲ್ಲಿ, ಆದಿವಾಸಿ ಬುಡಕಟ್ಟು ಜನಗಳನ್ನು ಮತ್ತಿತರ ಭೂಹೀನ ಬಡವರನ್ನು ಅವರು ವಾಸಿಸುತ್ತಿದ್ದ ಹಾಗೂ ಸಾಗುವಳಿ ಮಾಡುತ್ತಿದ್ದ ಅರಣ್ಯ ಭೂಮಿಯಿಂದ ಒಕ್ಕಲೆಬ್ಬಿಸಲಾಯಿತು.



ಇದೇ ಅವಧಿಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯು ಜನಸಂಖ್ಯೆಯ ಬೆಳವಣಿಗೆಯ ದರಕ್ಕಿಂತ ಕೆಳಗೆ ಕುಸಿದು ಆಹಾರದ ತಲಾ ಲಭ್ಯತೆಯ ಬಾರೀ ಕುಸಿತಕ್ಕೆ ಕಾರಣವಾಯಿತು. ಆಹಾರ ಬಳಕೆಯಲ್ಲಿ ಕಂಡು ಬಂದ ತೀವ್ರ ಕುಸಿತವು ಗ್ರಾಮೀಣ ಬಡವರ ನಡುವೆ ವ್ಯಾಪಕಗೊಂಡ ಕಾರ್ಷಿಕ ಸಂಕಷ್ಟಕ್ಕೆ ಸಾಕ್ಷಿಯಾಗಿತ್ತು. ಇಂತಹ ದುಸ್ಥಿತಿಯಲ್ಲಿ, ರೇಶನ್ ವ್ಯವಸ್ಥೆಯನ್ನು ವಿಸ್ತರಿಸಿ ಎಫ್‌ಸಿಐ ಉಗ್ರಾಣಗಳಲ್ಲಿ ರಾಶಿಬಿದ್ದು ನಾಶವಾಗುತ್ತಿದ್ದ ಆಹಾರ ಧಾನ್ಯಗಳನ್ನು ರಿಯಾಯ್ತಿ ದರಗಳಲ್ಲಿ ಬಡವರಿಗೆ ಒದಗಿಸುವ ಬದಲು ಇನ್ನೂ ಕಮ್ಮಿ ಬೆಲೆಗೆ ವಿದೇಶಕ್ಕೆ ರಫ್ತು ಮಾಡಲಾಯಿತು. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸುವ ಬದಲು ಕಳಚಿದ ಪರಿಣಾಮವಾಗಿ, ದೇಶದ ಹಲವು ಕಡೆ ಜನ, ಮುಖ್ಯವಾಗಿ ಮಹಿಳೆಯರು ಮತ್ತು ಮಕ್ಕಳು ಹಸಿವಿಗೆ ಮತ್ತು ಹಸಿವಿನ ಸಾವುಗಳಿಗೆ ಬಲಿಯಾಗುವಂತಾಯಿತು.

ಬಿಜೆಪಿ ನೇತೃತ್ವದ ಸರ್ಕಾರವು ತನ್ನ ಅಧಿಕಾರಾವಧಿಯಲ್ಲಿ ಸಾರ್ವಜನಿಕ ಕ್ಷೇತ್ರದ ಮೇಲೆ ತನ್ನ ದಾಳಿಯನ್ನು ತೀವ್ರಗೊಳಿಸಿತು. ಅದರ ಉದಾರೀಕೃತ ಆರ್ಥಿಕ ನೀತಿಗಳು ಕೈಗಾರಿಕಾ ವಲಯದ ಮೇಲೆ ಅತ್ಯಂತ ಪ್ರತಿಕೂಲ ಪರಿಣಾಮ ಬೀರುವಂತಾಯಿತು. ಅಸಂಖ್ಯಾತ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕಾ ಘಟಕಗಳು ಮುಚ್ಚಲ್ಪಟ್ಟು ಅಸಂಘಟಿತ ಕಾರ್ಮಿಕರ ಪರಿಸ್ಥಿತಿ ಶೋಚನೀಯವಾಯಿತು. ಕೈಮಗ್ಗ, ಬೀಡಿ, ನಾರು, ಗೇರು ಮೊದಲಾದ ಪರಂಪರಾಗತ ಕೈಗಾರಿಕೆಗಳಲ್ಲಿ ದುಡಿಯುತ್ತಿರುವವರ ಮತ್ತು ಕುಶಲಕರ್ಮಿಗಳ ಲಕ್ಷಾಂತರ ಕುಟುಂಬಗಳು ಉದ್ಯೋಗಹೀನರಾಗಿ ಹಸಿವು ಹಾಗೂ ದಾರಿದ್ರ್ಯದಲ್ಲಿ ದಿನಕಳೆಯುವಂತಾಯಿತು.

ಗ್ರಾಮೀಣ ನಿರುದ್ಯೋಗವಂತೂ ಬೃಹದಾಕಾರ ಪಡೆಯುವಂತಾಯಿತು. ಬಡ ರೈತರು ಭೂಮಿಯನ್ನು ಕಳೆದುಕೊಂಡು ಕೃಷಿ ಕೂಲಿಕಾರರಾಗಿ ಪರಿವರ್ತನೆ ಹೊಂದುತ್ತಾ ಕೃಷಿ ಕೂಲಿಕಾರರ ಸಂಖ್ಯೆ ಬಾರೀ ಪ್ರಮಾಣದಲ್ಲಿ ಏರಿಕೆಯಾಗುವಂತಾಯಿತು. ಪರಿಣಾಮವಾಗಿ ದೇಶದ ಬಹಳಷ್ಟು ಭಾಗಗಳಲ್ಲಿ ಕೃಷಿ ಕೂಲಿಕಾರರ ಸರಾಸರಿ ಕೆಲಸದ ದಿನಗಳು ತೀವ್ರವಾಗಿ ಕಡಿತಗೊಂಡವು. ಕೇಂದ್ರ ಸರ್ಕಾರದ ಆಮದು ನೀತಿಯು ಕಂಬೈನ್ ಹಾರ್ವೆಸ್ಟರ್, ಡ್ರೆಜ್ಜರ್, ಪೋಕ್‌ಲೇನ್, ಕಲ್ಲು ಒಡೆಯುವ ಯಂತ್ರಗಳು ಮೊದಲಾದ ಯಂತ್ರಗಳ ಆಮದಿಗೆ ಪ್ರೋತ್ಸಾಹ ಕೊಟ್ಟ ಪರಿಣಾಮವಾಗಿ ಕೃಷಿಯಲ್ಲಿಯೂ, ಸರ್ಕಾರಿ ಕಾಮಗಾರಿಗಳಲ್ಲಿಯೂ ಯಂತ್ರಗಳ ಬಳಕೆ ವ್ಯಾಪಕಗೊಳ್ಳುವಂತಾಗಿ ಕೂಲಿಕಾರರ ಕೈಗಳಿಗೆ ಕೆಲಸ ಸಿಗದಂತಾಯಿತು. ಸರ್ಕಾರಿ ಕಾಮಗಾರಿಗಳ ಕೊರತೆ, 'ಕೂಲಿಗಾಗಿ ಕಾಳು' ಯೋಜನೆಯ ಅಸಮರ್ಪಕ ನಿರ್ವಹಣೆಯಿಂದಾಗಿ ಪರಿಸ್ಥಿತಿ ಇನ್ನಷ್ಟು ಗಂಭೀರವಾಯಿತು. ಹೊಟ್ಟೆಪಾಡಿಗಾಗಿ ಕೂಲಿಕಾರ ಕುಟುಂಬಗಳು ಊರಿಂದ ಊರಿಗೆ, ರಾಜ್ಯದಿಂದ ರಾಜ್ಯಕ್ಕೆ ವಲಸೆ ಹೋಗುವುದು ವ್ಯಾಪಕಗೊಂಡು ಆರ್ಥಿಕ, ಸಾಮಾಜಿಕ ಅಪರಾಧಗಳ ಹೆಚ್ಚಳಕ್ಕೆ ಕಾರಣವಾಗುವಂತಾಯಿತು. ಹೀಗೆ ಗ್ರಾಮೀಣ ಜನತೆಯ ಉದ್ಯೋಗ, ಆಹಾರ ಮತ್ತು ಭೂಮಿಯ ಹಕ್ಕುಗಳ ಮೇಲೆ ನಡೆದ ದಾಳಿಯ ಪರಿಣಾಮವಾಗಿ ಗ್ರಾಮೀಣ ಬಡವರ ಸಂಕಷ್ಟಗಳು ಉಲ್ಬಣಗೊಳ್ಳುವಂತಾಯಿತು.

ಬಿಜೆಪಿ ನೇತೃತ್ವದ ಸರ್ಕಾರದ ಕುಮ್ಮಕ್ಕಿನಿಂದ ದೇಶದಾದ್ಯಂತ, ಮುಖ್ಯವಾಗಿ ಗುಜರಾತ್‌ನಲ್ಲಿ ನಡೆದ ಘೋರ ಜನಾಂಗೀಯ ಹತ್ಯಾಕಾಂಡದಿಂದ ಹಾಗೂ ಅದರ ಆರ್ಥಿಕ ನೀತಿಗಳಿಂದ ನೊಂದ, ಬೆಂದ ದೇಶದ ಜನತೆ, 2004ರ ಚುನಾವಣೆಯನ್ನು ಸಮರ್ಪಕವಾಗಿ ಬಳಸಿಕೊಂಡಿತು. ಬಿಜೆಪಿ ನೇತೃತ್ವದ ಪ್ರತಿಗಾಮಿ ಸರ್ಕಾರ ಪದಚ್ಯುತಗೊಂಡಿತು. ಕಾಂಗ್ರೆಸಿಗೂ ಜನತೆ ಬಹುಮತ ನೀಡಲಿಲ್ಲ. ಸ್ವತಂತ್ರ ಭಾರತದ ಇತಿಹಾಸದಲ್ಲಿ ಮೊತ್ತ ಮೊದಲ ಬಾರಿಗೆ ಎಡ ಪಕ್ಷಗಳ ಬೆಂಬಲವಿಲ್ಲದೆ ಕೇಂದ್ರದಲ್ಲಿ ಒಂದು ಸರ್ಕಾರವನ್ನು ರಚನೆಮಾಡಲು ಸಾಧ್ಯವಾಗದಂತಹ ಪರಿಸ್ಥಿತಿ ಉಂಟಾಯಿತು. ಸಂಸತ್ತಿನಲ್ಲಿ ಮೊದಲ ಬಾರಿಗೆ ಎಡ ಪಕ್ಷಗಳ ಸದಸ್ಯರ ಸಂಖ್ಯೆ 61ಕ್ಕೆ ಏರುವ ಮೂಲಕ ದಾಖಲೆ ನಿರ್ಮಿಸುವಂತಾಯಿತು.

ಯುಪಿಎ ಸರ್ಕಾರದ ನಿರಾಶಾದಾಯಕ ಕಾರ್ಯವೈಖರಿ :

ಪ್ರತಿಗಾಮಿ ಬಿಜೆಪಿಯನ್ನು ಅಧಿಕಾರದಿಂದ ದೂರ ಇಡುವ ಏಕೈಕ ಉದ್ದೇಶದಿಂದ ಎಡಪಕ್ಷಗಳು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ನೀಡಿದವು. ಕಾಂಗ್ರೆಸ್ಸಿನ ವರ್ಗಗುಣವನ್ನು, ಸಾಮ್ರಾಜ್ಯಶಾಹಿ ಪ್ರೇರಿತ ಉದಾರೀಕರಣ ನೀತಿಯ ಪರವಾದ ಅದರ ನಿಲುಮೆಯನ್ನು ಅರಿತಿದ್ದರೂ ಎಡ ಪಕ್ಷಗಳಿಗೆ ಬೇರೆ ದಾರಿ ಇರಲಿಲ್ಲ. ಬಿಜೆಪಿ ನೇತೃತ್ವದ ಸರ್ಕಾರದ ಧೋರಣೆಗಳಿಂದಾಗಿ ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದ ಜನತೆಗೆ ತಕ್ಷಣ ಕೆಲವು ಪರಿಹಾರಗಳನ್ನು ಒದಗಿಸುವುದು ಅಗತ್ಯವಾಗಿತ್ತು. ಆ ದಿಕ್ಕಿನಲ್ಲಿ ಯುಪಿಎ ಸರ್ಕಾರ ಒಂದು 'ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಅಂಗೀಕರಿಸುವಂತೆ ಮಾಡುವುದು ಸಾಧ್ಯವಾಯಿತು. ಆ ಕಾರ್ಯಕ್ರಮದಲ್ಲಿ ಕೋಮುವಾದಕ್ಕೆ ಕಡಿವಾಣ, ಲಿಂಗತಾರತಮ್ಯಕ್ಕೆ ತಡೆ, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು (ರೇಷನ್ ವ್ಯವಸ್ಥೆಯನ್ನು) ಬಲಪಡಿಸುವುದು, ಭೂಸುಧಾರಣೆಗಳ ಅನುಷ್ಠಾನ, ಉದ್ಯೋಗ ಖಾತರಿ ಶಾಸನ, ಕೃಷಿ ಕೂಲಿಕಾರರಿಗೆ ಸಮಗ್ರ ಶಾಸನ, ಖಾಸಗಿ ವಲಯದಲ್ಲೂ ಮೀಸಲಾತಿ, ಕನಿಷ್ಠ ವೇತನ, ಶಿಕ್ಷಣಕ್ಕೆ ಒಟ್ಟು ರಾಷ್ಟ್ರೀಯ ಉತ್ಪನ್ನದ ಶೇ.6 ರಷ್ಟು ವೆಚ್ಚ, ಅರಣ್ಯ ವಾಸಿಗಳ ಹಕ್ಕುಗಳ ರಕ್ಷಣೆ, ಪ್ರತಿಗಾಮಿ ವಿದ್ಯುತ್ ಮಸೂದೆಯ ಪುನರ್‌ಪರಿಶೀಲನೆ, ಖಾಸಗೀಕರಣದಿಂದ ಲಾಭದಾಯಕ ಸಾರ್ವಜನಿಕ ವಲಯದ ಘಟಕಗಳ ರಕ್ಷಣೆ ಮೊದಲಾದ ಮಹತ್ವದ ಅಂಶಗಳನ್ನು ಸೇರ್ಪಡೆ ಮಾಡುವಲ್ಲಿ ಎಡಪಕ್ಷಗಳು ಯಶಸ್ವಿಯಾದವು.

ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಕೆಲವು ಭರವಸೆಗಳನ್ನು ಜಾರಿಗೆ ತಂದಿರುವುದು ಒಂದು ಗಮನಾರ್ಹ ಸಾಧನೆಯೆ ಆಗಿದೆ. ಕರಾಳ ಪೋಟಾ ಕಾಯ್ದೆಯನ್ನು ರದ್ದು ಮಾಡಲಾಗಿದೆ. ಷೇರು ಹಿಂಪಡೆತ ಇಲಾಖೆಯನ್ನು ಕಳಚಿ ಹಾಕಲಾಗಿದೆ. ನೌಕರರ ಭವಿಷ್ಯ ನಿಧಿಯ ಮೇಲಿನ ಬಡ್ಡಿ ದರವನ್ನು ಉಳಿಸಿಕೊಳ್ಳಲಾಗಿದೆ. ಮಾಹಿತಿ ಹಕ್ಕು ಮಸೂದೆಯನ್ನು ಅಂಗೀಕರಿಸಲಾಗಿದೆ. ಉದ್ಯೋಗ ಖಾತರಿ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲಾಗಿದೆ. ಆದರೆ ಯುಪಿಎ ಸರ್ಕಾರವೂ ಸಹ ಆರ್ಥಿಕ ನೀತಿಗಳ ವಿಷಯದಲ್ಲಿ ಹಿಂದಿನ ಸರ್ಕಾರದ ಹಾದಿಯಲ್ಲೇ ಸಾಗುತ್ತಿರುವುದು ಆತಂಕದಾಯಕವಾಗಿದೆ. ಮನಮೋಹನ್ ಸಿಂಗ್ ಸರ್ಕಾರವು ದುಡಿಯುವ ಜನಗಳ ಹಿತ ಕಾಪಾಡಲು ಬದ್ಧವಾಗುವ ಬದಲು ವಿಶ್ವ ಹಣಕಾಸು ಬಂಡವಾಳಕ್ಕೆ ಮತ್ತು ದೊಡ್ಡ ಬಂಡವಾಳಗಾರರಿಗೆ ಅನುಕೂಲ ಕಲ್ಪಿಸಲು ಕಾತರವಾಗಿದೆ ಎಂಬುದು ಇಷ್ಟರಲ್ಲೇ ಸ್ಪಷ್ಟವಾಗಿದೆ.

ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಪ್ರಮುಖ ಭರವಸೆಗಳಿಗೆ ವಿರುದ್ಧವಾಗಿ ಸಾರ್ವಜನಿಕ ರಂಗದ ಲಾಭದಾಯಕ ಘಟಕಗಳ ಷೇರುಗಳನ್ನು ಮಾರಾಟ ಮಾಡಲು ಮುಂದಾಗಿದೆ. ಜನತೆಯ ಮೇಲೆ ಪೆಟ್ರೋಲ್, ಡಿಸೇಲ್ ಬೆಲೆ ಏರಿಕೆಯ ಹೊರೆಯನ್ನು ಹೇರಲಾಗುತ್ತಿದೆ. ರೈತ ವಿರೋಧಿ ಬೀಜ ಮಸೂದೆಯನ್ನು ಮಂಡಿಸಲಾಗಿದೆ. ಕೃಷಿ ಮಾರುಕಟ್ಟೆಗೆ ಬಹುರಾಷ್ಟ್ರೀಯ ಕಂಪೆನಿಗಳ ಪ್ರವೇಶಕ್ಕೆ ಅನುಕೂಲ ಕಲ್ಪಿಸುವ ವಾಜಪೇಯಿ ಸರ್ಕಾರ ಅಂಗೀಕರಿಸಿದ ಎ.ಪಿ.ಎಂ.ಸಿ. ಮಾದರಿ ಕಾಯ್ದೆಯನ್ನು ಜಾರಿಗೊಳಿಸುವಂತೆ ರಾಜ್ಯ ಸರ್ಕಾರಗಳನ್ನು ಒತ್ತಾಯಿಸಲಾಗುತ್ತಿದೆ. ವಿದ್ಯುತ್ ರಂಗದ ಖಾಸಗೀಕರಣ ಪ್ರಕ್ರಿಯೆಯನ್ನು ನಿಲ್ಲಿಸಲಾಗಿಲ್ಲ. ಉದ್ಯೋಗ ಖಾತರಿ ಮಸೂದೆಯನ್ನು ಮಂಡಿಸಲಾಗಿದ್ದರೂ ಅದನ್ನು ದುರ್ಬಲಗೊಳಿಸುವ ಹುನ್ನಾರ ನಡೆದಿದೆ. ಅರಣ್ಯ ಭೂಮಿಯಲ್ಲಿ ವಾಸಿಸುತ್ತಿರುವ ಮತ್ತು ಬೇಸಾಯ ಮಾಡುತ್ತಿರುವ ಆದಿವಾಸಿಗಳ ಮತ್ತು ಇತರೆ ಬಡವರ ಹಿತರಕ್ಷಣೆಗೆ ಕ್ರಮವಹಿಸುತ್ತಿಲ್ಲ. ಹೋರಾಟವಿಲ್ಲದೆ ಏನನ್ನೂ ಪಡೆಯಲು ಸಾಧ್ಯವಿಲ್ಲ ಎಂದು ಮತ್ತೆ ಸಾಬೀತಾಗುವಂತಾಗಿದೆ.



ಸಿಪಿಐ(ಎಂ) 18ನೇ ಅಧಿವೇಶನದ ಕರೆ :

ಜನತೆಯ ಹಿತಾಸಕ್ತಿಯ ಕಾವಲುಗಾರನಾಗಿ

...ತ್ತು ಉದ್ಯೋಗಕ್ಕಾಗಿ ...ಂದೋಲನ

ಕೆಲಸ ಮಾಡುತ್ತಾ ಬಂದಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 18ನೇ ಮಹಾಧಿವೇಶನವು ತನ್ನ ರಾಜಕೀಯ ಗೊತ್ತುವಳಿಯಲ್ಲಿ ದೇಶದ ರಾಜಕೀಯ ಪರಿಸ್ಥಿತಿಯನ್ನು ವಿವರವಾಗಿ ವಿಶ್ಲೇಷಿಸಿ ಯುಪಿಎ ಸರ್ಕಾರವು ಹಿಂದಿನ ಸರ್ಕಾರದ ನೀತಿಗಳಿಂದ ಸಂಕಷ್ಟಕ್ಕೆ ಒಳಗಾದ ಜನಸಾಮಾನ್ಯರಿಗೆ ಅಗತ್ಯ ಪರಿಹಾರವನ್ನು ಒದಗಿಸುವಲ್ಲಿ ವಿಫಲವಾಗಿದೆ ಎಂಬ ತೀರ್ಮಾನಕ್ಕೆ ಬಂದಿದೆ. ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಭರವಸೆಗಳ ಈಡೇರಿಕೆಗಾಗಿ, ಯುಪಿಎ ಸರ್ಕಾರದ ಜನವಿರೋಧಿ ಕ್ರಮಗಳನ್ನು ಪ್ರತಿರೋಧಿಸುವುದಕ್ಕಾಗಿ ಮತ್ತು ಸಿಪಿಐ(ಎಂ)ನ ಪರ್ಯಾಯ ಧೋರಣೆಗಳನ್ನು ಜನತೆಯ ಮುಂದೆ ಕೊಂಡೊಯ್ಯುವುದಕ್ಕಾಗಿ ರಾಷ್ಟ್ರವ್ಯಾಪಿ ಬಲಿಷ್ಠ ಹೋರಾಟಗಳನ್ನು ರೂಪಿಸಬೇಕೆಂದೂ ಮತ್ತು ಈ ಹೋರಾಟಗಳಲ್ಲಿ ವಿಶಾಲ ಜನಸಮುದಾಯಗಳು ಪಾಲ್ಗೊಳ್ಳುವಂತೆ ಮಾಡಬೇಕೆಂದು ಸಿಪಿಐ(ಎಂ)ನ 18ನೇ ಮಹಾಧಿವೇಶನವು ಕರೆ ನೀಡಿದೆ. ಈ ನಿಟ್ಟಿನಲ್ಲಿ ಭೂಮಿ, ಆಹಾರ ಮತ್ತು ಉದ್ಯೋಗದ ಬೇಡಿಕೆಗಳಿಗಾಗಿ ದೇಶವ್ಯಾಪಿ ಚಳುವಳಿ ನಡೆಸಲು ಸಿಪಿಐ(ಎಂ) ನಿರ್ಧರಿಸಿದೆ.

ಪಕ್ಷದ ಮಹಾಧಿವೇಶನದ ಕರೆಯನ್ನು ದೇಶಾದ್ಯಂತ ಜಾರಿಗೊಳಿಸುವ ಕುರಿತು ಚರ್ಚಿಸಿದ ಪಕ್ಷದ ಕೇಂದ್ರ ಸಮಿತಿಯು, ಆಗಸ್ಟ್ ತಿಂಗಳಲ್ಲಿ ಈ ಬೇಡಿಕೆಗಳ ಕುರಿತು ಜನತೆಯ ನಡುವೆ ವ್ಯಾಪಕ ಪ್ರಚಾರ ನಡೆಸಬೇಕೆಂದೂ ಅನಂತರ ನಿರ್ದಿಷ್ಟ ಪ್ರಶ್ನೆಗಳಿಗಾಗಿ ನಿರ್ದಿಷ್ಟ ಪ್ರದೇಶಗಳಲ್ಲಿ ಸಮರಶೀಲ ಹೋರಾಟಗಳನ್ನು ಸಂಘಟಿಸಬೇಕೆಂದು ನಿರ್ಧರಿಸಿದೆ. ಪಕ್ಷದ ಈ ಸ್ವತಂತ್ರ ಚಟುವಟಿಕೆಯಲ್ಲಿ ಪಕ್ಷವು ಇಡಿಯಾಗಿ ತನ್ನನ್ನು ತೊಡಗಿಸಿಕೊಳ್ಳಬೇಕೆಂದೂ ಮತ್ತು ಆ ಮೂಲಕ ಹೊಸ ಜನವಿಭಾಗಗಳನ್ನು ತಲುಪಲು ಹಾಗೂ ಅವರನ್ನು ಹೋರಾಟಕ್ಕಿಳಿಸಲು ಸಾಧ್ಯವಾಗಬೇಕೆಂದು ಪಕ್ಷದ ಕೇಂದ್ರ ಸಮಿತಿ ತೀರ್ಮಾನಿಸಿದೆ.



ಬೇಡಿಕೆಗಳು : 1. ಆಹಾರ :

ರೇಶನ್ ವ್ಯವಸ್ಥೆ : ನಮ್ಮ ಸಾರ್ವಜನಿಕ ವಿತರಣಾ ವ್ಯವಸ್ಥೆಯು ಸಮಾಜದ ಬಡ ಮತ್ತು ಅಂಚಿಗೆ ಸರಿಸಲ್ಪಟ್ಟ ವಿಭಾಗಗಳಿಗೆ ಅವರು ತೆರಬಹುದಾದ ಬೆಲೆಗಳಲ್ಲಿ ಆಹಾರ ಧಾನ್ಯಗಳನ್ನು ದೊರಕಿಸಿ ಕೊಡುವಲ್ಲಿ ಒಂದು ಮಟ್ಟದವರೆಗೆ ಪರಿಣಾಮಕಾರಿ ಸಾಧನವಾಗಿತ್ತು. ಆದರೆ ನವ ಉದಾರೀಕರಣದ ನೀತಿಗಳ ಫಲವಾಗಿ ಈ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ಕಳಚಿಹಾಕಲಾಗುತ್ತಿದೆ. ರೇಶನ್ ಕಾರ್ಡ್‌ದಾರರನ್ನು ಬಿಪಿಎಲ್ ಮತ್ತು ಎಪಿಎಲ್ ವಿಭಾಗಗಳಾಗಿ ವಿಂಗಡಿಸಿ, ಕೆಲವೇ ವಿಭಾಗಗಳನ್ನು ಗುರಿಯಾಗಿಸಿದ ವ್ಯವಸ್ಥೆಯ ಜಾರಿಯಿಂದಾಗಿ ಬಹುಪಾಲು ಬಡವಿಭಾಗಗಳು ಸಾರ್ವಜನಿಕ ವಿತರಣಾ ವ್ಯವಸ್ಥೆಯ ವ್ಯಾಪ್ತಿಯಿಂದ ಹೊರಗುಳಿಯುವಂತಾಗಿದೆ. ಬಿಪಿಎಲ್ ಕಾರ್ಡುಗಳ ಫಲಾನುಭವಿಗಳನ್ನು ಗುರುತಿಸಲು ಅಸಂಬದ್ಧ ಮಾನದಂಡಗಳನ್ನು ವಿಧಿಸಲಾಗಿದೆ. ಅಂತ್ಯೋದಯ ಯೋಜನೆ ಕೇವಲ ಹೆಸರಿಗಷ್ಟೇ ಎನ್ನುವಂತೆ ಜಾರಿಯಲ್ಲಿದೆ. ಎಪಿಎಲ್ ಕಾರ್ಡುದಾರರು ರೇಶನ್ ವ್ಯವಸ್ಥೆಯನ್ನು ಅವಲಂಬಿಸಿಲ್ಲ; ಏಕೆಂದರೆ ಎಪಿಎಲ್ ದರಗಳು ಮಾರುಕಟ್ಟೆ ದರಗಳಿಗೆ ಸಮವಾಗಿವೆ. ಹೀಗಾಗಿ ಬಹುಪಾಲು ಎಪಿಎಲ್ ಕಾರ್ಡುದಾರರಿಗಾಗಿ ಬಳಸಬೇಕಾಗಿದ್ದ ಆಹಾರಧಾನ್ಯಗಳನ್ನು ಕಾಳಸಂತೆಗೆ ಸಾಗಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ರೇಶನ್ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸುವಂತೆ ಪ್ರಬಲ ಹೋರಾಟ ನಡೆಸಬೇಕಾಗಿದೆ. ಅಲ್ಲಿಯ ವರೆಗೆ ಬಿಪಿಎಲ್ ಕಾರ್ಡು ನಿರಾಕರಿಸಲ್ಪಟ್ಟ ಎಲ್ಲ ಬಡವರಿಗೆ ಕಾರ್ಡುಗಳನ್ನು ವಿತರಿಸುವಂತೆ ಒತ್ತಾಯಿಸಬೇಕಾಗಿದೆ. ಅಸಂಬದ್ಧ ಮಾನದಂಡಗಳನ್ನು ತೆಗೆದುಹಾಕಬೇಕಾಗಿದೆ. ಅಂತ್ಯೋದಯ ಯೋಜನೆಯನ್ನು ವಿಸ್ತರಿಸುವಂತೆ ಒತ್ತಡ ಹೇರಬೇಕಾಗಿದೆ. ರೇಶನ್ ವ್ಯವಸ್ಥೆಗೆ ಇನ್ನಷ್ಟು ಅಗತ್ಯ ವಸ್ತುಗಳನ್ನು ಸೇರ್ಪಡೆ ಮಾಡುವಂತೆಯೂ ಹೋರಾಟ ನಡೆಯಬೇಕಾಗಿದೆ.

ಕೂಲಿಗಾಗಿ ಕಾಳು ಯೋಜನೆ

ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗದ ಅವಕಾಶಗಳು ತೀವ್ರವಾಗಿ ಕಡಿತಗೊಳ್ಳುತ್ತಿವೆ. ಹೆಚ್ಚುತ್ತಿರುವ ಕೃಷಿ ಕೂಲಿಕಾರರನ್ನು ಬಳಸಿಕೊಳ್ಳಲು ಕೃಷಿ ವಲಯ ಅಸಮರ್ಥವಾಗುತ್ತಿದ್ದು ಕೃಷಿ ಕೂಲಿಕಾರರ ವಲಸೆ ಸಮಸ್ಯೆ ಗಂಭೀರ ಸ್ವರೂಪ ತಾಳುತ್ತಿದೆ. ಈ ದಿಶೆಯಲ್ಲಿ 'ಕೂಲಿಗಾಗಿ ಕಾಳು' ಯೋಜನೆಯನ್ನು ಸಮರ್ಪಕವಾಗಿ ಹಾಗೂ ವ್ಯಾಪಕವಾಗಿ ಜಾರಿಗೊಳಿಸಿದರೆ ಕೆಲಸವಿಲ್ಲದೆ ಊರೂರು ಅಲೆಯುವ ಗ್ರಾಮೀಣ ಬಡವರಿಗೆ ಸಾಕಷ್ಟು ಪರಿಹಾರ ಲಭ್ಯವಾಗುತ್ತದೆ. ಈ ಯೋಜನೆಯನ್ನು ಸರಿಯಾಗಿ ಜಾರಿಗೆ ತಂದರೆ ಆಹಾರಧಾನ್ಯ ಬೆಳೆಯುವ ರೈತರಿಗೂ ಪ್ರೋತ್ಸಾಹ ದೊರೆಯುತ್ತದೆ.

ಕೂಲಿಗಾಗಿ ಕಾಳು ಯೋಜನೆಯ ಅಡಿಯಲ್ಲಿ ವಿತರಿಸುವ ಆಹಾರ ಧಾನ್ಯಗಳ ಬೆಲೆಗಳನ್ನು ಬಿಪಿಎಲ್ ದರಗಳಲ್ಲಿಯೇ ಲೆಕ್ಕ ಹಾಕುವಂತಾಗಬೇಕು. ಯೋಜನೆಯನ್ನು ವ್ಯಾಪಕವಾಗಿ ವಿಸ್ತರಿಸಿ ಆಹಾರ ಧಾನ್ಯಗಳ ಹಂಚಿಕೆಯನ್ನು ಹೆಚ್ಚಿಸಬೇಕು. ಈ ಯೋಜನೆಯ ಅಡಿಯಲ್ಲಿ ಕೆಲಸ ಮಾಡುವವರಿಗೆ ರಾಜ್ಯ ಸರ್ಕಾರಗಳು ನಿಗದಿ ಪಡಿಸಿರುವ ಕನಿಷ್ಟ ವೇತನವನ್ನು ಶೇಕಡಾ 50 ರಷ್ಟು ನಗದು ರೂಪದಲ್ಲಿಯೂ ಶೇಕಡಾ 50 ರಷ್ಟು ಆಹಾರ ಧಾನ್ಯಗಳ ರೂಪದಲ್ಲಿಯೂ ವಿತರಿಸುವಂತಾಗಬೇಕು. ತುಂಡು ಕೆಲಸ ವಿಧಾನದ ಬದಲಾಗಿ ದಿನಗೂಲಿ ಆಧಾರದಲ್ಲಿ ಕೆಲಸಗಾರರನ್ನು ನೇಮಿಸಿಕೊಳ್ಳಬೇಕು. ಕಂಟ್ರಾಕ್ಟುದಾರರಿಗೆ ಹಾಗೂ ಯಂತ್ರಗಳ ಬಳಕೆಗೆ ಅವಕಾಶ ಇರಬಾರದು. ಈ ಯೋಜನೆಯನ್ನು ಈಗಾಗಲೇ ಗುರುತಿಸಲಾಗಿರುವ ಹಿಂದುಳಿದ ಜಿಲ್ಲೆಗಳಲ್ಲದೆ, ಇತರ ಅಧ್ಯತಾ ಜಿಲ್ಲೆಗಳಿಗೆ ವಿಸ್ತರಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡಬೇಕು. ಯೋಜನೆಯ ಸಮರ್ಪಕ ನಿರ್ವಹಣೆಗಾಗಿ ಹಾಗೂ ಭ್ರಷ್ಟಾಚಾರವನ್ನು ತಡೆಗಟ್ಟುವ ಸಲುವಾಗಿ ಯೋಜನೆಯ ಮಾರ್ಗದರ್ಶಿ ಸೂತ್ರಗಳನ್ನು ಕೂಡಲೇ ಪರಿಷ್ಕರಿಸಬೇಕು. ಯೋಜನೆಯ ವಿಕೇಂದ್ರೀಕರಣ, ಯೋಜನೆಯಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ಖಾತರಿಪಡಿಸಬೇಕು. ಕನಿಷ್ಠ ಶೇ.30 ರಷ್ಟು ಕೆಲಸವನ್ನು ಮಹಿಳೆಯರಿಗೆ ನೀಡಬೇಕು.



ಭೂಮಿ :

ಭೂಮಿ ಎಲ್ಲ ಅಭಿವೃದ್ಧಿಯ ಮೂಲ ಆಧಾರವಾಗಿದೆ. ಆದರೆ ಭೂಮಿ ಕೆಲವೇ ಕೆಲವು ಜಮೀನ್ದಾರರ ವಶದಲ್ಲಿದ್ದರೆ ಅದು ಪ್ರಗತಿಯನ್ನು ತಡೆಯುತ್ತದೆ. ಕಾನೂನಿನ ಮೂಲಕ ಭೂಹಿಡುವಳಿಗಳಿಗೆ ಮಿತಿ ಹಾಕಿ ಹೆಚ್ಚುವರಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಅದನ್ನು ಭೂಹೀನ ಬಡವರಿಗೆ ವಿತರಣೆ ಮಾಡುವುದಕ್ಕೆ ಭೂಸುಧಾರಣೆಗಳು ಎನ್ನಲಾಗುತ್ತದೆ. ಭೂಸುಧಾರಣಾ ಕ್ರಮಗಳು ಜಾರಿಯಾದರೆ, ಭೂಹೀನ ಕೃಷಿಕೂಲಿಕಾರರಿಗೆ ಮತ್ತು ಬಡ ರೈತರಿಗೆ ಹೆಚ್ಚುವರಿ ಭೂಮಿ ವಿತರಣೆಯಾಗುತ್ತದೆ. ಇದರಿಂದಾಗಿ ಕೃಷಿ ಉತ್ಪಾದನೆ ಅಧಿಕಗೊಳ್ಳುತ್ತದೆ. ಗ್ರಾಮೀಣ ಬಡವರ ಕೊಂಡುಕೊಳ್ಳುವ ಸಾಮರ್ಥ್ಯ ಹೆಚ್ಚಾಗುತ್ತಿದೆ. ಮಾರುಕಟ್ಟೆ ವಿಸ್ತಾರಗೊಳ್ಳುತ್ತದೆ. ಕೈಗಾರೀಕರಣ ತೀವ್ರಗೊಳ್ಳುತ್ತದೆ. ಉದ್ಯೋಗದ ಅವಕಾಶಗಳು ಹೆಚ್ಚುತ್ತವೆ. ಆದರೆ ಸ್ವಾತಂತ್ರ್ಯಾನಂತರ, ಕಾಂಗ್ರೆಸ್ ಸರ್ಕಾರಗಳು ನೈಜವಾದ ಭೂಸುಧಾರಣೆಗಳನ್ನು ಜಾರಿಗೆ ತರಲು ಮುಂದಾಗಲಿಲ್ಲ. ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರ ರಾಜ್ಯಗಳಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರಗಳು ಮಂತ್ರ ಅತ್ಯಂತ ಪ್ರಗತಿಪರವಾದ ಭೂಸುಧಾರಣಾ ಕಾನೂನುಗಳನ್ನು ರೂಪಿಸಿ ಅವುಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಜಾರಿಗೆ ತಂದವು.

90ರ ದಶಕದಲ್ಲಿ ಆರಂಭಿಸಲಾದ ಉದಾರೀಕರಣ ನೀತಿಗಳ ಪರಿಣಾಮವಾಗಿ ಭೂಸುಧಾರನೆಗಳ ಬಗ್ಗೆ ಮಾತೆತ್ತುವುದನ್ನೇ ಕೈಬಿಡಲಾಯಿತು. ಮಾತ್ರವಲ್ಲ ಅಳಿದುಳಿದ ಭೂಸುಧಾರಣಾ ಕ್ರಮಗಳನ್ನು ದುರ್ಬಲಗೊಳಿಸಿ ಭಾರಿ ಪ್ರಮಾಣದ ಭೂಮಿಯನ್ನು ದೊಡ್ಡ ಬಂಡವಾಳಶಾಹಿ ಮನೆತನಗಳಿಗೆ ಮತ್ತು ವಿದೇಶಿ ಬಹುರಾಷ್ಟ್ರೀಯ ಕಂಪೆನಿಗಳಿಗೆ ಮಾರಾಟ ಮಾಡುವುದನ್ನು ಹಾಗೂ ಲೀಸ್ ಆಧಾರದಲ್ಲಿ ನೀಡುವುದನ್ನು ಆರಂಭಿಸಲಾಯಿತು. ಉದಾಹರಣೆಗೆ, ತಮಿಳುನಾಡು **ಸರ್ಕಾರ 50 ಲಕ್ಷ ಎಕರೆ** ಸರ್ಕಾರಿ ಬೀಳು ಭೂಮಿಯನ್ನು ಬಹುರಾಷ್ಟ್ರೀಯ ಕಂಪೆನಿಗಳಿಗೆ ಹಸ್ತಾಂತರಿಸಿತು. ಕರ್ನಾಟಕದಲ್ಲಿ ಭೂಸುಧಾರಣಾ ಕಾಯ್ದೆಯನ್ನು ತಿದ್ದುಪಡಿಮಾಡಿ ಕೃಷಿಯೇತರ ಉದ್ದೇಶಗಳಿಗೆ ಕೃಷಿ ಭೂಮಿಯನ್ನು ಬಳಕೆ ಮಾಡಲು ಆಸ್ಪದ



ಮಾಡಿಕೊಡಲಾಯಿತು. ಭೂಸುಧಾರಣಾ ಕಾಯ್ದೆಗಳಿಗೆ ಮಾಡಲಾದ ಇಂತಹ ಪ್ರತಿಗಾಮಿ ತಿದ್ದುಪಡಿಗಳನ್ನು ಕೈಬಿಟ್ಟು ಪಶ್ಚಿಮ ಬಂಗಾಳ ಹಾಗೂ ಕೇರಳ ಮಾದರಿಯಲ್ಲಿ ಪ್ರಗತಿಪರ ಭೂಸುಧಾರಣೆಗಳನ್ನು ಜಾರಿಗೆ ತರುವಂತೆ ಒತ್ತಾಯಿಸಿ ತೀವ್ರತರವಾದ ಹೋರಾಟ ನಡೆಯಬೇಕಾಗಿದೆ. ಹೆಚ್ಚುವರಿ ಭೂಮಿಯನ್ನು ವಿತರಣೆ ಮಾಡುವಾಗ ಮಹಿಳೆಯರಿಗೆ ಜಂಟಿ ಪಟ್ಟಾ ನೀಡುವಂತೆ ಆಗ್ರಹಿಸಬೇಕಾಗಿದೆ. ಭೂಮಾಲಿಕರು ಅಕ್ರಮವಾಗಿ ತಮ್ಮ ಸ್ವಾಧೀನದಲ್ಲಿ ಕಟ್ಟಿಕೊಂಡಿರುವ ಹೆಚ್ಚುವರಿ ಎಂದು ಘೋಷಿಸಲಾದ ಭೂಮಿಯನ್ನು ಸರ್ಕಾರ ವಶಪಡಿಸಿಕೊಂಡು ಭೂಹೀನರಿಗೆ ವಿತರಣೆ ಮಾಡಲು ಹೋರಾಟ ನಡೆಸಬೇಕಾಗಿದೆ. ಗೇಣಿದಾರರನ್ನು ಒಕ್ಕಲೆಬ್ಬಿಸದಂತೆ ಮತ್ತು ಅವರನ್ನು ಕಾನೂನುಬದ್ಧವಾಗಿ ನೊಂದಾಯಿಸುವಂತೆ ಒತ್ತಾಯಿಸಬೇಕಾಗಿದೆ. ಸರ್ಕಾರಿ ಬೀಳು ಭೂಮಿಯನ್ನೂ ಭೂಹೀನ ಕೃಷಿ ಕೂಲಿಕಾರರಿಗೆ ವಿತರಣೆ ಮಾಡುವಂತೆ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರಿಗೆ, ದಲಿತ ಕುಟುಂಬಗಳಿಗೆ ಆದ್ಯತೆ ನೀಡುವಂತೆ ಸರ್ಕಾರವನ್ನು ಆಗ್ರಹಿಸಬೇಕಾಗಿದೆ. ದಲಿತ ಕುಟುಂಬಗಳಿಗೆ ಸರ್ಕಾರದಿಂದ ಮಂಜೂರಾದ ಭೂಮಿಯನ್ನು ಶ್ರೀಮಂತರನ್ನು ಕಬಳಿಸಿದ್ದನ್ನು ಪತ್ತೆಹಚ್ಚಿ ದಲಿತರಿಗೆ ಅವರ ಭೂಮಿ ವಾಪಸ್ ಸಿಗುವಂತೆ ಮಾಡಬೇಕಾಗಿದೆ. ಸರ್ಕಾರಿ ಭೂಮಿಯನ್ನು ಬಹುರಾಷ್ಟ್ರೀಯ ಕಂಪೆನಿಗಳಿಗಾಗಲಿ, ಬಂಡವಾಳಿಗರಿಗಾಗಲಿ ನೀಡುವುದನ್ನು ಬಲವಾಗಿ ವಿರೋಧಿಸಬೇಕು.

ಈ ನಡುವೆ, ಅರಣ್ಯ ಭೂಮಿಯನ್ನು ವಾಸಮಾಡುತ್ತಿರುವ-ಸಾಗುವಳಿ ಮಾಡಿಕೊಂಡು ಬಂದಿರುವ ಆದಿವಾಸಿಗಳನ್ನು ಮತ್ತು ಇತರ ಬಡವರನ್ನು ಒಕ್ಕಲೆಬ್ಬಿಸುವ ಕ್ರಮ ಪ್ರಾರಂಭವಾಗಿದೆ. ಸರ್ವೋಚ್ಚ ನ್ಯಾಯಾಲಯದ ಹೆಸರಿನಲ್ಲಿ 2002ರಲ್ಲಿ ವಾಜಪೇಯಿ ಸರ್ಕಾರ ಈ ಆದೇಶವನ್ನು ಹೊರಡಿಸಿ ಲಕ್ಷಾಂತರ ಕುಟುಂಬಗಳನ್ನು ಬೀದಿ ಪಾಲು ಮಾಡಿದೆ. ಪಶ್ಚಿಮ ಬಂಗಾಳ ಮತ್ತು ತ್ರಿಪುರ ರಾಜ್ಯಗಳ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರಗಳು ಮಾತ್ರ ಅರಣ್ಯ ಭೂಮಿ ಸಾಗುವಳಿದಾರರನ್ನು ಒಕ್ಕಲೆಬ್ಬಿಸಲು ಕೇಂದ್ರ ಸರ್ಕಾರವು ನೀಡಿದ ಆದೇಶವನ್ನು ಜಾರಿಗೊಳಿಸದಿರಲು ನಿರ್ಧರಿಸಿವೆ. ಅರಣ್ಯ ಭೂಮಿ ಮತ್ತು ಅರಣ್ಯ ಉಪ ಉತ್ಪನ್ನಗಳ ಮೇಲೆ ಆದಿವಾಸಿಗಳ ಹಕ್ಕುಗಳ ರಕ್ಷಣೆಗಾಗಿ ಹೋರಾಡಬೇಕಾಗಿದೆ. ಸ್ವಂತ ಮನೆ ನಿವೇಶನಗಳಿಲ್ಲದ ಕೃಷಿ ಕೂಲಿಕಾರರಿಗೆ ಹಿತ್ತಲು ಸಹಿತದ ಮನೆಗಳನ್ನು ಒದಗಿಸುವಂತೆ ಒತ್ತಾಯಿಸಬೇಕಾಗಿದೆ. 1980ರ ಅರಣ್ಯ ಸಂರಕ್ಷಣಾ ಕಾಯ್ದೆಗೆ ಅಗತ್ಯ ತಿದ್ದುಪಡಿ ತಂದು ಅರಣ್ಯವಾಸಿಗಳ ಮತ್ತು ಅರಣ್ಯ ಭೂಮಿ ಸಾಗುವಳಿದಾರರ ಹಕ್ಕುಗಳಿಗೆ ರಕ್ಷಣೆ ನೀಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕಾಗಿದೆ.

ಉದ್ಯೋಗ : ಉದಾರೀಕರಣದ ಪ್ರಕ್ರಿಯೆಗಳ ಪರಿಣಾಮವಾಗಿ ಇಂದು ದೇಶದಲ್ಲಿ ನಿರುದ್ಯೋಗ ಸಮಸ್ಯೆ ಸ್ಫೋಟಕ ಘಟ್ಟಕ್ಕೆ ತಲುಪಿದೆ. ಈಗ ಅದು 'ಉದ್ಯೋಗ ರಹಿತ ಬೆಳವಣಿಗೆ' ಆಗಿರದೆ 'ಉದ್ಯೋಗ ನಷ್ಟದ ಬೆಳವಣಿಗೆ' ಯಾಗಿದೆ. 2001 ರಿಂದ 2003ರ ನಡುವಿನ ಮೂರೇ ಮೂರು ವರ್ಷಗಳಲ್ಲಿ, ಸಂಘಟಿತ ವಲಯದ ಕನಿಷ್ಠ 8 ಲಕ್ಷ ಉದ್ಯೋಗಗಳು ಕಡಿತಗೊಂಡಿವೆ. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಕೇಂದ್ರ ಸರ್ಕಾರದ ಸೇವೆಗಳಲ್ಲಿ ವರ್ಷಕ್ಕೆ 66 ಸಾವಿರ ಹುದ್ದೆಗಳನ್ನು ರದ್ದುಗೊಳಿಸಲು ನಿರ್ಧರಿಸಿದ್ದು ಹಾಗೇ ಜಾರಿಯಲ್ಲಿದೆ. ಉದಾರೀಕರಣದ ಪ್ರಕ್ರಿಯೆ ಆರಂಭವಾದ ನಂತರ ಕೇಂದ್ರ ಸರ್ಕಾರದ ವಲಯದಲ್ಲಿ ಕನಿಷ್ಠ 10 ಲಕ್ಷ ಹುದ್ದೆಗಳನ್ನು ರದ್ದುಗೊಳಿಸಲಾಗಿದೆ. ಇನ್ನೊಂದು 15

ಪುಟ 8 ಕ್ಕೆ

ಆಕಾಶವ ಎತ್ತಿ ನಿಲ್ಲಿಸಿ.... ನೀಲಿಯಾಗಿ ನಿಂತವರು...

ಸಾಲುಸಾಲು ಗಗನ ಚುಂಬಿ ಕಟ್ಟಡಗಳನ್ನು ಎತ್ತಿ ನಿಲ್ಲಿಸುವವರು ಈ ಕಟ್ಟಡ ಕಾರ್ಮಿಕರು. ಆದರೆ ಇವರು ತಮ್ಮ ಬದುಕಿನಲ್ಲಿ ತಲೆ ಎತ್ತಿ ನಿಲ್ಲುವುದು ಸಾಧ್ಯವಾಗಿದೆಯೇ ಎಂದು ನೋಡಿಕೊಂಡರೆ, ನಿಲ್ಲಲೂ ಸರಿಯಾದ ನೆಲೆ ಇಲ್ಲದೆ ಪಾತಾಳಕ್ಕೆ ಕುಸಿಯುತ್ತಿರುವಂತಹ ಪರಿಸ್ಥಿತಿ ಅವರದ್ದು. 'ಅರಮನೆಗಳನ್ನು ಕಟ್ಟುವವರಿಗೆ ಮುರುಕಲು ಗುಡಿಸಲು' ಎಂಬುದು ಗತ ಇತಿಹಾಸ. ದುಡಿಯುವ ವರ್ಗದ ಚಾರಿತ್ರಿಕ ಸಂಘರ್ಷ ಜಗತ್ತನ್ನು ಸಾಕಷ್ಟು ಬದಲಾಯಿಸಿದೆ. ದುಡಿಮೆಗಾರರೂ ಸಹ ಮನುಷ್ಯರು. ಮನುಷ್ಯ ಜೀವನದ ಎಲ್ಲ ಅಗತ್ಯಗಳೂ ದುಡಿಮೆಗಾರರಿಗೂ ಇದೆ. ಶ್ರಮಕ್ಕೆ ತಕ್ಕ ಪ್ರತಿಫಲ ನೀಡಿ ಆತ್ಮಗೌರವದ ಬದುಕನ್ನು ಬಾಳಲು ಬಿಡಿ ಎಂಬುದೇ ದುಡಿಯುವ ವರ್ಗದ ಇಂದಿನ ಆಗ್ರಹ.

ಶ್ರಮಿಕ ವರ್ಗವೇ ನಮ್ಮ ಸಮಾಜದ ಚಲನೆಗೆ ಬದಲಾವಣೆಗೆ - ಪ್ರಗತಿಗೆ ಚಾಲಕ ಶಕ್ತಿ. ದುಡಿಮೆ ಇಲ್ಲದೇ ಸಮಾಜವೇ ಇಲ್ಲ. ಮಹಡಿಗಳನ್ನು ಎತ್ತಿ ನಿಲ್ಲಿಸುವವರು - ರಸ್ತೆ, ಸೇತುವೆ, ನಾಲೆ ನಿರ್ಮಿಸುವ ಈ ಶ್ರಮಿಕ ವಿಭಾಗದ ಕಾರ್ಮಿಕರ ಬದುಕಿಗೆ ಆತಂಕಗಳು ಜಾಸ್ತಿ. ಕಟ್ಟುವ ಕಟ್ಟಡಗಳಿಂದ ಇಲ್ಲವೇ ನಿರ್ಮಾಣ ಸ್ಥಳಗಳ ಆಕಸ್ಮಿಕವಾಗಿ ಆಯತಪ್ಪಿ ಬೀಳುವುದು. ಅಪಘಾತಗಳು ಸಾಮಾನ್ಯ.

ಲಾಭವೇ ಗುರಿಯಾದ ಈ ಬಂಡವಾಳಶಾಹಿ ಸಮಾಜದಲ್ಲಿ ಕಾರ್ಮಿಕರ ಜೀವಕ್ಕೆ ಅದರಲ್ಲೂ ಅಸಂಘಟಿತ ಕಾರ್ಮಿಕರ ಜೀವಕ್ಕೆ ಏನಿದೆ ಬೆಲೆ? ಮನುಷ್ಯ ಜೀವಗಳು ಹುಳುಗಳಂತೆ ಸತ್ತು ಬಿದ್ದರೂ ಈ ವ್ಯವಸ್ಥೆಗೆ ಈ ಬಗ್ಗೆ ಆಸ್ಥೆಯಿಲ್ಲ. ಚಳುವಳಿಯ ಒತ್ತಾಯಗಳಿಂದ ರೂಪಿಸಲಾಗಿರುವ ಕಾನೂನುಗಳನ್ನು ಜಾರಿ ಮಾಡುವ ಇಚ್ಛಾ ಶಕ್ತಿಯೂ ನಮ್ಮ ಸರ್ಕಾರಗಳಿಗಿಲ್ಲ.

ತಲೆಯ ಮೇಲೆ ಸದಾ ಕಾಲ ಅಪಘಾತ - ಅಪಾಯದ ತೂಗು ಕತ್ತಿ ತೂಗುತ್ತಿರುವ ಈ ಕಟ್ಟಡ ಕಾರ್ಮಿಕರು ಕರ್ನಾಟಕ ರಾಜ್ಯದಲ್ಲಿ ಸಂಘಟಿತರಾಗಿ ಸಮರಶೀಲ ಹೋರಾಟದತ್ತ ಹೆಜ್ಜೆ ಇಟ್ಟಿದ್ದಾರೆ. ಈ ಕಟ್ಟಡ ಕಾರ್ಮಿಕರ ರಾಜ್ಯ ಮಟ್ಟದ ಬೃಹತ್ ರ್‍ಯಾಲಿ ಏಪ್ರಿಲ್ 2005ರಲ್ಲಿ ಬೆಂಗಳೂರು ನಗರದಲ್ಲಿ ನಡೆದು ರಾಜ್ಯದಲ್ಲಿ 'ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಾಯಿದೆ'ಯನ್ನು ಜಾರಿಗೆ ತಂದು ಈ ಕಾರ್ಮಿಕರ ಬದುಕಿಗೆ ಕನಿಷ್ಠ ಭದ್ರತೆ ಒದಗಿಸಬೇಕೆಂದು ಆಗ್ರಹಿಸಲಾಗಿತ್ತು. ಮಂಗಳೂರು - ಉಡುಪಿ ಮತ್ತಿತರ ಜಿಲ್ಲೆಗಳಲ್ಲಿ ಈ ಹೋರಾಟದ ಮುಂದುವರಿಕೆಯಾಗಿ ಕಟ್ಟಡ ಕಾರ್ಮಿಕರ ಬೃಹತ್ ಪ್ರತಿಭಟನೆಗಳು ನಡೆದಿವೆ. ಈ ಕುರಿತ ವರದಿಗಳು ಇಲ್ಲಿವೆ.



ಮಂಗಳೂರಿನಲ್ಲಿ ನಡೆದ ಪ್ರತಿಭಟನೆ

ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಾಯಿದೆ ಜಾರಿಗೊಳಿಸಲು ಆಗ್ರಹ

ಕಟ್ಟಡ ಮತ್ತು ಇತರ ನಿರ್ಮಾಣ ಕಾಯಿದೆಯನ್ನು ಕರ್ನಾಟಕ ರಾಜ್ಯ ಸರ್ಕಾರ ಜಾರಿಗೊಳಿಸಬೇಕೆಂದು ಒತ್ತಾಯಿಸಿ 15.07.2005ರಂದು ದ.ಕ. ಜಿಲ್ಲಾಧಿಕಾರಿಗಳ ಕಛೇರಿ ಮುಂದುಗಡೆ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಪ್ರತಿಭಟನಾಗಾರರನ್ನು ಉದ್ದೇಶಿಸಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಫೆಡರೇಶನ್ (ಸಿಐಟಿಯು) ಅಧ್ಯಕ್ಷರಾದ ಬಿ.ಮಾಧವರವರು ಮಾತನಾಡುತ್ತಾ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಾಯಿದೆಯನ್ನು 1996ರಲ್ಲಿ ದೇವೇಗೌಡರವರು ಪ್ರಧಾನಿಯಾಗಿದ್ದಾಗ ಕೇಂದ್ರ ಸರಕಾರ ಜಾರಿಗೆ ತಂದಿದೆ. ಆದರೆ 1989ರಲ್ಲಿ ಕೇರಳದಲ್ಲಿ ಇ.ಕೆ.ನಾಯನಾರ್ ಮುಖ್ಯಮಂತ್ರಿಯಾಗಿದ್ದ ಕಾನೂನು ಜಾರಿಗೆ ತಂದು ಹಲವಾರು ಸವಲತ್ತು ನೀಡಿದೆ. ನಂತರ ತಮಿಳುನಾಡು, ಪಾಂಡಿಚೇರಿ, ಹರ್ಯಾಣ ಮತ್ತು ಪಶ್ಚಿಮ ಬಂಗಾಳದಲ್ಲಿ ಕಾನೂನು ಜಾರಿಗೆ ತಂದಿದೆ. ಕೇರಳ, ತಮಿಳು ನಾಡು ರಾಜ್ಯಗಳಲ್ಲಿ ಕಟ್ಟಡ ಕಾರ್ಮಿಕರು ಅಪಘಾತಕ್ಕೊಳಗಾದಾಗ ಮೃತಪಟ್ಟರೆ, ಅಂಗ ಊನವಾದರೆ 1 ಲಕ್ಷ ರೂಪಾಯಿ ಪರಿಹಾರ, ಪ್ರಾವಿಡೆಂಟ್ ಫಂಡ್, ಪಿಂಚಣಿ, ಮಕ್ಕಳಿಗೆ ಸ್ಕಾಲರ್‌ಶಿಪ್, ಮನೆಕಟ್ಟಲು ಸಾಲ ಸೌಲಭ್ಯ, ಸ್ವಾಭಾವಿಕವಾಗಿ ಮೃತಪಟ್ಟರೆ ಪರಿಹಾರ ಇತ್ಯಾದಿ ಸೌಲಭ್ಯ ಇದೆ. ಆದರೆ ಅದೇ ದೇವೆಗೌಡರ ಜನತಾದಳ(ಎಸ್) ಸಹಭಾಗಿತ್ವದ ಸಮ್ಮಿಶ್ರ ಸರಕಾರ ಈ ಕಾನೂನು ಜಾರಿಗೊಳಿಸಲು ಮೀನಮೇಷ ಎಣಿಸುತ್ತಿದೆ. ಕರ್ನಾಟಕದ ಕಟ್ಟಡ ಕಾರ್ಮಿಕರು ಈಗಾಗಲೇ ಸಾವಿರಾರು ಸಂಖ್ಯೆಯಲ್ಲಿ ವಿಧಾನಸೌಧ ಚಲೋ ಕಾರ್ಯಕ್ರಮ ನಡೆಸಿ ರಾಜ್ಯ ಸರಕಾರವನ್ನು ಕೈಗೊಳ್ಳದಿದ್ದರೆ ರಾಜ್ಯವ್ಯಾಪಿ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಅವರು ಎಚ್ಚರಿಸಿದರು.

ಪ್ರತಿಭಟನಗಾರರನ್ನು ಉದ್ದೇಶಿಸಿ ಸಂಘದ ಅಧ್ಯಕ್ಷರಾದ ಬಿ.ಎಂ.ಭಟ್, ಪ್ರಧಾನಕಾರ್ಯದರ್ಶಿ ವಸಂತ ಆಚಾರಿ, ಸಿಐಟಿಯು ಜಿಲ್ಲಾಧ್ಯಕ್ಷರಾದ ಕೆ.ಆರ್.ಶ್ರೀಯಾನ್, ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಖಜಾಂಚಿ ಸುಕುಮಾರ್‌ರವರು ಭಾಷಣ ಮಾಡಿದರು. ಸಿಐಟಿಯು ಮೈದಾನ ಕಛೇರಿಯಿಂದ ಮೆರವಣಿಗೆ ಹೊರಟು ಜಿಲ್ಲಾಧಿಕಾರಿಗಳ ಕಛೇರಿ ಎದುರು ನಡೆದ ಪ್ರದರ್ಶನದ ನೇತೃತ್ವವನ್ನು ಸಂಘದ ಜಿಲ್ಲಾ ಮುಖಂಡರಾದ ಕೆ.ಯಾದವಶೆಟ್ಟಿ, ಶಶೀಂದ್ರ ಕುಕ್ಯಾನ್, ಜಯಂತ ನ್ಯಾಕ್, ವಾಸುದೇವ ಜೆ.ಪಿ, ಅಶೋಕ ಸಾಲ್ಯಾನ್, ದಯಾನಂದ ಶೆಟ್ಟಿ, ಬಾಲಕೃಷ್ಣ, ಅಶೋಕ ಶ್ರೀಯಾನ್, ಜನಾರ್ಧನ, ಹೇಮಂತ ಕೊಂಚಾಡಿ, ನಾರಾಯಣ ಬೆಳ್ತಂಗಡಿ ಮುಂತಾದವರು ವಹಿಸಿದ್ದರು.

ಉಡುಪಿ ಜಿಲ್ಲಾಧಿಕಾರಿ ಕಛೇರಿ ಮುಂದೆ ಪ್ರತಿಭಟನೆ

ಇದೇ ಹಿನ್ನೆಲೆಯಲ್ಲಿ ಉಡುಪಿಯಲ್ಲಿ 'ಉಡುಪಿ ತಾಲೂಕು ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘ (ರಿ.) ಸಿಐಟಿಯು. ಇದರ ವತಿಯಿಂದ ದಿನಾಂಕ 15.07.05 ರಂದು ಉಡುಪಿ ಜಿಲ್ಲಾಧಿಕಾರಿ ಕಛೇರಿ ಎದುರು ಕಟ್ಟಡ ಕಾರ್ಮಿಕರು ಒಟ್ಟು ಸೇರಿ ಮತ ಪ್ರದರ್ಶನ ನಡೆಸಿ, ನಂತರ ಜಿಲ್ಲಾಧಿಕಾರಿಯವರ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಿದರು.

ಈ ಕಾರ್ಯಕ್ರಮದ ನೇತೃತ್ವವನ್ನು ಸಂಘದ ಅಧ್ಯಕ್ಷರಾದ ಪಿ.ವಿಶ್ವನಾಥ ರೈ ಮತ್ತು ಕಾರ್ಯದರ್ಶಿ ಕೃಷ್ಣ, ಎಸ್.ಅಮೀನ್, ಹಾಗೂ ರಾಮ ಮೇಸ್ತ್ರೀ ಹಾಳೆಕಟ್ಟೆ, ಕೆ.ರಾಮ ಕಾರ್ಕಡ, ಗಣೇಶ ನಾಯ್ಕ್, ಈಶ್ವರ ಸಾಲಿಗ್ರಾಮ, ಮತ್ತು ಹೆಚ್.ವಿಠಲ ಪೂಜಾರಿ, ರಮೇಶ್ ಮೆಂಡನ್, ಶ್ರೀಮತಿ ರತ್ನ ಇವರುಗಳು ವಹಿಸಿದ್ದರು.

.......ದೇಶವ್ಯಾಪಿ ಆಂದೋಲನ

ಪುಟ 7ರಿಂದ

ಲಕ್ಷ ಹುದ್ದೆಗಳು ರಾಜ್ಯ ಸರ್ಕಾರಿ ವಲಯದಲ್ಲಿ ರದ್ದಾಗಿವೆ. ಸರ್ಕಾರಿ ಹುದ್ದೆಗಳ ಕಡಿತದಿಂದಾಗಿ ಉದ್ಯೋಗಗಳಲ್ಲಿ ಮೀಸಲಾತಿಯನ್ನು ಅವಲಂಬಿಸಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ತೀವ್ರ ಅನ್ಯಾಯವಾಗಿದೆ. ಖಾಸಗಿ ರಂಗದಲ್ಲಿಯೂ ಉದ್ಯೋಗಾವಕಾಶಗಳು ತೀವ್ರವಾಗಿ ಕಡಿತಗೊಂಡಿವೆ. 2001ರಲ್ಲಿ ಖಾಸಗಿ ರಂಗದಲ್ಲಿ ಉದ್ಯೋಗವನ್ನು ಹೊಂದಿದವರ ಸಂಖ್ಯೆ 86.52 ಲಕ್ಷ ಇತ್ತು. 2003ರಲ್ಲಿ ಅದು 84.21 ಲಕ್ಷಕ್ಕೆ ಇಳಿದಿದೆ. 2004-05ರಲ್ಲಿ ಒಟ್ಟು 4.08 ಕೋಟಿ ನಿರುದ್ಯೋಗಿಗಳು ವಿವಿಧ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿಸಲ್ಪಟ್ಟಿದ್ದರು. ಅವರ ಪೈಕಿ ಕೇವಲ 1.03 ಲಕ್ಷ ಜನರಿಗೆ ಮಾತ್ರ ಉದ್ಯೋಗ ದೊರಕುವಂತಾಗಿದೆ. ದೊಡ್ಡ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಒದಗಿಸುತ್ತಿದ್ದ ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ 10 ಲಕ್ಷಕ್ಕೂ ಹೆಚ್ಚು ಘಟಕಗಳು ಮುಚ್ಚಿದ್ದು ಅಸಂಖ್ಯಾತ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ.

ಸಂಘಟಿತ ವಲಯದಲ್ಲಿ ಕೆಲಸ ಕಳೆದುಕೊಂಡವರು ಹೊಟ್ಟೆಪಾಡಿಗಾಗಿ ಅಸಂಘಟಿತ ವಲಯಕ್ಕೆ ಹಾಗೂ ಕೃಷಿ ಕ್ಷೇತ್ರಕ್ಕೆ ಧಾವಿಸುತ್ತಿರುವುದರಿಂದ ಗ್ರಾಮೀಣ ನಿರುದ್ಯೋಗ ಗಂಭೀರ ಸ್ಥಿತಿಯನ್ನು ತಲುಪುವಂತಾಗಿದೆ. ಕೃಷಿಯಲ್ಲಿ ಸಾರ್ವಜನಿಕ ಹೂಡಿಕೆಯ ಕಡಿತ, ಸಬ್ಸಿಡಿಗಳ ಕಡಿತ, ಸಾಂಸ್ಥಿಕ ಸಾಲ ಸೌಲಭ್ಯದ ಕಡಿತ, ಕೃಷಿ ಉತ್ಪನ್ನಗಳ ಬೆಲೆಗಳ ಕುಸಿತ ಮೊದಲಾದ ಮುಖಗಳನ್ನು ಹೊಂದಿದ ಕೃಷಿ ಬಿಕ್ಕಟ್ಟಿನ ಪರಿಣಾಮವಾಗಿ ಕೃಷಿ ಕ್ಷೇತ್ರವು ಉದ್ಯೋಗಾವಕಾಶಗಳನ್ನು ಒದಗಿಸಿದಂತಾಗಿದೆ. ಆದ್ದರಿಂದ ಉದ್ಯೋಗಗಳನ್ನು ಕೊಲ್ಲುವ ಉದಾರೀಕರಣ ಖಾಸಗೀಕರಣದ ನೀತಿಗಳನ್ನು ಕೈಬಿಟ್ಟು ಕೈಗಾರಿಕೀಕರಣವನ್ನು ಪ್ರೋತ್ಸಾಹಿಸುವ, ಕೃಷಿ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಪರ್ಯಾಯ ಧೋರಣೆಗಳನ್ನು ಅನುಸರಿಸುವಂತೆ ಯುಪಿಎ ಸರ್ಕಾರದ ಮೇಲೆ ಒತ್ತಡ ಹೇರಬೇಕಾಗಿದೆ. ಕೈಮಗ್ಗ, ಬೀಡಿ, ನಾರು, ಗೇರು ಮೊದಲಾದ ಪರಂಪರಾಗತ ಉದ್ಯೋಗಗಳನ್ನು ರಕ್ಷಿಸಲು ಸರ್ಕಾರ ಮುಂದಾಗಬೇಕಾಗಿದೆ. ಅಸಂಘಟಿತ ವಲಯದ ಕಾರ್ಮಿಕರ, ಮನೆ ಕೆಲಸಗಾರರ ಹಾಗೂ ಕೃಷಿ ಕೂಲಿಕಾರರ ಕನಿಷ್ಠ ವೇತನ, ಮತ್ತು ಸಾಮಾಜಿಕ ಭದ್ರತೆಯನ್ನು ಖಾತರಿಪಡಿಸುವ ಸಮಗ್ರ ಶಾಸನಗಳನ್ನು ಜಾರಿಗೆ ತರುವಂತಾಗಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಿ ಸೇವೆಗಳಲ್ಲಿ ನೇಮಕಾತಿಗೆ ಹಾಕಲಾಗಿರುವ ತಡೆಯನ್ನು ತೆರವುಗೊಳಿಸಬೇಕು. ಮುಖ್ಯವಾಗಿ, ಗ್ರಾಮೀಣ ಉದ್ಯೋಗ ಭರವಸೆ ಕಾಯ್ದೆಯನ್ನು ಅಂಗೀಕರಿಸಿ ದೇಶದ ಎಲ್ಲಾ ಜಿಲ್ಲೆಗಳಲ್ಲಿ ಜಾರಿಗೆ ತರಬೇಕು. ನಗರ ಪ್ರದೇಶಕ್ಕೂ ಇದನ್ನು ವಿಸ್ತರಿಸಬೇಕು. ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವುದಕ್ಕಾಗಿ ಸರ್ಕಾರ ಹೆಚ್ಚು ಹಣವನ್ನು ಒದಗಿಸಬೇಕು.

ಈ ಬೇಡಿಕೆಗಳನ್ನು ಕುರಿತು ಜನರ ನಡುವೆ ವ್ಯಾಪಕ ಪ್ರಚಾರ ನಡೆಸುವುದು ಮತ್ತು ನಿರ್ದಿಷ್ಟ ಕೇಂದ್ರಗಳಲ್ಲಿ ಬೃಹತ್ ಸಮರಶೀಲ ಹೋರಾಟಗಳನ್ನು ರೂಪಿಸುವುದು ಸಿಪಿಐ(ಎಂ) ದೇಶವ್ಯಾಪಿ ಆಂದೋಲನದ ಉದ್ದೇಶವಾಗಿದೆ. ○

...'ಪ್ರಗತಿ' ತಂಡದ ಪ್ರಚಂಡ ವಿಜಯ

ಪುಟ 4 ರಿಂದ

ಬಂದ ವಿದ್ಯಾರ್ಥಿನಿಯರ ನಡುವೆ ನಮ್ಮ ಪ್ರಗತಿ ತಂಡ ಜಯಿಸಿರುವುದು ಒಂದು ಸಾಧನೆಯೇ ಸರಿ. ಅದರಲ್ಲಿಯೂ ಶ್ರೀಮಂತ ವಿಭಾಗದ ವಿದ್ಯಾರ್ಥಿನಿಯರ ಆಶಯಗಳನ್ನು ಪ್ರತಿನಿಧಿಸುವ ಪ್ರಬಲ ಪ್ರತಿಸ್ಪರ್ಧಿ ತಂಡಗಳನ್ನೆದುರಿಸಿ ಈ ಗೆಲುವು ಪಡೆದಿರುವುದು ವಿಶೇಷ. ಬೆಂಗಳೂರಿನ ಮಾಡ್ರನ್ ಬ್ಯೂಟಿಯು, ಕಾರಿನಲ್ಲೇ ಬಂದಿಳಿಯುತ್ತಿದ್ದ 'ಇಂಗ್ಲೀಷ್ ಬೆಡಗಿಯರು' 'ಪ್ರಗತಿ' ತಂಡದ ಮುಂದೆ ಸಂಪೂರ್ಣವಾಗಿ ಸೋತು ಸುಣ್ಣವಾಗಿದ್ದಾರೆ. ಈ ಹಿಂದೆ ಸಂಘಟನೆಗೆ ಸೇರುವ ಮೊದಲು ಕಾಲೇಜಿನಲ್ಲಿ ಅಂಜಿಕೆಯಿಂದಲೆ ಇರುತ್ತಿದ್ದ ಹಾಸ್ಟೆಲ್ ಹುಡುಗಿಯರು ಈಗ ಬಲು ಹುರುಪಿನಿಂದ ಓಡಾಡಿ ಗೆದ್ದಿದ್ದಾರೆ. ಇತರರಿಗೆ ಇದ್ದಂತೆ ಭಾರಿ ಹಣಕಾಸು ಬೆಂಬಲ ಇಲ್ಲದಿದ್ದರೂ ಎಸ್‌ಎಫ್‌ಐ ತಂಡ ಒಂದು ತಂಡವಾಗಿ ಸಾಮೂಹಿಕವಾಗಿ ಕೆಲಸ ಮಾಡುವುದರ ಮೂಲಕ ಎಸ್‌ಎಫ್‌ಐ ವಿಚಾರಗಳ ಆಧಾರದಲ್ಲಿ ವಿದ್ಯಾರ್ಥಿ ಸಮೂಹವನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳಲು ಸಾಧ್ಯವಾಗಿದೆ.

ಈ ಹಿಂದೆ ಮಹಾರಾಣಿ ಕಾಲೇಜನ್ನು ಸಂಘಟನೆಯ ಕೇಂದ್ರವನ್ನಾಗಿಯೇ ಇಟ್ಟುಕೊಂಡಿದ್ದ ಎ.ಐ.ಡಿ.ಎಸ್.ಓ. ಇಂದು ಪೂರ್ಣವಾಗಿ ನೆಲೆ ಕಳೆದುಕೊಂಡಿದೆ. ಕೋಮುವಾದ ಹಾಗೂ ಗೂಂಡಾಗಿರಿಗೆ ಕುಖ್ಯಾತವಾದ ಎಬಿವಿಪಿಯೂ ಸಹ ವಿದ್ಯಾರ್ಥಿನಿಯರ ಮನ ಗೆಲ್ಲುವಲ್ಲಿ ವಿಫಲವಾಗಿದೆ. ಈ ನಡುವೆ ನಮ್ಮ ಸಂಘಟನೆಯನ್ನು ನೆಲೆಗೊಳಿಸುವಲ್ಲಿ ನಮ್ಮ ಅವಿರತ ಹೋರಾಟದ ಶ್ರಮ ಫಲಿಸಿದೆ.

ಅಗಾಧವಾಗಿ ಬದಲಾಗುತ್ತಿರುವ ಸಾಂಸ್ಕೃತಿಕ - ಸಾಮಾಜಿಕ ಪರಿಸರದ ಹಿನ್ನೆಲೆಯಲ್ಲಿ ಬೆಂಗಳೂರಿನ ವಿದ್ಯಾರ್ಥಿಗಳು ಯಾವುದನ್ನೂ ಸುಲಭವಾಗಿ ಒಪ್ಪುವುದಿಲ್ಲ, ಸ್ವೀಕರಿಸುವುದಿಲ್ಲ. ಬೆಂಗಳೂರಿನ ಪ್ರಖ್ಯಾತ ಮಹಾರಾಣಿ ಮಹಿಳಾ ಕಲಾ ಕಾಲೇಜಿನ ವಿದ್ಯಾರ್ಥಿನಿಯರೂ ಸಹ ಇಂತಹ ಹಲವು ಭ್ರಮಾತ್ಮಕ ವಿಚಾರಗಳ ಪ್ರಭಾವದಿಂದ ಪೂರ್ಣವಾಗಿ ಹೊರತೇನಲ್ಲ. ನಿರಂತರ ಶ್ರಮದ ಫಲವಾಗಿ ತಮ್ಮದೇ ಗುಂಗಿನಲ್ಲಿದ್ದ ವಿದ್ಯಾರ್ಥಿಗಳನ್ನು ನಮ್ಮೆಡೆ ಸೆಳೆಯಲು ಸಾಧ್ಯವಾಗಿದೆ. ಇಡೀ ಕರ್ನಾಟಕದ ವಿದ್ಯಾರ್ಥಿಗಳ ಹೋರಾಟಕ್ಕೆ ಈ ಗೆಲುವು ಸ್ಫೂರ್ತಿಯನ್ನು ತಂದುಕೊಟ್ಟಿದೆ.

ಕಾರ್ಮಿಕರ ತರಬೇತಿ ಶಾಲೆ

ಹೊಸಕೋಟೆ ಪಿಲ್ಲಗುಂಪೆ ಕೈಗಾರಿಕಾ ಪ್ರದೇಶದ ಸಿಐಟಿಯು ಸಂಘಟನೆಯ ಎಲ್ಲಾ ಪದಾಧಿಕಾರಿಗಳು ಮತ್ತು ಇತರೆ ಕಾರ್ಮಿಕರಿಗೆ ಕಾರ್ಮಿಕ ಸಂಘದ ಅವಶ್ಯಕತೆಗಳ ಬಗ್ಗೆ ತರಬೇತಿ ಶಾಲೆಯನ್ನು ಆಯೋಜಿಸಲಾಗಿತ್ತು. ಈ ಶಾಲೆಯಲ್ಲಿ ಅಖಿಲ ಭಾರತ ಬ್ಯಾಂಕ್ ಯೂನಿಯನ್ ಮುಖಂಡರಾದ ರತ್ನಾಕರ ಶೆಣೈರವರು ಮಾತನಾಡಿ ಕಾರ್ಮಿಕ ಸಂಘಟನೆಯ ಅಗತ್ಯ ಮತ್ತು ಹೋರಾಟದ ಮಹತ್ವದ ಕುರಿತು ಎಳೆಎಳೆಯಾಗಿ ವಿವರಿಸಿದರು. ಈ ತರಬೇತಿ ಶಾಲೆಯ ಅಧ್ಯಕ್ಷತೆಯನ್ನು ಸಿ.ಐ.ಟಿ.ಯು ಜಿಲ್ಲಾ ಉಪಾಧ್ಯಕ್ಷರಾದ ಹೆಚ್.ಎನ್.ಗೋಪಾಲಗೌಡರು ವಹಿಸಿದ್ದರು ಮತ್ತು ಸಿಐಟಿಯು ಮುಖಂಡರಾದ ಕಾಂ. ಪಿ.ಮುನಿರಾಜ್, ಕಾಂ. ಸಿ.ರಮೇಶ್ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾದ ಕಾಂ.ಮನೋಹರ್, ವಕೀಲರ ಸಂಘದ ಜಿಲ್ಲಾ ಉಪಾಧ್ಯಕ್ಷರಾದ ಹರೀಂದ್ರರವರು ಉಪಸ್ಥಿತರಿದ್ದರು.



ಸರ್ಕಾರ ಶಿಕ್ಷಕರ ನೇಮಕಾತಿ ನೀತಿ ಬದಲಿಸಿ ವಯೋಮಿತಿ ಮೀರುತ್ತಿರುವ ಶಿಕ್ಷಕ ಅಭ್ಯರ್ಥಿಗಳ ನೇಮಕಾತಿಯನ್ನು ಕೈಬಿಟ್ಟಿದೆ. TCH, Cp.Ed, NTT, PU ಇಂಟರ್‌ಶಿಪ್ ಇತ್ಯಾದಿ ಕೋರ್ಸುಗಳನ್ನು ಮುಗಿಸಿಕೊಂಡು ಉದ್ಯೋಗಕ್ಕಾಗಿ 'ಶಬರಿ'ಯಂತೆ ಕಾದಿದ್ದ ಸುಮಾರು 15 ಸಾವಿರಕ್ಕೂ ಹೆಚ್ಚು ಯುವಜನರು ಬರಿ ಹಣೆಬರಹವನ್ನು ಹಳಿಯುತ್ತಾ ಕೈಚೆಲ್ಲಿ ಕೂರಲಿಲ್ಲ. ತಮ್ಮದೇ ಆದ ಸಂಘ ರಚಿಸಿಕೊಂಡು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(DYFI) ನ ನೇತೃತ್ವದಲ್ಲಿ ಹೋರಾಟಕ್ಕೆ ಅಡಿಯಿಟ್ಟಿದ್ದಾರೆ.

ವಯೋಮಿತಿ ಮೀರಿದ ಶಿಕ್ಷಕರ ಮಿತಿಮೀರಿದ ಬವಣೆ-ಪ್ರತಿಭಟನೆ

ಕರ್ನಾಟಕ ರಾಜ್ಯದ ಇತ್ತೀಚಿನ ಸರ್ಕಾರಗಳಿಗೆ ಮತ್ತು ನಮ್ಮ ಶಿಕ್ಷಣ ಇಲಾಖೆಗೆ ಇತ್ತೀಚೆಗೆ ಒಂದು ವಿಚಾರದ ಬಗೆಗೆ ಹೊಸದಾಗಿ ಜ್ಞಾನೋದಯವಾಗಿದೆ. 'ರಾಜ್ಯದಲ್ಲಿ ಶಾಲಾ ಶಿಕ್ಷಣದ ಗುಣಮಟ್ಟ ತೃಪ್ತಿಕರವಾಗಿಲ್ಲ. ಹೀಗಾಗಿ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಬೇಕು' ಎಂಬುದೇ ಈ ಹೊಸ ಜ್ಞಾನ.

ಇದನ್ನು ಕೇಳಿದ ಯಾರಿಗೆ ಆದರೂ ಸಂತೋಷವೇ ಆಗುತ್ತದೆ. ಮತ್ತು ಸರ್ಕಾರ, ರಾಜ್ಯದಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಬಹುದು - ಶಾಲೆಗಳಲ್ಲಿನ ಕಟ್ಟಡ ಕೊರತೆ- ಮೂಲಭೂತ ಸೌಲಭ್ಯಗಳ ಕೊರತೆ ನಿವಾರಿಸಬಹುದು - ಶಿಕ್ಷಣದ ಬಜೆಟ್ಟನ್ನು ಹೆಚ್ಚಿಸಬಹುದು.... ಹೀಗೆಲ್ಲಾ ಹಲವಾರು ನಿರೀಕ್ಷೆಗಳೂ ಮೂಡುತ್ತವೆ.

ಆದರೆ ಶಿಕ್ಷಣದ ಗುಣವಟ್ಟದ ಬಗ್ಗೆ ಮಾತನಾಡುವ ಸರ್ಕಾರದ ಯೋಜನೆ ಬೇರೆಯದೇ ಹಾದಿ ಹಿಡಿದಿದೆ. ರಾಜ್ಯದಲ್ಲಿ ಸಹಸ್ರಾರು ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಅದನ್ನು ಪೂರ್ಣವಾಗಿ ಭರ್ತಿ ಮಾಡಲು ಸರ್ಕಾರ ಸಿದ್ಧವಿಲ್ಲ. ಅರ್ಹತಾ ಪರೀಕ್ಷೆ - ಸಿಇಟಿ ಪರೀಕ್ಷೆ ಎನ್ನುತ್ತಾ ನೇಮಕಾತಿ ನೀತಿಯಲ್ಲಿ ದೊಡ್ಡ ಬದಲಾವಣೆ ತಂದಿದೆ. ಗುಣಮಟ್ಟದ ಹೆಸರಿನಲ್ಲಿ ವಯೋಮಿತಿ ಮೀರಿರುವ ನಿರುದ್ಯೋಗಿ ಶಿಕ್ಷಕರ ಅಭ್ಯರ್ಥಿಗಳ ನೇಮಕಾತಿಯ ಕ್ರಮವನ್ನು ಕೈಬಿಟ್ಟಿದೆ. ಕನಿಷ್ಟ ಆತ್ಮಗೌರವದ ಬದುಕನ್ನು ಬದುಕುವ ಸಹಸ್ರಾರು ಯುವಜನರ ಆಸೆಗಳನ್ನು ಮಣ್ಣುಪಾಲು ಮಾಡಿದೆ.

1995 ರವರೆಗೆ ರಾಜ್ಯದಲ್ಲಿ ಶಿಕ್ಷಕರ ನೇಮಕಾತಿ ವಿಚಾರದಲ್ಲಿ ಅನುಸರಿಸುತ್ತಿದ್ದ ಕ್ರಮವೆಂದರೆ ಒಂದು ಸರದಿಗೆ ಅಂಕಪಟ್ಟಿ ಮತ್ತು ಪ್ರವೇಶ ಪರೀಕ್ಷೆಯ ಫಲಿತಾಂಶದ ಆಧಾರದಲ್ಲಿ ನೇಮಕಾತಿ, ಮತ್ತೊಂದು ಸರದಿಗೆ ವಯೋಮಿತಿ ಮೀರುತ್ತಿರುವ ಶಿಕ್ಷಕರ ನಡುವಿನಿಂದ ನೇಮಕಾತಿ.

ಪಠ್ಯಪುಸ್ತಕ ಪೂರೈಸಲಾಗದವರ ಗುಣಮಟ್ಟ ಬಗೆಗಿನ ಭಾಷಣ

ಎಷ್ಟೆಲ್ಲಾ ಪ್ರತಿಭಟನೆಗಳು - ತೀವ್ರ ಟೀಕೆ-ಛೀಮಾರಿ - ಸರ್ಕಾರದಿಂದ ತಪ್ಪೊಪ್ಪಿಗೆ - ಸರಿಪಡಿಸುವ ಭರವಸೆ - ವರ್ಷಗಟ್ಟಲೆ ಅನುಭವ ಇಷ್ಟೆಲ್ಲಾ ಹಿನ್ನೆಲೆ ಇದ್ದರೂ ಆಗಸ್ಟ್ ತಿಂಗಳು ಬಂದರೂ ಇನ್ನೂ ಮಕ್ಕಳಿಗೆ ಓದಲು, ಶಿಕ್ಷಕರಿಗೆ ಪಾಠ ಮಾಡಲು ಪಠ್ಯ ಪುಸ್ತಕಗಳು ಸಿಗುತ್ತಿಲ್ಲ. ಅಷ್ಟು ಚೆನ್ನಾಗಿದೆ ಸರ್ಕಾರದ ದಕ್ಷತೆ ಮತ್ತು ಶಿಕ್ಷಣ ಪ್ರೇಮ. ಇಂತಹ ಪರಿಸ್ಥಿತಿಯಲ್ಲಿ ಶಿಕ್ಷಣದ ಗುಣಮಟ್ಟದ ಬಗ್ಗೆ ನಮ್ಮ ಮಂತ್ರಿಮಹೋದಯರು - ಅಧಿಕಾರ ವರ್ಗ ಆಡುವ ಮಾತುಗಳನ್ನು ಕೇಳಿದರೆ ನಗಬೇಕೋ ಅಳಬೇಕೋ ಗೊತ್ತಾಗದೇ ಇವೆರಡೂ ಸೇರಿ ವಿಚಿತ್ರ ಬಗೆಯ ಸಂಕಟವಾಗುತ್ತದೆ.

ಸರ್ಕಾರದ ಈ ನೀತಿಯಿಂದ ರಾಜ್ಯದಲ್ಲಿ ಶಿಕ್ಷಕ ತರಬೇತಿ (TCH), ದೈಹಿಕ ಶಿಕ್ಷಕ ತರಬೇತಿ (Cp.Ed), ಪೂರ್ವ ಪ್ರಾಥಮಿಕ ಶಿಕ್ಷಕ ತರಬೇತಿ (NTT) ಪಿಯುಸಿ ಇಂಟರ್ನ್‌ಶಿಪ್ ಇತ್ಯಾದಿ ತರಬೇತಿಗಳನ್ನು ಮಾಡಿಕೊಂಡು ಶಬರಿಯಂತೆ ಕಾದಿರುವ ಸುಮಾರು 15 ಸಾವಿರಕ್ಕೂ ಹೆಚ್ಚು ನಿರುದ್ಯೋಗಿ ಶಿಕ್ಷಕ ಅಭ್ಯರ್ಥಿಗಳು ಈಗ ವಯೋಮಿತಿ ಮೀರಿ ಪರಿತಪಿಸುವಂತಾಗಿದೆ.

ಈಗ ತಾವು ಹತ್ತಾರು ವರ್ಷ ಶ್ರಮಿಸಿ ಪಡೆದುಕೊಂಡ ಶಿಕ್ಷಣ, ಸಹಸ್ರಾರು ರೂಪಾಯಿ ಖರ್ಚು ಮಾಡಿ ಪಡೆದ ಶಿಕ್ಷಕ ತರಬೇತಿಗಳು ಎಲ್ಲವೂ ವ್ಯರ್ಥವಾಗಿ ಹೋಗುವ ದುರಂತದ ಸ್ಥಿತಿ ಈ ನಿರುದ್ಯೋಗಿಗಳದ್ದು. ಉದ್ಯೋಗ ಸಿಗಲಿಲ್ಲ, ಸ್ವಯಂ ಉದ್ಯೋಗ ಸುಲಭವಲ್ಲ, ಎಷ್ಟೋ ಜನ ಇದ್ದ ತುಂಡು ಜಮೀನು ಮಾರಿ ಇದೇ TCH, NTT ಇತ್ಯಾದಿ ಕಾಲೇಜುಗಳ ಆಡಳಿತ ವರ್ಗ ಎಂಬ ಬಕಪಕ್ಷಿಗಳ ಬಾಯಿಗೆ 'ವಂತಿಗೆ ಹಣ'ವನ್ನಾಗಿ ಸುರಿದಿದ್ದಾರೆ. ಹೀಗಾಗಿ ವ್ಯವಸಾಯವನ್ನು ಸಹ ಮಾಡುವಂತಿಲ್ಲ. 'ತ್ರಿಶಂಕು ನರಕ'ದಲ್ಲಿ ತೇಲಾಡುವ ಪರಿಸ್ಥಿತಿ ಇವರದ್ದು.

ಉದ್ಯೋಗವಿಲ್ಲ, ಹೀಗಾಗಿ ಮದುವೆಯೂ ಇಲ್ಲ. ಮೂವತ್ತು - ಮೂವತ್ತೈದಕ್ಕೆ ಮುಪ್ಪಿನ ಛಾಯೆ ಆವರಿಸುತ್ತಿದೆ. ಜೀವನವೇ ಮುಗಿದು ಹೋಗುತ್ತಿದೆ ಎಂಬಂತಂಹ ಆತಂಕ ಹಲವರದ್ದು. ಮದುವೆಯಾಗದವರ ಕತೆಗಳು ಹೀಗಾದರೆ ಇನ್ನು ಹೇಗೋ ಮದುವೆಯಾಗಿಬಿಟ್ಟವರ ಕತೆ ಮತ್ತೂ ಭೀಕರವಾದದ್ದು. ಶಿಕ್ಷಕ ತರಬೇತಿ ಪಡೆದಿದ್ದರೂ ತಮ್ಮ ಮಕ್ಕಳನ್ನೇ ಶಾಲೆಗೆ ಕಳುಹಿಸಲು ಒದ್ದಾಡಬೇಕಾದ ಅವಸ್ಥೆ.

ಜನರ ಇಂಥ ದುಃಖ ದುಮ್ಮಾನಗಳು 'ವಿಧಾನಸೌಧ'-'ವಿಕಾಸಸೌಧ' ಎಂಬ ದಂತ ಗೋಪುರಗಳಲ್ಲಿ ಕುಳಿತ ಮಹಾ ಪ್ರಭುಗಳ ಕಣ್ಣುಗಳಿಗೆ ಕಂಡಾವೆ. ಕಿವಿಗಳಿಗೆ ಕೇಳಿಯಾವೆ? ಎಂಬುದು ಈಗ ಮುಖ್ಯ ಪ್ರಶ್ನೆಯಾಗಿದೆ.

ಇಷ್ಟಕ್ಕೂ ಸರ್ಕಾರದ ಭಾಗವೇ ಆಗಿರುವ ಶಿಕ್ಷಣ ಇಲಾಖೆಯು- ಸಂಬಂಧಿಸಿದ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಯಾರನ್ನೇ ಆಗಲಿ ನೇಮಕಾತಿ ಮಾಡಿ ಎಂದು ಯಾರೂ ಸಹ ಕೇಳುತ್ತಿಲ್ಲ. 'ಪಾಠ ಮಾಡಲು ಅರ್ಹ' ಎಂದು ಸ್ವತಃ ಇಲಾಖೆಯೇ ಅಂಕಪಟ್ಟಿ - ಪ್ರಮಾಣ ಪತ್ರ ನೀಡಿ ತೇರ್ಗಡೆ ಮಾಡಿದವರನ್ನು ಮಾತ್ರವೇ ನೇಮಕಾತಿ ಮಾಡಿ ಎಂದು ಚಳುವಳಿಗಾರರು ಕೇಳುತ್ತಿರುವುದು, ಪರೀಕ್ಷೆಯಲ್ಲಿ ನಪಾಸಾದವರನ್ನು ನೇಮಕಾತಿಯಲ್ಲಿ ಪಾಸ್ ಮಾಡಿ ಎಂದು ಯಾರೂ ಕೇಳುತ್ತಿಲ್ಲ.

ಜಾಗತೀಕರಣ - ಉದಾರೀಕರಣ - ಖಾಸಗೀಕರಣದ ನೀತಿಗಳನ್ನು ಅಪ್ಪಿಕೊಂಡಿರುವ ಸರ್ಕಾರಗಳಿಗೆ ಶಿಕ್ಷಣ ಕ್ಷೇತ್ರವು ಒಂದು 'ಅನುತ್ಪಾದಕ ಕ್ಷೇತ್ರ'ದಂತೆ - ಸರ್ಕಾರದ ಮೇಲಿನ 'ದೊಡ್ಡ ಹೊರೆ'ಯಂತೆ ಕಾಣುತ್ತಿದೆ. ಹೀಗಾಗಿಯೇ ಶಿಕ್ಷಣಕ್ಕೆ ನಿರಂತರವಾಗಿ ಹಣಕಾಸು ಕಡಿತ ಮಾಡಲಾಗುತ್ತಿದೆ. ಸಹಸ್ರ ಸಹಸ್ರ ಖಾಲಿ ಶಿಕ್ಷಕ ಹುದ್ದೆಗಳನ್ನು ಭರ್ತಿ ಮಾಡದೆ ಶಿಕ್ಷಣ ರಂಗವನ್ನು 'ಒಣಗಿಸ'ಲಾಗುತ್ತಿದೆ. ಈ ಕೆಲಸಕ್ಕೆ ಅನುಕೂಲಕರವಾಗಿ ಕಂಡುಕೊಂಡಿರುವ ಒಂದು ತಂತ್ರವೇ ಈ ಗುಣಮಟ್ಟದ ಪ್ರಶ್ನೆ. ಈ ನೀತಿಯೇ ಸಮಸ್ಯೆಯ ನಿಜವಾದ ಮೂಲ.

ಒಂದೊಮ್ಮೆ ಸರ್ಕಾರ ವಯೋಮಿತಿ ಮೀರಿದವರಿಗೆ ಆದ್ಯತೆ ನೀಡಿ ನೇಮಕಾತಿ ಪ್ರಕ್ರಿಯೆ ಆರಂಭಿಸಿದರೂ ಸಹ ಕೆಲಸ ದಕ್ಕಿಸಿಕೊಳ್ಳಲು ಈ ನಿರುದ್ಯೋಗಿಗಳು ಪಡಬೇಕಾದ ಪಡಿಪಾಟಲು ನೋಡಿ.

ಉರಿಯುವ ಮನೆಯಲ್ಲಿ ಗಳ ಹಿರಿಯುವ ನೀತಿ

ಮೊದಲೇ ನಿರುದ್ಯೋಗದಿಂದ ಕಂಗೆಟ್ಟಿರುವ ಈ ಆದಾಯವಿಲ್ಲದ - ತಮ್ಮ ಕುಟುಂಬಗಳಿಗೇ ಹೊರೆಯಾಗಿರುವ - ಘಣಿರಾಮಚಂದ್ರರು ಕರೆದಂತೆ 'ದಂಡಪಿಂಡ'ಗಳಾಗಿರುವ ಈ ನಿರುದ್ಯೋಗಿ ಯುವಜನರು ಪ್ರತಿ ಬಾರಿ ಅರ್ಜಿ ಸಲ್ಲಿಸುವಾಗಲೂ 200 ರೂಪಾಯಿಗಳ ಡಿ.ಡಿ. ನೀಡಬೇಕು ಅಥವಾ ಪೋಸ್ಟಲ್ ಆರ್ಡರ್ ಮಾಡಬೇಕು. ಜಿಲ್ಲಾವಾರು ನೇಮಕಾತಿ ನಡೆಯುವ ಕ್ರಮ ಇರುವುದರಿಂದ ಉದ್ಯೋಗಾಕಾಂಕ್ಷಿಗಳು ಅರ್ಜಿ ಆಹ್ವಾನಿಸುವ ಪ್ರತಿ ಜಿಲ್ಲೆಗೂ ತೆರಳಿ ಅಲ್ಲಿ ಅರ್ಜಿ ಸಲ್ಲಿಸಬೇಕು. ಎಷ್ಟು ಖರ್ಚು!! ಅಪ್ಪಿತಪ್ಪಿ ನೇಮಕಾತಿಯೇನಾದರೂ ಆಯ್ತೋ! ಆಗೋ ಆಗ ಆರು ಸಾವಿರ ರೂಪಾಯಿಗಳನ್ನು ಕಕ್ಕಬೇಕು. ಹೊಸದಾಗಿ ನೇಮಕಗೊಳ್ಳುವ 'ಶಿಕ್ಷಕರ' ಪೂರ್ವಾಪರ ಇತಿಹಾಸ ವಿಚಾರಿಸಲು ಪೊಲೀಸರಿಂದ 'ವೆರಿಫಿಕೇಷನ್' ನಡೆಸಲಾಗುತ್ತದೆ. ಅದಕ್ಕಾಗಿ ಕಕ್ಕಬೇಕಾದ 'ಪೊಲೀಸ್ ವೆರಿಫಿಕೇಷನ್ ಶುಲ್ಕ' ಇದು!!. ಉದ್ಯೋಗಕ್ಕಾಗಿ ತಹತಹಿಸುತ್ತಿರುವ ನಿರುದ್ಯೋಗಿಗಳ ಬಳಿ ಹೀಗೆ ಸರ್ಕಾರ 'ಉರಿಯುವ ಮನೆಯಲ್ಲಿ ಗಳ ಹಿರಿಯುವಂತೆ' ಹತ್ತೆಂಟು ಹೆಸರಿನ ಶುಲ್ಕಗಳನ್ನು ವಸೂಲಿ ಮಾಡುತ್ತದೆ (ಶಿಕ್ಷಕರು ಮಾತ್ರವಲ್ಲ ಸರ್ಕಾರಿ ಇಲಾಖೆಗಳಲ್ಲಿ ಯಾರೇ ನೇಮಕವಾಗಬೇಕಾದರೂ ಈ 'ವೆರಿಫಿಕೇಶನ್ ಶುಲ್ಕ'ವನ್ನು ಕಡ್ಡಾಯವಾಗಿ ವಸೂಲಿ ಮಾಡಲಾಗುತ್ತಿದೆ).

ವಿಜ್ಞಾನ ಓದಿದವರಿಗಿಂತ ಸಮಾಜ ವಿಜ್ಞಾನ ಓದಿದವರು ದಡ್ಡರು! ಅಮೋಘ ಸಂಶೋಧನೆ!

ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ತರಬೇತಿ ಪಡೆಯುವವರೆಲ್ಲರೂ ಸಮಾನವಾದ ಶಿಕ್ಷಣವನ್ನೇ ಪಡೆಯುತ್ತಾರೆ. ಅಂದರೆ ಎಲ್ಲರಿಗೂ ಒಂದೇ ಬಗೆಯ ಪಠ್ಯ, ಶಾಲೆಗಳಲ್ಲೂ ಅಷ್ಟೇ ಪ್ರಾಥಮಿಕ ಶಾಲೆಯ ಮಕ್ಕಳಲ್ಲಿ ನಿರ್ದಿಷ್ಟ ವಿಷಯಕ್ಕೊಬ್ಬರು ಶಿಕ್ಷಕರು ಎಂಬುದಿಲ್ಲ. ಅನುಕೂಲಕ್ಕೆ ತಕ್ಕಂತೆ ಶಿಕ್ಷಕರು ವಿಷಯ ಹಂಚಿಕೊಳ್ಳಬಹುದಷ್ಟೆ.

ನಮ್ಮ ಸರ್ಕಾರ - ಶಿಕ್ಷಣ ಇಲಾಖೆ ಎಲ್ಲರೂ ಸೇರಿ ಅಮೋಘ ಶೋಧನೆಯೊಂದನ್ನು ಮಾಡಿದ್ದಾರೆ. ಅದೇನೆಂದರೆ ವಿಜ್ಞಾನ ಓದಿದ ವಿದ್ಯಾರ್ಥಿಗಳೆಲ್ಲರೂ ಸಮಾಜ ವಿಜ್ಞಾನ ಓದಿದವರಿಗಿಂತ ಬುದ್ಧಿವಂತರು. ಎಷ್ಟೇ ಅಂಕ ಪಡೆದಿರಲಿ! ಎಷ್ಟೇ ವಿಷಯ ತಿಳಿದಿರಲಿ!. ಹೀಗಾಗಿ ವಿಷಯವಾರು ವರ್ಗೀಕರಣವೇ ಇಲ್ಲದ ಪ್ರಾಥಮಿಕ ಶಾಲೆಗಳ ನೇಮಕಾತಿಯಲ್ಲಿ ಪಿಯುಸಿಯಲ್ಲಿ ವಿಜ್ಞಾನ ಓದಿದ ವಿಜ್ಞಾನ ವಿದ್ಯಾರ್ಥಿಗಳಿಗೆ ಶೇ 40 ಸ್ಥಾನ ಮೀಸಲಿಡಲಾಗಿದೆ. ಸಮಾಜ ವಿಜ್ಞಾನ ಕಲಿತವರಿಗೆ ಶೇ 30 ಸ್ಥಾನ ಮಾತ್ರ (ಉಳಿದ ಶೇ. ಮೂವತ್ತು ಭಾಷಾ ಶಿಕ್ಷಕರಿಗೆ ಮೀಸಲು).

ಇಷ್ಟೆಲ್ಲಾ ಸಮಸ್ಯೆ ಎದುರಿಸುತ್ತಿರುವ ಈ ನಿರುದ್ಯೋಗಿ ಶಿಕ್ಷಕರು ಹತಾಶೆಯಲ್ಲಿ ಕೈಚೆಲ್ಲಿ ಕೂರಲಿಲ್ಲ. 'ಕರ್ನಾಟಕ ರಾಜ್ಯ ನಿರುದ್ಯೋಗಿ ಶಿಕ್ಷಕ ಶಿಕ್ಷಕಿಯರ ಒಕ್ಕೂಟ' ಎಂಬ ಸಂಘಟನೆ ರಚಿಸಿಕೊಂಡಿದ್ದಾರೆ. ಭಾರತ ಪ್ರಜಾಸತ್ತಾತ್ಮಕ ಯುವಜನಫೆಡರೇಷನ್(DYFI) ನ ಜೊತೆಗೂಡಿ ಸರ್ಕಾರದ 'ಜೀವವಿರೋಧಿ' ಧೋರಣೆಗಳ ವಿರುದ್ಧ ಸಂಘರ್ಷಕ್ಕೆ ಮುಂದಾಗಿದ್ದಾರೆ.

ರಾಜ್ಯಮಟ್ಟದ ಬೃಹತ್ ರ್ಯಾಲಿ - ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ

ಜೂನ್ 18, 2005 ರಂದು ರಾಜ್ಯದ ವಿವಿಧ ಮೂಲೆ ಮೂಲೆಗಳಿಂದ ಬಂದ ಸಾವಿರಾರು ಶಿಕ್ಷಕ ಅಭ್ಯರ್ಥಿಗಳು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನಾ ರ್ಯಾಲಿ ನಡೆಸಿ, ನಗರದ ಬನಪ್ಪ ಪಾರ್ಕ್ ಮೈದಾನದಲ್ಲಿ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಆರಂಭಿಸಿದರು.

ಸಿಪಿಐ(ಎಂ) ಶಾಸಕರ ಬೆಂಬಲ

ವಿಧಾನಸಭೆಯಲ್ಲಿ ಕೇವಲ ತಮ್ಮ ಕ್ಷೇತ್ರದ ಸಮಸ್ಯೆಗಳಿಗೆ ಮಾತ್ರವೇ ಸೀಮಿತವಾಗದೇ ಸದಾ ರಾಜ್ಯದ ದುಡಿಯುವ ಜನರ ಪರವಾಗಿ - ನಿರುದ್ಯೋಗಿಗಳೂ ಸೇರಿದಂತೆ - ಜನಸಾಮಾನ್ಯರ ಸಮಸ್ಯೆಗಳ ಪರವಾಗಿ ದನಿ ಎತ್ತುತ್ತಿರುವ ಸಿಪಿಐ(ಎಂ)ನ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿಯವರು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ಹೋರಾಟಕ್ಕೆ ಬೆಂಬಲ ಸೂಚಿಸಿದರು. ಜೊತೆಗೆ ಸಮಸ್ಯೆಗಳ ಪರಿಹಾರಕ್ಕಾಗಿ ಸರ್ಕಾರದ ಮೇಲೆ ಸಹ ಒತ್ತಡ ತಂದಿದ್ದಾರೆ.

ಈ ಎಲ್ಲದರ ಫಲವಾಗಿ ರಾಜ್ಯ ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ರಾಮಲಿಂಗಾರೆಡ್ಡಿಯವರು ಮೊದಲು ಚಳುವಳಿಗಾರರ ನಿಯೋಗವನ್ನು ಮಾತುಕತೆಗೆ ಆಹ್ವಾನಿಸಿದ್ದಾರೆ. ಕೊನೆಗೆ 'ಸಚಿವರೇ ಪ್ರತಿಭಟನಾ ಸ್ಥಳಕ್ಕೆ ಬರಲಿ, ಎಲ್ಲರ ಸಮ್ಮುಖದಲ್ಲಿಯೇ ಚರ್ಚೆಯಾಗಲಿ' ಎಂಬ ಹೋರಾಟಗಾರರ ಒತ್ತಾಯದಂತೆ ಸಚಿವರು ಸತ್ಯಾಗ್ರಹ ಸ್ಥಳಕ್ಕೆ ಆಗಮಿಸಿ ಚರ್ಚಿಸಿದ್ದಾರೆ.

ಸಚಿವರ ಭರವಸೆ - ಚಳುವಳಿ ಮುಂದೂಡಿಕೆ

ಚಳುವಳಿಯ ಪ್ರಮುಖ ಬೇಡಿಕೆಯಾದ ವಯೋಮಿತಿ ಮೀರಿದ ಅಭ್ಯರ್ಥಿಗಳ ನೇಮಕಾತಿ ಸಂಬಂಧ ತಮಗೂ ಸಹಾನುಭೂತಿ ಇರುವುದಾಗಿ ತಿಳಿಸಿದ ಸಚಿವರು ಮುಖ್ಯಮಂತ್ರಿ - ಉಪ ಮುಖ್ಯಮಂತ್ರಿಯೊಂದಿಗೆ ಈ ಬಗ್ಗೆ ಚರ್ಚಿಸುವುದಾಗಿ ಭರವಸೆ ನೀಡಿದ್ದಾರೆ. ಚಳುವಳಿಯ ಇತರ ಬೇಡಿಕೆಗಳಲ್ಲಿ ಒಂದಾದ ಡಿ.ಡಿ. - ಪೋಸ್ಟಲ್ ಆರ್ಡರ್ ಮೊತ್ತ ಮತ್ತು ಅರ್ಜಿ ಶುಲ್ಕವನ್ನು ಗಣನೀಯವಾಗಿ ಕಡಿತ ಮಾಡುವ ಅಧಿಕಾರ ತಮ್ಮ ವ್ಯಾಪ್ತಿಯಲ್ಲೇ ಇದ್ದು ಆ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಖಚಿತ ಭರವಸೆ ನೀಡಿದ್ದಾರೆ.

ಸರ್ಕಾರದ ಪರವಾಗಿ ಸಚಿವರು ನೀಡಿದ ಈ ಖಚಿತ ಭರವಸೆ ಮತ್ತು ಹೋರಾಟ ಮುಂದೂಡಬೇಕೆಂಬ ವಿನಂತಿ ಆಧಾರದಲ್ಲಿ ಅನಿರ್ದಿಷ್ಟ ಉಪವಾಸ ಸತ್ಯಾಗ್ರಹದ ಹೋರಾಟವನ್ನು ಮುಂದೂಡಿ, 15 ದಿನಗಳ ಗಡುವು ನೀಡಲು ಸಂಘಟನೆಗಳು ತೀರ್ಮಾನಿಸಿವೆ. ಆ ಹೊತ್ತಿಗೆ ಸಮಸ್ಯೆಗೆ ಪರಿಹಾರ ಸಿಗದಿದ್ದಲ್ಲಿ ಚಳುವಳಿಯನ್ನು ಮತ್ತಷ್ಟು ತೀವ್ರಗೊಳಿಸಲು ಡಿವೈಎಫ್‌ಐ ಮತ್ತು ಈ ಶಿಕ್ಷಕರ ಸಂಘಟನೆಗಳು ತೀರ್ಮಾನಿಸಿವೆ.



ನಿರುದ್ಯೋಗಿ ಶಿಕ್ಷಕರ ಪ್ರತಿಭಟನಾ ಮೆರವಣಿಗೆ

ಡಿವೈಎಫ್‌ಐ ಸಂಘಟನೆಯ ರಾಜ್ಯ ಅಧ್ಯಕ್ಷರಾದ ಕೆ.ಎನ್.ಉಮೇಶ್, ಕಾರ್ಯದರ್ಶಿ ಕೆ.ಮಹಾಂತೇಶ್, ಧರ್ಮೇಶ್, ಭರತರಾಜ್, ಧನರಾಜ್, ಸ್ವರೂಪ, ನಾಗಾರಾಜ್ ಮುಂತಾದವರು ಶಿಕ್ಷಕರ ಒಕ್ಕೂಟದ ರಾಜ್ಯ ಸಂಘಟನಾಕಾರಾದ ಕೆ.ಬಿ.ಮಂಜುನಾಥ್, ಸಂಚಾಲಕರಾದ ಎಸ್.ಬೈರೇಗೌಡ, ಹಾಸನ ಅಧ್ಯಕ್ಷರಾದ ಚಂದ್ರಶೇಖರ್, ಮೈಸೂರಿನ ದಿನೇಶ್, ಜಯಂತಿ, ತುಮಕೂರಿನ ಮಲ್ಲೇಶ್, ದಕ್ಷಿಣ ಕನ್ನಡದ ಪ್ರಕಾಶ್ ಮುಂತಾದವರು ಚಳುವಳಿಯ ನೇತೃತ್ವ ವಹಿಸಿದ್ದರು.

ವಿವಿಧ ಸಾಮೂಹಿಕ ಸಂಘಟನೆಗಳ ಮುಖಂಡರು, ಹಲವು ಶಾಸಕರು, ವಿರೋಧ ಪಕ್ಷದ ಮುಖಂಡರು ಸತ್ಯಾಗ್ರಹ ಸ್ಥಳಕ್ಕೆ ಭೇಟಿ ನೀಡಿ ಬೆಂಬಲ ಘೋಷಿಸಿದರು.

■ ಆರ್.ರಾಮಕೃಷ್ಣ

ಅದಿರು ಲೂಟಿಗಾಗಿ ಉದಾರೀಕರಣ

ಬಂಡವಾಳಿಗರು ಮತ್ತು ಸಾಮ್ರಾಜ್ಯಶಾಹಿಗಳ ಲೂಟಿಗಾಗಿಯೇ ಉದಾರೀಕರಣದ ಆರ್ಥಿಕ ನೀತಿಗಳು ಎಂಬುದು ಹೊಸ ವಿಷಯವೇನಲ್ಲ. ಒಂದೊಂದು ಉದಾರೀಕರಣದ ಪ್ರಸ್ತಾಪದ ಆಳ ನೋಡಿದಾಗಲೂ ಉದಾರೀಕರಣ ಈ ಜನರ ಲೂಟಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಎಂಬುದು ಸ್ಪಷ್ಟವಾಗುತ್ತದೆ.

ಒರಿಸ್ಸಾ ರಾಜ್ಯ ಸರ್ಕಾರ ಒರಿಸ್ಸಾ ರಾಜ್ಯವನ್ನು ಔದ್ಯಮೀಕರಣ ಮಾಡುತ್ತೇವೆ ಎಂದು ಹೇಳುತ್ತ ತನ್ನ ಅದಿರು ನಿಕ್ಷೇಪಗಳನ್ನು ಬಹುರಾಷ್ಟ್ರೀಯ ಕಂಪನಿಗಳ ಲೂಟಿಗೆ ತೆಗೆದಿರಿಸುವುದನ್ನು ನೋಡಿದರೆ ಹೊಸ ಆರ್ಥಿಕ ನೀತಿಗಳ ಹೇತುಗಳು ಸ್ಪಷ್ಟವಾಗಿ ಕಾಣಿಸುತ್ತೆ.

ಒರಿಸ್ಸಾ ಕರಾವಳಿಯ ಜೈಪುರ ಮತ್ತು ಜಗತ್‌ಸಿಂಗ್‌ಪುರ ಜಿಲ್ಲೆಗಳಲ್ಲಿನ ಸುಮಾರು 30,000 ಎಕರೆ ಭೂಮಿಯನ್ನು ಅದಿರು ಸಂಪತ್ತು ಕೊಳ್ಳೆ ಹೊಡೆಯಲು ಬ.ಕ.ಗಳಿಗೆ ನೀಡಲಾಗುತ್ತಿದೆ. ಫಲವತ್ತಾದ ಈ ಭೂಮಿಯ ಮೇಲೆ ಅವಲಂಬಿತ ಜನ ದಿನಗೂಲಿಗಳಾಗಿ ಕೆಲಸ ಮಾಡಬೇಕಾಗುತ್ತದೆ.

ಮುಖ್ಯಮಂತ್ರಿ ನವೀನ್ ಪಟ್ನಾಯಕ್‌ರ ಸರ್ಕಾರ ವಿವಿಧ ಉದ್ಯಮ ಪತಿಗಳೊಡನೆ ಸುಮಾರು 36 ಒಪ್ಪಂದಗಳನ್ನು ಮಾಡಿಕೊಂಡಿದೆ. ಇವೆಲ್ಲ ಕಬ್ಬಿಣದ ಅದಿರಿನ ಬಳಕೆಗಾಗಿ ಈ ಹಲವು ಉದ್ಯಮಗಳಲ್ಲಿ ದಕ್ಷಿಣ ಕೋರಿಯಾದ ಬ.ಕ. ಪಾಸ್ಕೊ ಸಹ ಒಂದು.


ಈ ಪಾಸ್ಕೊ ಕಂಪನಿಗೆ 12 ದಶಲಕ್ಷ ಟನ್ನುಗಳ ಉಕ್ಕಿನ ಸ್ಥಾವರವನ್ನು ಪರಾದೀಪ್‌ನಲ್ಲಿ ಸ್ಥಾಪಿಸಲು ಅನುಮತಿ ನೀಡಲಾಗಿದೆ.

ಸಿಪಿಐ(ಎಂ)ನ ನೇತೃತ್ವದಲ್ಲಿ ಎಡ ಮತ್ತು ಜಾತ್ಯಾತೀತ ಪಕ್ಷಗಳ ಮುಖಂಡರ ನಿಯೋಗವೊಂದು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಇಂತಹ ಲೂಟಿಗೆ ಅವಕಾಶ ಮಾಡಿಕೊಡಬೇಡಿ. ದೇಶದ ಹಿತಾಸಕ್ತಿಗಳನ್ನು ರಕ್ಷಿಸಿ ಎಂದು ಮನವಿಯೊಂದನ್ನು ಸಲ್ಲಿಸಿತು.

ನಿಯೋಗ ಈ ವಿಷಯದಲ್ಲಿ ಎತ್ತಿರುವ ಹಲವು ಅಂಶಗಳ ಸಾರಾಂಶ ಕೆಳಗಿದೆ.

1. ಪಾಸ್ಕೊ ಜತೆಗಿನ ಒಪ್ಪಂದ ದೇಶದ ವಿದೇಶಿ ನೇರ ಹೂಡಿಕೆ ನೀತಿಗಳು ಅನುಗುಣವಾಗಿ ದೆಯೇ? ಪಾಸ್ಕೊ 39,000 ಕೋಟಿ ರೂಪಾಯಿಗಳ ವಿದೇಶೀ ನೇರ ಹೂಡಿಕೆ ಹರಿದು ಬರುತ್ತದೆ ಇತ್ಯಾದಿ ಮಾತುಗಳನ್ನಾಡುತ್ತಿದೆ. ಇದು ಉತ್ಪ್ರೇಕ್ಷೆಯಲ್ಲವೆ. ಈ ವಿಷಯದಲ್ಲಿ ವಿಶ್ಲೇಷಣೆ ಅಗತ್ಯ. ಒಂದು ಅಂದಾಜಿನ ಪ್ರಕಾರ ಪಾಸ್ಕೊ ಒರಿಸ್ಸಾದ ಮೂರನೇ ಒಂದು ಭಾಗದಷ್ಟು ಅದಿರು ಸಂಪತ್ತನ್ನು ಹತ್ತೇ ವರ್ಷಗಳಲ್ಲಿ ಖಾಲಿ ಮಡುವ ಹುನ್ನಾರದಲ್ಲಿದೆ.
2. ಒರಿಸ್ಸಾದಲ್ಲಿ ನಿರುದ್ಯೋಗ ಸಮಸ್ಯೆ ಅತಿಯಾಗಿದೆ. ಪಾಸ್ಕೊ ಹೆಚ್ಚು ಉದ್ಯೋಗ ಸೃಷ್ಟಿಸುವ ವಿಚಾರ ಹೊಂದಿಲ್ಲ.
3. ಒರಿಸ್ಸಾ ಸರ್ಕಾರ ನಮ್ಮ ಅದಿರಿಗೆ ಅಂತರ್‍ರಾಷ್ಟ್ರೀಯ ಮಾರುಕಟ್ಟೆಯಲ್ಲಿರುವ ಬೆಲೆಯನ್ನೂ ಪಡೆಯಲು ಸಾಧ್ಯವಾಗಿಲ್ಲ.
4. ಬ್ರೆಝಿಲ್ ಸರ್ಕಾರ ಇದೇ ಪಾಸ್ಕೊವಿನಿಂದ ಅದಿರಿಗೆ ಹೆಚ್ಚಿನ ದರ ಕೇಳಿತ್ತು. ಬ್ರೇಝಿಲ್ ಕೇಳಿದ ದರವನ್ನೇ ಒರಿಸ್ಸಾ ಸರ್ಕಾರವೂ ಕೇಳಬಹುದಿತ್ತು.
5. ಗಂಧಮಾರನ್ ಮತ್ತು ಗಟೋಲಿ ಅಧಿರು ಪ್ರದೇಶಗಳನ್ನೇ ಪಾಸ್ಕೊಗೆ ಕೊಡಲು ಉದ್ದೇಶಿಸಲಾಗಿದೆ. ಈ ಪ್ರದೇಶ, ರಾಜ್ಯ ಸರ್ಕಾರಿ ಸ್ವಾಮ್ಯದ ಒರಿಸ್ಸಾ ಮೈನಿಂಗ್ ಕಾರ್ಪೊರೇಷನ್‌ನ ಕೈಯಲ್ಲಿದೆ. ಇದು ಲಾಭದಾಯಕ ಉದ್ದಿಮೆ. ಈ ಲಾಭದಾಯಕ ಉದ್ದಿಮೆಯನ್ನು ಪಾಸ್ಕೊ ಎಂಬ ಬ.ಕ.ಕ್ಕೆ ಮಾರುವುದು ಸರಿಯೇ? ಒಂದು ಅಂದಾಜಿನ ಪ್ರಕಾರ ಸರ್ಕಾರಕ್ಕೆ ಇದರಿಂದ ಆಗುವ ಹಾನಿ ಸುಮಾರು 96,000 ಕೋಟಿ ರೂಪಾಯಿಗಳು!!
6. ಪಾಸ್ಕೊವಲ್ಲದೆ ಇತರ ಹಲವು ರಾಷ್ಟ್ರೀಯ ಮಟ್ಟದ ಉಕ್ಕು ಉತ್ಪಾದಕರೂ ಒರಿಸ್ಸಾದಲ್ಲಿ ಗಣಿಗಾರಿಕೆ ಮಾಡಲು ಮುಂದೆ ಬಂದು ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾರೆ. ಈ ಎಲ್ಲ ಗಣಿಗಾರಿಕೆ ಪ್ರಾರಂಭವಾದರೆ ಬರುವ ಹತ್ತು ವರ್ಷಗಳಲ್ಲಿ ಈ ರಾಜ್ಯದಲ್ಲಿ ಅದಿರು ನಿಕ್ಷೇಪಕ್ಕೆ ಬರವುಂಟಾಗಬಹುದು.

ಕರಾವಳಿ ಪ್ರದೇಶದಲ್ಲಿನ ಕೃಷಿಯನ್ನು ಇದು ಹಾಳುಗೆಡಹುವುದರಿಂದ ರೈತರೂ ಬೀದಿ ಪಾಲಾಗುತ್ತಾರೆ.



ಕುರುಡು ಕಾಂಚಾಣ

ಜಿ.ಎಸ್.ಮಣಿ

ನಾವು ಔದ್ಯಮೀಕರಣವನ್ನು ವಿರೋಧಿಸುವುದಿಲ್ಲ. ಆದರೆ ಹೀಗೆ ಮನಸೋ ಇಚ್ಛೆ ದೇಶದ ಸಂಪನ್ಮೂಲಗಳನ್ನು ಪೋಲು ಮಾಡುವುದನ್ನು ವಿರೋಧಿಸುತ್ತೇವೆ.

ಇಂತಹ ಸಂಪನ್ಮೂಲಗಳನ್ನು ಬಳಸುವಾಗ ವೈಜ್ಞಾನಿಕವಾದ ನೀತಿ ಇರಬೇಕಾದ ಅಗತ್ಯವಿದೆ ಇಂತಹ ಯೋಜನೆಗಳ ಸಾಧಕ ಬಾಧಕಗಳನ್ನು ಸರಿಯಾಗಿ ವಿಶ್ಲೇಷಿಸಿ ಜನಹಿತವನ್ನು ನೋಡಿಕೊಂಡು ಮಾಡಬೇಕು.

ಹಿಂದಿನ ಎನ್‌ಡಿಎ ಸರ್ಕಾರ ನಾಲ್ಕೊ ಕಂಪನಿಯ ಶೇರು ಮಾರಾಟ ಮಾಡುವಾಗಲೂ ಒರಿಸ್ಸಾದ ಜನತೆ ಪ್ರತಿಭಟಿಸಿತ್ತು. ಇಂದೂ ಅಂತಹ ಪ್ರತಿಭಟನೆ ಮೂಡಿಬರುತ್ತಿದೆ.

ಇದು ಒಂದು ಹೋರಾಟದ ಹಾದಿ ಎಂಬುದನ್ನು ಶ್ರಮಜೀವಿಗಳು ಅರಿತುಕೊಳ್ಳುತ್ತಿದ್ದಾರೆ. ಕೇಂದ್ರ ಸರ್ಕಾರ ನಡೆಸುವವರು ಇದನ್ನು ಅರಿತು ನಡೆಯಬೇಕಲ್ಲವೆ?

......ನೆರವಿಗೆ ಧಾವಿಸಲು ಸಿಪಿಐ(ಎಂ) ಕರೆ

ಪುಟ 5 ರಿಂದ

ಪ್ರತಿಕ್ರಿಯೆ ನೀಡದೇ ಇರುವುದು ಒಂದು ಉತ್ತಮವಾದ ಬೆಳವಣಿಗೆ.

ಆರ್.ಎಸ್.ಎಸ್. ಮತ್ತು ಬಿಜೆಪಿ ನಡುವಣ ಬೆಳವಣಿಗೆಗಳಿಗೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದು ಬಿಜೆಪಿಯ ಮಿತ್ರಪಕ್ಷಗಳು ತಿಳಿದಿದ್ದರೆ ಅದು ತಪ್ಪು. ಎನ್.ಡಿ.ಎ.ಯಲ್ಲಿನ ದೊಡ್ಡ ಪಕ್ಷವಾದ ಬಿಜೆಪಿ ಆರ್.ಎಸ್.ಎಸ್ ಹೇಳಿದಂತೆ ನಡೆಯುತ್ತಿದೆ ಎಂಬುದನ್ನು ಮಿತ್ರಪಕ್ಷಗಳು ಅರಿಯಬೇಕು ಎಂದು ಪೊಲಿಟ್‌ಬ್ಯೂರೋ ಹೇಳಿದೆ.

ದೇಶದಾದ್ಯಂತ ಚಳುವಳಿ :

ಭೂಮಿ, ಆಹಾರ ಮತ್ತು ಉದ್ಯೋಗದ ಕುರಿತು ದೇಶದಾದ್ಯಂತ ನಡೆಸಲು ಉದ್ದೇಶಿಸಿರುವ ಬೆಳವಣಿಗೆಯನ್ನು ಯಶಸ್ವಿಗೊಳಿಸಲು ಪಾಲಿಟ್ ಬ್ಯೂರೋ ಎಲ್ಲಾ ಘಟಕಗಳಿಗೆ ಇನ್ನೊಮ್ಮೆ ಕರೆ ನೀಡಿದೆ. ಆಗಷ್ಟ್ ತಿಂಗಳಲ್ಲಿ ಪ್ರಚಾರಗಳನ್ನು ನಡೆಸುತ್ತಾ, ಸೆಪ್ಟೆಂಬರ್ ತಿಂಗಳಲ್ಲಿ ಆಯ್ದ ಪ್ರದೇಶಗಳಲ್ಲಿ ಚಳುವಳಿಯನ್ನು ತೀವ್ರಗೊಳಿಸಬೇಕೆಂದು ಹೇಳಿದೆ. ವಿವಿಧ ರಾಜ್ಯಗಳಲ್ಲಿ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿರುವುದನ್ನು ಗಮನಿಸಿದ ಪಾಲಿಟ್‌ಬ್ಯೂರೋ ಎಲ್ಲಾ ರಾಜ್ಯಗಳಲ್ಲೂ ಈ ಚಳುವಳಿಯನ್ನು ಗಂಭೀರವಾಗಿ ಕೈಗೆತ್ತಿಕೊಳ್ಳಬೇಕೆಂದು ಪಕ್ಷದ ಸದಸ್ಯರಿಗೆ, ಹಿತೈಷಿಗಳಿಗೆ ಮತ್ತು ಜನರಿಗೆ ಮನವಿ ಮಾಡಿದೆ.

ವಿದೇಶ ನೀತಿ :

ಭಾರತ ಮತ್ತು ಅಮೇರಿಕಾ ನಡುವಣ ಇತ್ತೀಚೆಗೆ ನಡೆದ 'ರಕ್ಷಣಾ ಚೌಕಟ್ಟು ಒಪ್ಪಂದ'ವು (Defence Framework Agrement) ಅಮೇರಿಕಾದ ಹಿತಾಸಕ್ತಿಗೆ ಭಾರತವನ್ನು ಬಳಸುವ ಜಾಗತಿಕ ತಂತ್ರದ ಭಾಗವಾಗಿದೆ ಎಂದು ಸಿಪಿಐ(ಎಂ) ಹೇಳಿದ್ದು, ಇದರಿಂದ ನಮ್ಮ ದೇಶದ ಭದ್ರತಾ ಹಿತಾಸಕ್ತಿಗೆ ಮಾರಕವಾಗಿದೆ ಎಂದು ಹೇಳಿದೆ. ರಕ್ಷಣಾ ಸಚಿವ ಪ್ರಣಬ್ ಮುಖರ್ಜಿಯವರ ಅಮೇರಿಕಾ ಭೇಟಿಯ ಸಂದರ್ಭದಲ್ಲಿ ಈ ಒಪ್ಪಂದವನ್ನು ಮಾಡಿಕೊಳ್ಳಲಾಗಿತ್ತು.

ಪ್ರಧಾನ ಮಂತ್ರಿಯವರ ಭೇಟಿಯ ಸಂದರ್ಭದಲ್ಲೂ ಇದೇ ನೀತಿ ಮುಂದುವರಿದಿದ್ದು, ಭಯೋತ್ಪಾದನೆಯ ವಿರುದ್ಧ ನಡೆಸುವ ಹೋರಾಟದಲ್ಲಿ ಅಮೇರಿಕಾದ ನಾಯಕತ್ವವನ್ನು ಒಪ್ಪಿಕೊಂಡಿರುವುದು, ಇತ್ಯಾದಿ ನಿರ್ಧಾರಗಳಲ್ಲಿ ಇದು ವ್ಯಕ್ತವಾಗಿದೆ.

ನೇಪಾಳಕ್ಕೆ ಮಿಲಿಟರಿ ಸಾಮಗ್ರಿಗಳನ್ನು ಪುನಃ ಸರಬರಾಜು ಮಾಡುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದು, ಅಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಪುನರ್ ಸ್ಥಾಪನೆಗೊಳ್ಳುವವರೆಗೂ ಯಾವುದೇ ಸಹಕಾರ ನೀಡಬಾರದೆಂದು ಹೇಳಿದೆ.

ಬಿಹಾರ ಚುನಾವಣೆ :

ಬಿಹಾರ ಚುನಾವಣೆಯಲ್ಲಿ ಆರ್.ಜೆ.ಡಿಯೊಂದಿಗೆ ಸೀಟು ಹಂಚಿಕೆ ಕುರಿತು ಮಾತುಕತೆ ನಡೆಸಲು ನಿರ್ಧರಿಸಿದ್ದು, ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ವಿಶಾಲವಾದ ಐಕ್ಯತೆಯನ್ನು ಕಾಪಾಡಿಕೊಳ್ಳಲು ಕೆಲಸ ಮಾಡಬೇಕೆಂದು ಬಯಸಿದೆ. ಅದೇ ಸಂದರ್ಭದಲ್ಲಿ ಪಕ್ಷವು ಸ್ವತಂತ್ರವಾಗಿ ಪ್ರಚಾರ ನಡೆಸುವುದು.

ಕಾಶ್ಮೀರ :

ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರಗಾಮಿ ಚಟುವಟಿಕೆಗಳು ಹೆಚ್ಚುತ್ತಿರುವುದರ ಬಗ್ಗೆ ಕಳವಳ ವ್ಯಕ್ತಪಡಿಸಿದ ಪಾಲಿಟ್ ಬ್ಯೂರೋ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೂಕ್ತಕ್ರಮ ಕೈಗೊಳ್ಳಬೇಕೆಂದೂ, ಆದರೆ ನಾಗರಿಕ ಸಮುದಾಯದ ಮೇಲೆ ಯಾವುದೇ ಬಲಪ್ರಯೋಗ ಕೂಡದೆಂದೂ ಹೇಳಿದೆ. ಇತ್ತೀಚೆಗೆ ಉಗ್ರಗಾಮಿಗಳೆಂದು ಊಹಿಸಿ 3 ಜನ ಅಮಾಯಕ ಬಾಲಕರನ್ನು ಹತ್ಯೆಗೈದ ಮಿಲಿಟರಿ ಕ್ರಮವನ್ನು ಉದಾಹರಿಸಿದ ಸಿಪಿಐ(ಎಂ), ಇದರಿಂದ ಶಾಂತಿಯನ್ನು ಕಾಪಾಡುವುದು ಕಷ್ಟವಾಗುವುದು ಮಾತ್ರವಲ್ಲದೇ, ಮುಖ್ಯವಾಹಿನಿಯಿಂದ ಜನರನ್ನು ದೂರ ಮಾಡಿದಂತೆ ಆಗುತ್ತದೆ ಎಂದು ಎಚ್ಚರಿಸಿದೆ.

ಪಕ್ಷದ ಕೇಂದ್ರಸಮಿತಿ ಸಭೆಯು ಸೆಪ್ಟೆಂಬರ್ 2, 3 ಮತ್ತು 4 ರಂದು ನವದೆಹಲಿಯಲ್ಲಿ ನಡೆಯಲಿದೆ ಎಂದು ಪಕ್ಷದ ಪತ್ರಿಕಾ ಪ್ರಕಟಣೆ ತಿಳಿಸಿದೆ. ○

.....'ಆಪ್ತಮಿತ್ರ'ನ ಮನೋವಿಜ್ಞಾನ

ಪುಟ 12 ರಿಂದ

ವ್ಯಕ್ತಿತ್ವ) - 'ಸ್ಪ್ಲಿಟ್ ಪರ್ಸನಾಲಿಟಿ'(ಸೀಳು ವ್ಯಕ್ತಿತ್ವ) ಇತ್ಯಾದಿ ಮನೋವಿಜ್ಞಾನದ ಪರಿಭಾಷೆಯನ್ನು ಬಳಸಿಕೊಳ್ಳಲಾಗಿದೆ. 'ಸೈಕಿಕ್ ವೈಬ್ರೇಷನ್' ಎಂಬ ಪರಿಭಾಷೆ ಬಳಸಲಾಗಿದೆ. ಇವೆಲ್ಲಾ ನಾಯಕಿಯ ಮಾನಸಿಕ ಸಮಸ್ಯೆಯನ್ನು ವಿಶ್ಲೇಷಿಸುವ ಪದಗಳು.

ಚಲನಚಿತ್ರದ ವ್ಯಾಪಾರಿ ಉದ್ದೇಶಗಳಿಗಾಗಿ ಮನೋವಿಜ್ಞಾನದ ಪರಿಕಲ್ಪನೆಗಳನ್ನೇ ಇಲ್ಲಿ ಅತ್ಯಂತ ವಿಕೃತವಾಗಿ ತಿರುಚಲಾಗಿದೆ. ಡ್ಯುಯೆಲ್ ಪರ್ಸನಾಲಿಟಿ, ಸ್ಪ್ಲಿಟ್ ಪರ್ಸನಾಲಿಟಿ ಎಂಬ ಮಾನಶಾಸ್ತ್ರೀಯ ನಡವಳಿಕೆ ಮತ್ತು ಸಮಸ್ಯೆಗಳು ಇದ್ದರೂ ಈ ಚಿತ್ರದ ನಾಯಕಿಯ ವರ್ತನೆಗಳಿಗೂ ಅದಕ್ಕೂ ಸಂಬಂಧವೇ ಇಲ್ಲ ಎನ್ನುತ್ತಾರೆ ತಜ್ಞರು. 'ಸೈಕಿಕ್ ವೈಬ್ರೇಷನ್' ಪದವೇ ಮನಶಾಸ್ತ್ರದಲ್ಲಿಲ್ಲವಂತೆ!

ಚಲನಚಿತ್ರದ ಇನ್ನೊಂದು ಅನಾಹುತಕಾರಿ ಪ್ರತಿಪಾದನೆ ಎಂದರೆ ಮಂತ್ರವಾದಿಗಳ ಮಾಟ-ಮಂತ್ರ ತಂತ್ರಗಳಿಂದ ಕೂಡಿದ ವಾಮಾಚಾರಗಳನ್ನೆಲ್ಲಾ ಅತ್ಯಂತ ವೈಜ್ಞಾನಿಕ ಎನ್ನುವುದು. ಅದೂ 'ಮನೋವಿಜ್ಞಾನಿ'ಯ ಬಾಯಿಂದಲೇ ಇದನ್ನು ಹೇಳಿಸುವುದು!!!

ಕೆಲವು ವಿಚಾರಗಳ ಕುರಿತು ಪ್ರಶ್ನೆ ಕೇಳುವುದೇ ತಪ್ಪು, ಪ್ರಶ್ನಿಸಬಾರದು ಎನ್ನುತ್ತಾನೆ ಈ ವಿಜ್ಞಾನಿ. ವಿಜ್ಞಾನ ಜ್ಞಾನದ ಒಂದು ಶಾಖೆಯಷ್ಟೆ. ನಮ್ಮ ಪೂರ್ವಿಕರು ಜ್ಞಾನ ಗಳಿಕೆಯಲ್ಲಿ ಅಪ್ರತಿಮರಾಗಿದ್ದರು. ಅಪಾರ ಸಾಧನೆಗಳನ್ನು ಮಾಡಿದ್ದುದು. (ಅದರಲ್ಲಿ ಈ ಮಾಟ ಮಂತ್ರವೂ ಒಂದು) ಎಂಬ ಸಂದೇಶವೂ ಚಿತ್ರದಲ್ಲಿದೆ.

ಗಂಗಾಳ ಮಾನಸಿಕ ಸಮಸ್ಯೆಗೆ ಚಿತ್ರ ನೀಡುವ ಚಿಕಿತ್ಸಾ ವಿಧಾನವನ್ನೇ ಒಪ್ಪಿಕೊಂಡರು ಸಹ ಸಮಸ್ಯೆ ಅಲ್ಲಿಗೆ ಮುಗಿಯುವುದು ಸಾಧ್ಯವಿಲ್ಲ. ತನ್ನ ಪ್ರೇಮಕ್ಕೆ ಅಡ್ಡ ಬಂದು ತನ್ನನ್ನು ಕೊಂದವನ ಮೇಲೆ ಸೇಡು ತೀರಿಸಿಕೊಂಡ ನಂತರ ನಾಗವಲ್ಲಿ ತನ್ನ ಪ್ರೇಮಿಯನ್ನು ಕೂಡಬೇಕಲ್ಲವೇ? ಅದಲ್ಲವೇ ಅವಳ ಆತ್ಮದ ತಹತಹ. ನಾಗವಲ್ಲಿ ಎಡಬಿಡದೇ ತನ್ನ ಪ್ರಿಯತಮನನ್ನು ಆಹ್ವಾನಿಸುವ "ರಾರಾ... ರಾರಾ...." ಹಾಡು ಅದಕ್ಕಾಗಿ ಅಲ್ಲವೇ? ಗಂಗಾ ತನ್ನ ಗಂಡನನ್ನೆ ಕೊಲ್ಲುವ ಹಲವು ಪ್ರಯತ್ನ ಮಾಡಿದ್ದಳಲ್ಲ?. ವಿಜಯ ರಾಜೇಂದ್ರನನ್ನು ಸುಟ್ಟ ಕೂಡಲೇ ಆಕೆಯ ಎಲ್ಲಾ ಅಡೆತಡೆ ನಿವಾರಣೆಯಾಯಿತೇ?

ಚಿತ್ರದುದ್ದಕ್ಕೂ ಉತ್ತರವಿಲ್ಲದ ಹಲವು ಪವಾಡಗಳು, ವಿಸ್ಮಯಗಳು ಹಲವು ಇವೆ. ಪ್ರೇಕ್ಷಕರನ್ನು ಭೀತಿಗೊಳಿಸಲು, ದಂಗುಬಡಿಸಲು ಅವರ ಕುತೂಹಲ ಕೆರಳಿಸಲು ಏನೇನು ಬೇಕೋ ಅದನ್ನು ತೋರಿಸಿ ಗಲ್ಲಾ ಪೆಟ್ಟಿಗೆ ತುಂಬಿಸಿಕೊಂಡರೆ ಆಯ್ತು. ತೋರಿಸಿದಕ್ಕೆಲ್ಲಾ ಕಾರಣ ಅಥವಾ ತರ್ಕ ಇರಬೇಕು ನಿಯಮ ಎಲ್ಲಿದೆ?

ಇದು ಕೇವಲ ಮೂರು ಗಂಟೆಗಳ ಮನರಂಜನೆಯಷ್ಟೇ ಆಗಿದ್ದಿದ್ದರೆ ಬಿಡುಗಡೆಯಾದ 300 ದಿನಗಳ ಮೇಲೆ ಈ ವಿಮರ್ಶೆ ಅಗತ್ಯವಿರಲಿಲ್ಲ. ತಮ್ಮ ಚಿತ್ರ ಸಮಾಜಕ್ಕೆ ನೀಡುತ್ತಿರುವ ಸಂದೇಶದ ಪರಿಣಾಮ ಸಮಾಜದ ಮೇಲೆ ಏನಾಗಲಿದೆ ಎಂಬ ಪ್ರಜ್ಞೆ ಸಿನಿಮಾ ನಿರ್ಮಿಸುವವರಿಗೆ ನಿರ್ದೇಶಿಸುವವರಿಗೆ ಇರಲೇಬೇಕು. ತಾನು ರಚಿಸಿರುವ ಮಂಡಳದಲ್ಲಿ ಬಂದು ಕೂರಲು ನಿರಾಕರಿಸುವ ನಾಗವಲ್ಲಿಗೆ ಮಂತ್ರವಾದಿ ತನ್ನ ಮಂತ್ರದಂಡದಿಂದ 'ಸರಿಯಾಗಿ' ಬಾರಿಸುತ್ತಾನೆ. ಆಗ ಅವಳು ಮಂಡಲಕ್ಕೆ ಬಂದು ಬೀಳುತ್ತಾಳೆ. ಏನಿದರ ಸಂದೇಶ? ಮಂತ್ರ ತಂತ್ರಗಳ ಹೆಸರಿನಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಅಮಾನುಷ ಹಿಂಸೆಯ ಸಮರ್ಥನೆಯಲ್ಲವೇ ಇದು?

ಸೌಂದರ್ಯ ಸತ್ತದ್ದು ಯಾಕೆ?

ಸೌಂದಯ ವಿಮಾನ ಅಪಘಾತದಲ್ಲಿ ತೀರಿಕೊಂಡಿದ್ದು ನಮಗೆಲ್ಲಾ ತಿಳಿದಿದೆ. ಆಪ್ತಮಿತ್ರ ಚಿತ್ರದಿಂದ ಪ್ರಭಾವಿತರಾಗಿರುವ ದೊಡ್ಡ ಮಹಿಳಾ ಸಮುದಾಯದ 'ಖಾಸಾ ಬಾತ್'ಗೆ ಕಿವಿ ಕೊಟ್ಟರೆ ತಿಳಿಯುತ್ತದೆ ಸೌಂದರ್ಯ ಸಾವಿನ 'ನಿಜವಾದ ಕಾರಣ'. ಮೈಗೆ ಬೆಂಕಿ ಹೊತ್ತಿಕೊಂಡು ಜೀವಂತ ಸುಟ್ಟು ಕರಕಲಾಗುವ 'ನಾಗವಲ್ಲಿ'ಪಾತ್ರದಲ್ಲಿ ನಟಿಸಿದ್ದೇ ಸೌಂದರ್ಯ ಸಾವಿಗೆ ಕಾರಣ. (ವಿಮಾನ ಅಪಘಾತದಲ್ಲೂ ಆಕೆ ಸುಟ್ಟು ಕರಕಲಾಗಿ ಸತ್ತಿದ್ದಾಳೆ)

ಆಪ್ತಮಿತ್ರ ಚಿತ್ರೀಕರಣದ ನಡೆದ ಪಾಳು ಬಂಗಲೆಯಲ್ಲಿ ಆಕೆ, ತಂಡದ ಸೂಚನೆ ನೀಡುವ ಮುಂಚೆಯೇ ಅಲ್ಲಿನ ನಿಗೂಢ ವಸ್ತುಗಳನ್ನು ಕುತೂಹಲಕ್ಕೆ ಜಾಲಾಡಿ ಬಿಟ್ಟಿದ್ದಳಂತೆ. ಅದರಿಂದಾಗಿಯೇ ಆಕೆಗೆ ಅಪಘಾತವಾಗಿ ತೀರಿಕೊಂಡಳು.

ಇಂತಹ ಗುಸುಗುಸು ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳ ನಡುವೆ ವ್ಯಾಪಕವಾಗಿ ನಡೆದಿದೆ. ಶಾಲಾ ಮಕ್ಕಳ, ಅದರಲ್ಲಿಯೂ ಹೆಣ್ಣು ಮಕ್ಕಳ 'ಖಾಸಾಬಾತ್'ಗಳಲ್ಲಿ ಬಹಳ ದಿನ ಈ ಚರ್ಚೆಯೇ ಮೆರೆದಿದೆ.

ಕೊನೆಯದಾಗಿ ಒಂದು ಮಾತು. ಈ ಸಿನಿಮಾ ನೋಡಿದ ಮೇಲೆ ಮನೋವಿಜ್ಞಾನ ಎಂದರೇನು ಮನೋವಿಜ್ಞಾನ ಎಂದರೇನು ಎಂಬ ಪ್ರಶ್ನೆ ಕಾಡತೊಡಗಿದೆ. ಮೂಢನಂಬಿಕೆ - ಮಂತ್ರ-ತಂತ್ರ-ವಾಮಾಚಾರವನ್ನೇ 'ಮನೋವಿಜ್ಞಾನ' ಎಂದು ಕರೆದುಬಿಟ್ಟರೆ ಆಗ ಸಮಸ್ಯೆಯೇ ಇರುವುದಿಲ್ಲ. ಆಗ ಇದೊಂದು ಅಮೋಘ ಮನೋವೈಜ್ಞಾನಿಕ ಚಿತ್ರವಾಗಿ ಬಿಡುತ್ತದೆ. ಸಿನಿಮಾ ತಯಾರಿಸಿರುವ ಮತ್ತೊಂದು ಉದ್ದೇಶವೂ ಇದೇ ತಾನೆ.

ವೆನುಜುವೆಲಾ ಅಧ್ಯಕ್ಷ ಚವೇಝ್‌ರ ಪ್ರಯತ್ನದಿಂದ

ಚಾರಿತ್ರಿಕ ಕೆರಿಬಿಯನ್ ತೈಲ ಒಪ್ಪಂದ

ಶರತ್ ಚಂದ್ರ

ಅಮೆರಿಕದ ಅಪಪ್ರಚಾರ ಧಿಕ್ಕರಿಸಿಯೂ ಯಶಸ್ವಿಯಾಗಿ ನಡೆದ ವೆನೆಜುವೆಲಾ ನೇತೃತ್ವದ ಕೆರಿಬಿಯನ್ ದೇಶಗಳ 'ತೈಲ ಶೃಂಗಸಭೆ' ಮತ್ತು ತೈಲ ಒಪ್ಪಂದ ಅಂತರ್ರಾಷ್ಟ್ರೀಯ ಮಹತ್ವ ಗಳಿಸಿದೆ.

ವೆನೆಜುವೆಲಾ ಅಧ್ಯಕ್ಷ ಚವೇಝ್ ಏನಾದರೊಂದು ಹೊಸತು ದುಡಿಯುವ ಜನತೆ-ಬಡದೇಶಗಳ ಪರವಾದ ಕಾರ್ಯಕ್ರಮ ಹಾಕಿಕೊಳ್ಳುತ್ತಲೇ ಇರುತ್ತಾರೆ. ಇತ್ತೀಚೆಗೆ ಕೆರ್‍ರಿಬಿಯನ್ ದೇಶಗಳ ಜತೆ ಜಂಟಿಯಾಗಿ 'ತೈಲ ಶೃಂಗ ಸಭೆ' ನಡೆಸಿ ಒಂದು ಒಪ್ಪಂದಕ್ಕೆ ಬರುವ ಮೂಲಕ ಪುನಃ ಚರಿತ್ರೆ ಸೃಷ್ಟಿಸಿದ್ದಾರೆ. ತೈಲ ಉತ್ಪಾದಿಸುವ ಮತ್ತು ಇತರ ಬಡದೇಶಗಳ ನಡುವೆ ಇಂತಹ ಒಪ್ಪಂದ ಇದೇ ಮೊದಲು. ಇದಕ್ಕಾಗಿ ಒಂದು ಹೊಸ ಪ್ರಾದೇಶಿಕ ಸಂಘಟನೆ 'ಪೆಟ್ರೋ ಕ್ಯಾರಿಬಿ' ಯನ್ನು ಹುಟ್ಟು ಹಾಕಲಾಗಿದೆ. ತೈಲಶೃಂಗಸಭೆಯಲ್ಲಿ ಕ್ಯಾರಿಬಿಯನ್ ದ್ವೀಪ ರಾಷ್ಟ್ರಗಳು ಸೇರಿದಂತೆ 16 ದೇಶಗಳು ಭಾಗವಹಿಸಿದ್ದವು. ಕ್ಯಾರಿಬಿಯನ್ ದ್ವೀಪ ಸಮೂಹ ಉತ್ತರ ಅಮೆರಿಕಾ, ದಕ್ಷಿಣ ಅಮೆರಿಕಾದ ಸಂಧಿಯಲ್ಲಿ ಪೂರ್ವಕ್ಕೆ ಇದೆ. ಕ್ಯೂಬಾ, ಜಮೈಕಾ, ಡೊಮಿನಿಕನ್ ರಿಪಬ್ಲಿಕ್ ಇತರ ದೇಶಗಳು ಈ ಸಮೂಹಕ್ಕೆ ಸೇರಿವೆ.

ಪೆಟ್ರೋ ಕ್ಯಾರಿಬಿ

ಶೃಂಗಸಭೆಯಲ್ಲಿ ಸೇರಿದ್ದ 16 ದೇಶಗಳಲ್ಲಿ, ವೆನೆಜುವೆಲಾ ಮತ್ತು 13 ಕ್ಯಾರಿಬಿಯನ್ ದೇಶಗಳು ಈ ಒಪ್ಪಂದಕ್ಕೆ ಸಹಿ ಹಾಕಿದವು. ಟ್ರಿನಿಡಾಡ್ ಮತ್ತು ಬಾರ್ಬಡೋಸ್ ಮಾತ್ರ ಈ ಒಪ್ಪಂದ ಅಧ್ಯಯನ ಮಾಡಲು ಹೆಚ್ಚು ಸಮಯಾವಕಾಶ ಕೇಳಿ ಒಪ್ಪಂದಕ್ಕೆ ಸಹಿ ಹಾಕಲಿಲ್ಲ. ಈ ಒಪ್ಪಂದದ ಪ್ರಕಾರ ಅಸ್ತಿತ್ವಕ್ಕೆ ಬಂದ ಪೆಟ್ರೋ ಕ್ಯಾರಿಬಿ ಎಂಬ ಹೊಸ ಪ್ರಾದೇಶಿಕ ಸಂಘಟನೆ ಈ ದೇಶಗಳ ಶಕ್ತಿಯ ಮೂಲಕ ಅಗತ್ಯಗಳ ಆಮದು, ರಫ್ತುಗಳಿಗೆ ಒಂದು ಸಮಗ್ರ ಯೋಜನಾಬದ್ಧ ಆಧಾರ ಒದಗಿಸುವುದು. ಇದಕ್ಕಾಗಿ ತತ್‌ಕ್ಷಣವೇ ವೆನೆಜುವೆಲಾದ ಪೆಟ್ರೋಲಿಯಂ ಕಂಪನಿ ಪೆಟ್ರೋಲಿಯನ್-ಡಿ-ವೆನೆಜುವೆಲಾ ಒಂದು ಹೊಸ ಶಾಖೆ 'ಪಿಡಿವಿ - ಕ್ಯಾರಿಬಿ' ಯನ್ನು ತೆರೆಯಲಿದೆ. ಪೆಟ್ರೋಕ್ಯಾರಿಬಿ ಒಪ್ಪಂದ ದಿಂದಾಗಿ ಈ ಎಲ್ಲಾ ದೇಶಗಳಲ್ಲಿ ಸಮಾನ ತೈಲ ಬೆಲೆ ಜಾರಿಗೆ ಬರುವುದು. ತೈಲಬೆಲೆಗೆ ಅನಗುಣವಾಗಿ ವೆನೆಜುವೆಲಾ ತೈಲ ಆಮದಿನ ಶೇಕಡಾ 5 ರಿಂದ 50 ರವರೆಗೆ ಹಣಕಾಸು ಒದಗಿಸುವುದು. ಉದಾಹರಣೆಗೆ ತೈಲದ ಬೆಲೆ ಬ್ಯಾರಲ್‌ಗೆ 15 ಡಾಲರ್‌ಗಿಂತ ಕಡಿಮೆ ಇದ್ದರೆ, ವೆನೆಜುವೆಲಾ ಶೇಕಡಾ 5 ರಷ್ಟು ಹಣಕಾಸು ಬಹಳ ಕಡಿಮೆ ಬಡ್ಡಿದರದಲ್ಲಿ ಒದಗಿಸುವುದು. ತೈಲದ ಬೆಲೆ ಜಾಸ್ತಿ ಆದಂತೆ ವೆನೆಜುವೆಲಾ ಹೆಚ್ಚಿನ ಪ್ರಮಾಣದ ಹಣಕಾಸನ್ನು ದೀರ್ಘಕಾಲಿನ ಆಧಾರದ ಮೇಲೆ ಕಡಿಮೆ ಬಡ್ಡಿದರದಲ್ಲಿ ಒದಗಿಸುವುದು. ತೈಲದ ಬೆಲೆ 100 ಡಾಲರಿಗೆ ತಲುಪಿದರೆ ಒಪ್ಪಂದದ ಪ್ರಕಾರ ತೈಲ ಆಮದಿನ ಶೇಕಡಾ 50 ರಷ್ಟು ಹಣಕಾಸನ್ನು 25 ವರ್ಷಗಳ ಮರುಪಾವತಿ ಶೇಕಡಾ 1 ಬಡ್ಡಿದರದ ಆಧಾರದ ಮೇಲೆ ವೆನೆಜುವೆಲಾ ಒದಗಿಸುವುದು.



ಮಧ್ಯವರ್ತಿಗಳನ್ನು ತೆಗೆದುಹಾಕುವುದು

ಮಾರಾಟಕ್ಕೆ ಮಧ್ಯವರ್ತಿಗಳನ್ನು ತೆಗೆದು ಹಾಕುವುದರಿಂದ ತೈಲದ ವಹಿವಾಟು ವೆಚ್ಚದ ದೊಡ್ಡ ಭಾಗದಲ್ಲಿ ಕಡಿಮೆ ಮಾಡಲಾಗುವುದು. ಇದಕ್ಕಾಗಿ ಕ್ಯಾರಿಬಿಯನ್ ಪ್ರದೇಶಗಳಿಗಾಗಿ ವೆನಿಜುವೆಲಾ ತನ್ನದೇ ತೈಲ ಟ್ಯಾಂಕರ್ ಹಡಗುಗಳನ್ನು ಒದಗಿಸುವುದು. ಕ್ಯಾರಿಬಿಯನ್ ದೇಶಗಳಲ್ಲಿ ತೈಲ ಹಂಚಿಕೆಗೆ ಒಂದು ನೆಲೆ ಸ್ಥಾಪಿಸುವುದು. ಇದನ್ನು ಅಲ್ಲಿನ ಸರ್ಕಾರವೇ ನಡೆಸುವ ಮೂಲಕ ಅಲ್ಲೂ ಖಾಸಗಿ ಮಧ್ಯವರ್ತಿಗಳನ್ನು ತೆಗೆದು ಹಾಕಲಾಗುವುದು. ಈ ಎಲ್ಲಾ ತೈಲ ವಹಿವಾಟನ್ನು ನೋಡಿಕೊಳ್ಳಲು ಪೆಟ್ರೋಕ್ಯಾರಿಬಿ ಸದಸ್ಯ ದೇಶಗಳ ತೈಲ ಮಂತ್ರಿಗಳನ್ನೊಳಗೊಂಡ ಕೌನ್ಸಿಲ್ ರಚಿಸಲಾಗುವುದು.

ಬೊಲಿವಾರಿಯನ್ ಬದಲಿ - ಅಲ್ಬಾ

ಸದಸ್ಯ ದೇಶಗಳ ಒಟ್ಟಾರೆ ಬೆಳವಣಿಗೆಗೆ ಅನುವು ಮಾಡಿಕೊಡುವ ಅಲ್ಬಾ - ಕ್ಯಾರಿಬಿಯನ್ ಫಂಡ್‌ನ ಸೃಷ್ಟಿಸಹ ಒಪ್ಪಂದದ ಭಾಗ. ಪೆಟ್ರೋಕ್ಯಾರಿಬಿ ದೇಶಗಳಲ್ಲಿ ಹಿಂದುಳಿದ ದೇಶಗಳಿಗೆ ಬೆಳವಣಿಗೆ ನಿಧಿ ಒದಗಿಸುವ ಉದ್ದೇಶ ಈ ಫಂಡ್‌ನದ್ದು. ಅಲ್ಬಾ (ಲ್ಯಾಟಿನ್ ಅಮೆರಿಕಾ ಮತ್ತು ಕ್ಯಾರಿಬಿಯನ್ ದೇಶಗಳಿಗೆ ಬೊಲಿವಾರಿಯನ್ ಬದಲಿ) ಎಂಬುದು ಚವೇಝ್ ಐಎಂಎಫ್ - ವಿಶ್ವಬ್ಯಾಂಕ್‌ಗಳಿಗೆ ಬದಲಿಯಾಗಿ ರೂಪಿಸುತ್ತಿರುವ ಪರಿಕಲ್ಪನೆ. ಪೆಟ್ರೋಕ್ಯಾರಿಬಿಯ ಒಪ್ಪಂದ ಮೂಲಕ ಕ್ಯಾರಿಬಿಯನ್ ದೇಶಗಳು ಉಳಿಸುವ ಹಣವನ್ನು ಈ ಫಂಡ್‌ನಲ್ಲಿ ಸೇರಿಸಲಾಗುವುದು. ವೆನೆಜುವೆಲಾ ತನ್ನ 50 ಮಿಲಿಯನ್ ಡಾಲರ್ ವಂತಿಗೆಯನ್ನು ಈ ಫಂಡ್‌ಗೆ ಘೋಷಿಸಿದೆ.

ಅಮೆರಿಕನ್ ಅಪಪ್ರಚಾರ - ಖಂಡನೆ

ಪೆಟ್ರೋಕ್ಯಾರಿಬಿ ಶೃಂಗಸೆಯ ಸಂದರ್ಭದಲ್ಲಿ ಅಮೆರಿಕ ಆ ಒಪ್ಪಂದ ಆಗದಂತೆ ಮಾಡಲು ಶತಪ್ರಯತ್ನ ನಡೆಸಿತು. ಶೃಂಗಸಭೆಯಲ್ಲಿ ಭಾಗವಹಿಸಿದ ದೇಶಗಳ ಪ್ರತಿನಿಧಿಗಳಿಗೆ ಒಂದುಪತ್ರ ಕಳುಹಿಸಿತ್ತು. ಅದರಲ್ಲಿ ವೆನೆಜುವೆಲಾದಲ್ಲಿ ಪ್ರಜಾಪ್ರಭುತ್ವಕ್ಕೆ ಹೆಚ್ಚುತ್ತಿರುವ ಅಪಾಯದ ಬಗ್ಗೆ ಹೇಳಲಾಗುತ್ತಿಲ್ಲ. ಸರ್ಕಾರದಲ್ಲಿ ಎಲ್ಲಾ ಅಧಿಕಾರಿಗಳ ಕೇಂದ್ರೀಕರಣ, ನ್ಯಾಯಾಂಗದ 'ರಾಜಕೀಯಕರಣ', ಭ್ರಷ್ಟ ಚುನಾವಣಾ ಆಯೋಗ, ನಾಗರಿಕ ಹಕ್ಕುಗಳ ದಮನ - ಇವೆಲ್ಲಾ ವೆನೆಜುವೆಲ್ಲಾದಲ್ಲಿ ನಡೆಯುತ್ತಿದೆ ಎಂದು ಪತ್ರದಲ್ಲಿ ವೆನೆಜುವೆಲಾದ ಬಗ್ಗೆ ಹಸಿಸುಳ್ಳು ಬರೆಯಲಾಗಿತ್ತು. ಮುಂದುವರಿದು ವೆನೆಜುವೆಲಾ ತನ್ನ ತೈಲ ಸಂಪತ್ತನ್ನು ಬಳಸಿ ತನ್ನ ನೆರೆಹೊರೆಯಲ್ಲಿ ಪ್ರಜಾಪ್ರಭುತ್ವ - ವಿರೋಧಿ ಗುಂಪುಗಳಿಗೆ ಕುಮ್ಮಕ್ಕು ಕೊಡುತ್ತಿದೆ ಎಂದು ಪತ್ರ ಹೇಳಿದೆ. ಬೊಲಿವಿಯಾ, ಇಕ್ವಡೋರ್‌ಗಳಲ್ಲಿ ಇಂತಹ ವೆನೆಜುವೆಲಾ ಸರ್ಕಾರದ ಕ್ರಮಗಳು ಬೆಳಕಿಗೆ ಬಂದಿವೆ ಎಂದು ಪತ್ರ ಹೇಳಿತ್ತು.

ಶೃಂಗಸಭೆಯಲ್ಲಿ, ವೆನೆಜುವೆಲಾ ಅಧ್ಯಕ್ಷ ಚವೇಝ್ ಈ ಪತ್ರವನ್ನು ತೀವ್ರವಾಗಿ ಖಂಡಿಸಿ ಖಾರವಾಗಿ ಪ್ರತಿಕ್ರಿಯಿಸಿದರು. ಲ್ಯಾಟಿನ್ ಅಮೆರಿಕದಲ್ಲಿ ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯದ ಮೇಲೆ ಧಾಳಿ ಮಾಡಿದ ಒಂದು ದೇಶವಿದ್ದರೆ ಅದು ಅಮೆರಿಕವೇ. ಪಿನೋಶಿಯಂತಹ ಹಲವು ಸರ್ವಾಧಿಕಾರಿಗಳನ್ನು ಲ್ಯಾಟಿನ್ ಅಮೆರಿಕದ ಮೇಲೆ ಹೊರಿಸಿದ ಅದರ ಕೈಗಳಲ್ಲಿ ರಕ್ತ ಹರಿಯುತ್ತಿದೆ. ವಾರಗಳ ಹಿಂದೆ ಅಮೆರಿಕನ್ ದೇಶಗಳ ಸಂಘಟನೆ (ಏಳ್ಸ) ನಲ್ಲಿ ಅಮೆರಿಕ ಇಂತಹುದೇ ಅಪಪ್ರಚಾರ ವೆನೆಜುವೆಲಾದ ವಿರುದ್ಧ ಹರಿಯಬಿಟ್ಟಿತ್ತು. ಇದು ಅದರ ಪುನರಾವರ್ತನೆ ಎಂದರು. ಪೆಟ್ರೋ ಕ್ಯಾರಿಬಿಯನ್ ಒಪ್ಪಂದಕ್ಕೆ ಶೃಂಗಸಭೆಯಲ್ಲಿ ಭಾಗವಹಿಸಿದ 16 ದೇಶಗಳ ಮುಖ್ಯಸ್ಥರು 14 ಮುಖ್ಯಸ್ಥರು ಸಹಿ ಹಾಕುವ ಮೂಲಕ ಅವರೆಲ್ಲಾ ಅಮೆರಿಕ ಪತ್ರವನ್ನು ತಿರಸ್ಕರಿಸಿದ್ದು ಸ್ಪಷ್ಟವಾಗಿತ್ತು.

ಚವೇಝ್‌ರ ಪ್ರಯತ್ನದಿಂದ ಸಾಧ್ಯವಾದ ಈ ಪೆಟ್ರೋಕ್ಯಾರಿಬಿ ಒಪ್ಪಂದ ಚಾರಿತ್ರಿಕವಾದ ಬೆಳವಣಿಗೆ. ಲ್ಯಾಟಿನ್ ಅಮೆರಿಕದ ತುಂಬಾ ಇಂತಹ ಹಲವು ಬೆಳವಣಿಗೆಗಳು ಸಾಮ್ರಾಜ್ಯಶಾಹಿ-ವಿರೋಧಿ ಶಕ್ತಿಗಳು, ಸಾಮ್ರಾಜ್ಯಶಾಹಿಯನ್ನು ಹಿಮ್ಮೆಟ್ಟಿಸಲು ಮುಂದಾಗುತ್ತಿರುವುದರ ಸಂಕೇತ.

ಅಣ್ವಸ್ತ್ರ ಪ್ರಸಾರಣಾ ನಿಷೇಧ ಒಪ್ಪಂದ ವಿಮರ್ಶೆ ಸಮ್ಮೇಳನ ವಿಫಲ

ಮೇ ನಲ್ಲಿ ಅಣ್ವಸ್ತ್ರ ಪ್ರಸಾರ-ನಿಷೇಧ ಒಪ್ಪಂದದ ವಿಮರ್ಶೆಗೆ ಸಮ್ಮೇಳನ ಸೇರಿತ್ತು. ಒಂದು ತಿಂಗಳಕಾಲ ನಡೆದ ಈ ಸಮ್ಮೇಳನ ಪೂರ್ತಿಯಾಗಿ ವಿಫಲವಾಯಿತು. 35 ವರ್ಷಗಳ ಹಿಂದೆ ಆದ ಈ ಒಪ್ಪಂದದ ಪುನರ್ವಿಮರ್ಶೆಗೆ ಪ್ರತಿ 5 ವರ್ಷಕ್ಕೊಮ್ಮೆ ಸಮ್ಮೇಳನ ನಡೆಸಲಾಗುವುದು. ಮೇನಲ್ಲಿ ನಡೆದದ್ದು ಇಂತಹ ಸಮ್ಮೇಳನ. ಈ ಸಮ್ಮೇಳನ ಹಿಂದೆಂದೂ ಕೇಳಿ ಕಂಡರಿಯದ ರೀತಿಯಲ್ಲಿ ವಿಫಲವಾಯಿತು. ಸಮ್ಮೇಳನದ ಅಜೆಂಡಾ ನಿರ್ಧರಿಸುವಲ್ಲೇ ಒಮ್ಮತ ಮೂಡದೆ ಹೋಯಿತು. ಸಮ್ಮೇಳನದ ಕೊನೆಯಲ್ಲಿ ದುರ್ಬಲವಾದ ಒಂದು ಹೇಳಿಕೆ ಸಹ ಕೊಡಲುಸಾಧ್ಯವಾಗದೆ ಹೋಯಿತು.

ಅಣ್ವಸ್ತ್ರ - ಪ್ರಸರಣ ನಿಷೇಧ ಒಪ್ಪಂದದ ಬಗ್ಗೆ ಜಗತ್ತೆಲ್ಲಾ ಡಂಗುರ ಹೊಡೆಯುವ ಅಮೆರಿಕ ಮತ್ತು ಇತರ ಅಣ್ವಸ್ತ್ರ ದೇಶಗಳ ಹಠಮಾರಿ ಧೋರಣೆಯೇ ಇದಕ್ಕೆ ಕಾರಣ ಎಂದು 90 ದೇಶಗಳ ಸುಮಾರು ಎರಡು ಸಾವಿರಕ್ಕೂ ಹೆಚ್ಚು ಶಾಂತಿ ಚಳುವಳಿಗಳ ಒಕ್ಕೂಟ ಆಪಾದಿಸಿದೆ. ಅಮೆರಿಕ ಸಮ್ಮೇಳನದ ನಿಯಮಗಳನ್ನು ಕ್ಷುಲ್ಲಕವಾಗಿ ಬಳಸಿ ಆಸಕ್ತಿ ಇರುವ ವಿಷಯ ಬಿಟ್ಟು, ಬೇರೆ ಯಾವುದೇ ವಿಷಯದ ಮೇಲೆ ಚರ್ಚೆ ನಡೆಯದಂತೆ ನೋಡಿಕೊಂಡಿತು. ಅಣ್ವಸ್ತ್ರ ದೇಶಗಳ ನಿಶ್ಯಸ್ತ್ರೀಕರಣ ಶರತ್ತುಗಳನ್ನು ಈ ಸಮ್ಮೇಳನದಲ್ಲಿ ಚರ್ಚೆ ಮಾಡುವ ಹಾಗಿಲ್ಲ ಎಂಬ ಬಿಗು ಧೋರಣೆ ತೆಗೆದುಕೊಂಡಿತು. 1995 ರಲ್ಲಿ ಸೇರಿದ್ದ ಸಮ್ಮೇಳನ ಒಪ್ಪಂದವನ್ನು ಅನಿರ್ದಿಷ್ಟ ಕಾಲ ವಿಸ್ತರಿಸಲು ಅಣ್ವಸ್ತ್ರ ಹೊಂದಿದ ದೇಶಗಳ ಮೇಲೆ 13 ಹೆಜ್ಜೆಗಳ ನಿಶ್ಯಸ್ತ್ರೀಕರಣ ಕ್ರಮಗಳನ್ನು ನಿರ್ಧರಿಸಿತ್ತು. ಅದನ್ನು ನಿರಾಕರಿಸುತ್ತಿದೆ ಈಗ ಅಮೆರಿಕ.

ಈ ಒಪ್ಪಂದ ಮೊದಲ ಬಾರಿಗೆ ಆದಾಗ, ಅಣ್ವಸ್ತ್ರ-ರಹಿತ ದೇಶಗಳು ಅಣ್ವಸ್ತ್ರಗಳನ್ನು ತಯಾರಿಸುವುದಿಲ್ಲ. ಅದಕ್ಕೆ ಬದಲಾಗಿ ಅಣ್ವಸ್ತ್ರ ಹೊಂದಿರುವ ದೇಶಗಳು ಬೇರೆ ಬೇರೆ ರೀತಿಯ ಅಣ್ವಸ್ತ್ರಗಳ ಉತ್ಪಾದನೆ ಮೇಲೆ ಮಿತಿ ಹಾಕಿಕೊಳ್ಳುತ್ತವೆ. ಹೊಸ ಅಣ್ವಸ್ತ್ರಗಳನ್ನು ತಯಾರಿಸುವುದಿಲ್ಲ ಎಂಬ ಶರತ್ತು ಇತ್ತು. ಅಣ್ವಸ್ತ್ರ - ರಹಿತ ದೇಶಗಳು ತಮ್ಮ ಭಾಗದ ಒಪ್ಪಂದ ಪೂರ್ತಿಯಾಗಿ ಜಾರಿಮಾಡಿದ್ದರೆ, ಅಣ್ವಸ್ತ್ರ ದೇಶಗಳ (ಅದರಲ್ಲೂ ಅಮೆರಿಕ) ತಮ್ಮ ಭಾಗದ ಒಪ್ಪಂದದಲ್ಲಾ ಅಂಶಗಳನ್ನು ಮುರಿಯುತ್ತಿವೆ. ಪೂರ್ಣ ಅಣು ನಿಶ್ಯಸ್ತ್ರೀಕರಣ ಮಾತು ದೂರ ಇರಲಿ, ತಾವೇ ಒಪ್ಪಿರುವ ಅಣ್ವಸ್ತ್ರ-ಮಿತಿಯ ಎಲ್ಲಾ ಒಪ್ಪಂದಗಳನ್ನು ಪಾಲಿಸುತ್ತಿಲ್ಲ. ತಾರಾ ಸಮರ 'ಟ್ಯಾಂಕ್ ಬಸ್ಟರ್ಸ್' ನಂತಹ ಹೊಸ ಅಸ್ತ್ರಗಳನ್ನು ತಯಾರಿಸಲು ಆರಂಭಿಸಿವೆ.

ಇನ್ನೊಂದು ಒಪ್ಪಂದದ ಹಿಂದಿರುವ ಸಾರದ ಮುಖ್ಯ ಅಂಶ - ಅಣ್ವಸ್ತ್ರ ದೇಶಗಳು ಅಣ್ವಸ್ತ್ರ - ರಹಿತ ದೇಶಗಳ ಮೇಲೆ ಆ ಅಸ್ತ್ರಗಳನ್ನು ಬಳಸದಿರುವ ಬಗ್ಗೆ ಆಶ್ವಾಸನೆ. ಇದು ಹಲವು ದೇಶಗಳು ಅಣ್ವಸ್ತ್ರ ತಯಾರಿಸದಿರುವ ನಿರ್ಧಾರದಲ್ಲಿ ದೊಡ್ಡ ಪಾತ್ರ ವಹಿಸಿತ್ತು. ಆದರೆ ಅಮೆರಿಕದ ಈಗಿನ ರಕ್ಷಣಾ ನೀತಿ ಏಕ-ಪಕ್ಷೀಯ ಮೊದಲ ದಾಳಿಯನ್ನು ಎತ್ತಿಹಿಡಿಯುವ ಮೂಲಕ ಅದನ್ನು ನಿರ್ನಾಮ ಮಾಡಿದೆ.

ಅಣ್ವಸ್ತ್ರ ದೇಶಗಳು ನಿಶ್ಯಸ್ತ್ರೀಕರಣದ ಎಲ್ಲಾ ಯೋಜನೆಗಳನ್ನು ಗಾಳಿಗೆ ತೂರಿ, ಬರಿಯ ಅಣ್ವಸ್ತ್ರ-ರಹಿತ ದೇಶಗಳ ಒಪ್ಪಂದದ ಭಾಗದ ಶರತ್ತುಗಳನ್ನು ಇನ್ನಷ್ಟು ಬಿಗಿಗೊಳಿಸಬೇಕು. ಅಮೆರಿಕದ ಪ್ರಕಾರ ಈ ಒಪ್ಪಂದ 'ಮುರಿದಿರುವ' ಇರಾನ್, ಉತ್ತರ ಕೊರಿಯಾಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ಹಲವು ದೇಶಗಳು ಬಲವಾಗಿ ವಿರೋಧಿಸಿದವು. ಮಲೇಶ್ಯಾ, ನ್ಯೂಜಿಲ್ಯಾಂಡ್ ಮುಂತಾದ ಹಲವು ದೇಶಗಳ ಪ್ರತಿನಿಧಿಗಳು ಅಮೆರಿಕದ, ಎಲ್ಲಾ ಅಣ್ವಸ್ತ್ರ ದೇಶಗಳ ಈ ನಿಲುವನ್ನು ಬಲವಾಗಿ ಖಂಡಿಸಿದರು. ಇದೇ ರೀತಿ ಅಣು ನಿಶ್ಯಸ್ತ್ರೀಕರಣ ಮತ್ತು ಅಣ್ವಸ್ತ್ರ ಮುಕ್ತ ಪ್ರದೇಶಗಳ ನೀತಿಯನ್ನು ಪ್ರಾಮಾಣಿಕವಾಗಿ ಜಾರಿ ಮಾಡದೆ ಅಣ್ವಸ್ತ್ರ-ಪ್ರಸರಣ ನಿಷೇಧ ಕಾರ್ಯಸಾಧ್ಯವಲ್ಲ. ಪಶ್ಚಿಮ ಏಶ್ಯಾದಲ್ಲಿ ಇಸ್ರೇಲ್ ಬಳಿ ಅಣ್ವಸ್ತ್ರಗಳು ಇರುವುದರಿಂದ(ಅಮೆರಿಕದ ಬೆಂಬಲದಿಂದ ರಹಸ್ಯವಾಗಿ ತಯಾರಿಸಿದ್ದು) ಇತರ ಪಶ್ಚಿಮ ಏಶ್ಯಾ ದೇಶಗಳು ತಮ್ಮ ಭದ್ರತೆಯ ಕ್ರಮವಾಗಿ ಅಣ್ವಸ್ತ್ರಗಳ ಬಗ್ಗೆ ಯೋಚನೆ ಮಾಡುವುದು ಸ್ವಾಭಾವಿಕ. ಇದೇರೀತಿ ಅಮೆರಿಕದ ಅಣ್ವಸ್ತ್ರಗಳು ಇರುವ ದ.ಕೋರಿಯಾದ ನೆರೆಯ ಉತ್ತರ ಕೊರಿಯ ತನ್ನ ಭದ್ರತೆಗೆ ಈ ಬಗ್ಗೆ ಯೋಚಿಸಬೇಕಾಗುತ್ತದೆ. ಇದೇ ರೀತಿ ಶಾಂತಿಯುತ ಅಣು ಶಕ್ತಿ ಬಳಕೆ ಬಗ್ಗೆ ಉಗ್ರ ನೀತಿ ತಳೆಯುವುದು ಕಾರ್ಯಸಾಧ್ಯವಲ್ಲ ಎಂಬ ಸಮ್ಮೇಳನದ ಒಳಗಿನ ಮತ್ತು ಶಾಂತಿ ಚಳುವಳಿಯ ಅಭಿಪ್ರಾಯವನ್ನು ಅಮೆರಿಕ ಚರ್ಚೆಗೆ ಬಿಡಲು ತಯಾರಿರಲಿಲ್ಲ. ಸ್ವಾಭಾವಿಕವಾಗಿಯೇ ಸಮ್ಮೇಳನ ಪೂರ್ಣ ವಿಫಲಗೊಂಡಿದೆ.

ಅಮೆರಿಕದ ನೀತಿಯನ್ನು 'ಅಣ್ವಸ್ತ್ರಗಳ ಬಗ್ಗೆ ವಕೀಲರ ಅಂತರ್ರಾಷ್ಟ್ರೀಯ ಸಮಿತಿ'ಯ ಅಲನ್ ವೇರ್ ಹೇಳಿದ ಮಾತುಗಳು ಮಾರ್ಮಿಕವಾಗಿವೆ - "ಅಮೆರಿಕದ ಅಣ್ವಸ್ತ್ರ-ಪ್ರಸರಣ ನಿಷೇಧ ನೀತಿ ಪಾಲಕರು ಮಗುವಿಗೆ ಧೂಮಪಾನ ಮಾಡದಿರಲು ಉಪದೇಶಿಸುತ್ತಾ, ಅದರ ಮುಖದ ಮೇಲೆ ಸರಣಿ - ಸಿಗರೇಟಿನ ಹೊಗೆ ಬಿಡುವಂತೆ ಇದೆ. ಅದು ಎಂದೂ ಕೆಲಸ ಮಾಡುವುದಿಲ್ಲ..."

ಈ ಸಮ್ಮೇಳನದ ವಿಫಲತೆ ವಿಶ್ವಶಾಂತಿಗೆ ತೀವ್ರ ಆತಂಕಕಾರಿಯಾಗಿದೆ. ಆದರೆ ಯಾವುದೇ ಒಪ್ಪಂದ ಸಾಧ್ಯವಾಗಿಲ್ಲ ಎಂಬುದು ಅಣ್ವಸ್ತ್ರ-ದೇಶಗಳ ಮೇಲೆ (ಅದರಲ್ಲೂ ಅದರ ನಾಯಕ ಅಮೆರಿಕದ ಮೇಲೆ) ಸಾರ್ವಜನಿಕ ಒತ್ತಾಯದ ಹೆಚ್ಚಿನ ಒತ್ತಡ ಹೇರುತ್ತದೆ. ಆದರೆ ಅಮೆರಿಕಾ ಈ ಒತ್ತಡವನ್ನು ಮೀರಿ ಹೋಗದಂತೆ ನೋಡಿಕೊಳ್ಳುವ ಹೊಣೆಗಾರಿಕೆಯು ಸಾಮ್ರಾಜ್ಯಶಾಹಿ - ವಿರೋಧಿ, ಯುದ್ಧ ವಿರೋಧಿ ಚಳುವಳಿಗಳ ಮೇಲಿದೆ.

ಸಿನಿಮಾ

ಆಪ್ತಮಿತ್ರ - ಇತ್ತೀಚಿನ ಕನ್ನಡ ಚಿತ್ರಗಳಲ್ಲೇ ಅತ್ಯಂತ ಹೆಚ್ಚು ಜನಪ್ರಿಯತೆಗಳಿಸಿದ ಚಿತ್ರ. ಮಲೆಯಾಳಂನಿಂದ ಕನ್ನಡಕ್ಕೆ, ನಂತರ ತಮಿಳು, ತೆಲುಗಿನಲ್ಲಿ ಈ ಚಿತ್ರದ ಅವತರಣಿಕೆಗಳು ತಲೆ ಎತ್ತಿವೆ.

80 ರ ದಶಕದಲ್ಲಿ 'ನಾ ನಿನ್ನ ಬಿಡಲಾರೆ' ಎಂಬ ಸಿನಿಮಾ ನೋಡಿದ ಮಕ್ಕಳು, ಮಹಿಳೆಯರು, ಮತ್ತು ಪುರುಷರೂ ಸಹ ಚಿತ್ರದ ಹಲವು ದೃಶ್ಯಗಳನ್ನು ನೆನೆಸಿಕೊಂಡು ರಾತ್ರಿ ಹೊತ್ತು ನಡುಗುತ್ತಿದ್ದುದು ಇನ್ನೂ ಹಲವರಿಗೆ ನೆನಪಿರಬಹುದು. ಅದೇ ರೀತಿ ಅಲ್ಲದಿದ್ದರೂ ಜನ ಮಾನಸದ ಮೇಲೆ ಅಂತಹದ್ದೇ ಗಾಢ ಪ್ರಭಾವ ಬೀರುತ್ತಿರುವ ಮತ್ತೊಂದು ಚಿತ್ರವಾಗಿ 'ಆಪ್ತಮಿತ್ರ' ಈಗ ನಮ್ಮ ಗಮನ ಸೆಳೆಯುತ್ತಿದೆ. ಈ ಚಿತ್ರ 300 ದಿನ ಪೂರೈಸಿದೆ. 365 ದಿನಗಳನ್ನೂ ಈ ಚಿತ್ರ ಪೂರೈಸುತ್ತದೆ ಎಂಬ ಬಗ್ಗೆ ಅನುಮಾನಗಳೇನೂ ಇಲ್ಲ. ಕನ್ನಡ ಚಿತ್ರರಂಗದ ಹಲವು ದಾಖಲೆಗಳನ್ನು ಮುರಿದಿದೆ ಎನ್ನಲಾದ ಈ ಚಿತ್ರದ ಯಶಸ್ಸಿನ ಗುಟ್ಟೇನು? 'ಮನೋವಿಜ್ಞಾನ' ಎಂಬ ಹೆಸರಿನಲ್ಲಿ ರೂಪಿಸಲಾಗಿರುವ ಈ ಚಲನಚಿತ್ರವನ್ನು ಗ್ರಹಿಸಬೇಕಾದ ದೃಷ್ಟಿಯೇನು ಎಂದು ವಿಮರ್ಶಿಸಲಾಗಿದೆ ಈ ಲೇಖನದಲ್ಲಿ.



ಮೂಢನಂಬಿಕೆಗಳನ್ನು ನೂರ್ಮಡಿಗೊಳಿಸುವ 'ಆಪ್ತಮಿತ್ರ'ನ ಮನೋವಿಜ್ಞಾನ

ಆರ್.ರಾಮಕೃಷ್ಣ

ಇದೊಂದು ಪುಟ್ಟ ಅರಮನೆಯೆಂದೇ ಕರೆಯುಬಹುದಾದ ದೊಡ್ಡ ಬಂಗಲೆ. ರಾಜವಂಶಸ್ಥರಿಗೆ ಸೇರಿದ ಈ ಬಂಗಲೆಯೇ ಇಡೀ ಚಿತ್ರದ ಕೇಂದ್ರಬಿಂದು. ಆ ಬಂಗಲೆ ಖಾಲಿ ಇದೆ. ಅಲ್ಲಿ ವಾಸಿಸಲು ಯಾರೂ ಬರುವುದಿಲ್ಲ. ಕೊಂಡುಕೊಳ್ಳಲೂ ಹೆದರುತ್ತಾರೆ. ಆ ಬಂಗಲೆಯ ಮಹಡಿಯ ಮೇಲೆ ದಕ್ಷಿಣದ ದಿಕ್ಕಿನ ಕೋಣೆಯೊಂದುಲ್ಲಿ ಹೆಣ್ಣಿನ ಅತೃಪ್ತ ಆತ್ಮವೊಂದನ್ನು ದಿಗ್ಬಂಧನ ಮಾಡಿ ಕೂಡಿ ಹಾಕಲಾಗಿದೆ. ಒಟ್ಟಾರೆ ಈ ಬಂಗಲೆಯಲ್ಲಿ ದೆವ್ವದ ಕಾಟ ಇದೆ ಎಂಬುದು ಎಲ್ಲರ ಹೆದರಿಕೆ.

ಯುವಜೋಡಿಗಳಾದ, ಹೆದ್ದಾರಿ ನಿರ್ಮಾಣಗಾರ ರಮೇಶ್ (ರಮೇಶ್) ಮತ್ತು ಗಂಗಾ (ಸೌಂದರ್ಯ) ಈ ಬಂಗಲೆಯನ್ನು ಕೊಂಡುಕೊಳ್ಳಬಯಸುತ್ತಾರೆ. ದೆವ್ವ-ಭೂತ ಇವೆಲ್ಲ ಶುದ್ಧ ಮೂಢನಂಬಿಕೆ-ಸುಳ್ಳು ಎಂಬುದು ರಮೇಶ್‌ನ ದೃಢವಾದ ನಿಲುವು. ಇವರು ಬಂಗಲೆ ಕೊಂಡುಕೊಂಡು ಅಲ್ಲಿ ವಾಸ ಮಾಡಲು ಆರಂಭಿಸುತ್ತಾರೆ. ಇದೇ ಸಮಯಕ್ಕೆ ರಮೇಶ್‌ನ ಸ್ನೇಹಿತ ವಿಜಯ್ (ವಿಷ್ಣುವರ್ಧನ್) 10 ದಿನಗಳ ವಿಶ್ರಾಂತಿಗಾಗಿ ಸ್ನೇಹಿತನ ಈ ಮನೆಗೆ ಬರುತ್ತಾನೆ. ಆತ ಖ್ಯಾತ ಮನೋವಿಜ್ಞಾನಿ. "ಅಮೇರಿಕಾದಲ್ಲಿ ಮನೋವಿಜ್ಞಾನ ಓದಿ ಚಿನ್ನದ ಪದಕ ಪಡೆದವನು".

ಈ ಬಂಗಲೆ ಕೊಳ್ಳುವುದೇ ಬೇಡ ಎಂದು ಹಠ ಮಾಡಿದ್ದ ರಮೇಶ್‌ನ ಮಾವ, ಈ ಬಂಗಲೆಯಲ್ಲಿ ಯುವ ಜೋಡಿ ಮಾತ್ರವೇ ವಾಸ ಮಾಡುವುದು ಅಪಾಯವೆಂದೂ ತಾನು ತನ್ನ ಹೆಂಡತಿ ಮಕ್ಕಳ ಸಹಿತ ಅಲ್ಲಿಗೆ ವಾಸಕ್ಕೆ ಬರುತ್ತಾನೆ. ಮತ್ತು ಬಂಗಲೆಯಲ್ಲಿ ವಾಸ ಮಾಡಿದರೂ ಯಾರೂ ಮಹಡಿ ಮೇಲೆ ಹೋಗಬಾರದು- ದಕ್ಷಿಣ ದಿಕ್ಕಿನ ಕೋಣೆಯ ಬಳಿಯಂತೂ ಯಾರೂ ಸುಳಿಯಬಾರದು -ಇದು ಆತನ ಕಟ್ಟಪ್ಪಣೆ.

ಗಂಗಾಗೆ ದೆವ್ವದ ಹೆದರಿಕೆ ಇರಲಿಲ್ಲ. ರಾಜರ ಕಾಲದ ಈ ಬಂಗಲೆಯಲ್ಲಿ ಅವರ ಒಡವೆ- ನಿಧಿ ಏನನ್ನಾದರೂ ಬಚ್ಚಿಟ್ಟು ಅದನ್ನು ಕಾಪಾಡಲು ದೆವ್ವದ ಕತೆ ಹರಡಿದ್ದಾರೆ ಎಂಬುದೇ ಅವಳ ಅನಿಸಿಕೆ. ಬಂಗಲೆಯ ಕೌಂಪೌಂಡಿನಲ್ಲೇ ಪುಟ್ಟ ಮನೆಯಲ್ಲಿ ವಾಸವಿರುವ ಕಾವಲುಗಾರ ಅಜ್ಜನ ಮೊಮ್ಮಗಳು ಸೌಮ್ಯ (ಪ್ರೇಮ) ಜೊತೆ ಸೇರಿ ದಕ್ಷಿಣ ದಿಕ್ಕಿನ ಕೋಣೆ ಬೀಗ ತೆಗೆದು ನೋಡುವ ಯೋಜನೆ ರೂಪಿಸುತ್ತಾಳೆ ಗಂಗಾ.

ಇಲ್ಲಿಂದಲೇ ಆರಂಭವಾಗುತ್ತದೆ. ದೆವ್ವದ ಗಂಭೀರ ಕಾಟಗಳು. ಕಳೆದು ಹೋಗಿರುವ ದಕ್ಷಿಣದ ಕೋಣೆಯ ಬೀಗದ ಕೀಲಿಯ ನಕಲಿ ಕೀ ಮಾಡಿಕೊಡುವ ಕುಲಿಮೆಗಾರ ಕೋಣೆಯ ಬೀಗ ತೆಗೆಯುತ್ತಿದ್ದಂತೆ ರಕ್ತಕಾರಿ ಸಾಯುತ್ತಾನೆ. ಹೆದ್ದಾರಿ ನಿರ್ಮಾಣ ಕಾರ್ಯದಲ್ಲಿದ್ದ ರಮೇಶ್ ಅದೇ ಸಮಯಕ್ಕೆ ಸರಿಯಾಗಿ ಲಾರಿ ಅಪಘಾತವೊಂದರಿಂದ ಸ್ವಲ್ಪದರಲ್ಲಿ ಪಾರಾಗುತ್ತಾನೆ. ಅದೂ ಜೊತೆಗಾರನ ಎಚ್ಚರದಿಂದಾಗಿ.

ಇವೆಲ್ಲಾ ಕೇವಲ ಕಾಕತಾಳೀಯ ಎಂಬ ದೃಢವಾದ ನಿಲುವು ತಳೆಯುತ್ತಾರೆ ಗಂಗಾ ಮತ್ತು ರಮೇಶ್. ಕೋಣೆಯ ಬಾಗಿಲು ತೆಗೆದದ್ದೇ ಸಮಸ್ಯೆಯ ಮೂಲ ಎನ್ನುತ್ತಾನೆ ಮಾವ. ಸಮಸ್ಯೆ ಇಲ್ಲಿಗೇ ನಿಲ್ಲುವುದಿಲ್ಲ. ಮನೆಯಲ್ಲಿ ಎಲ್ಲರ ಕಣ್ಮುಂದೆಯೇ ಇದ್ದಕ್ಕಿದ್ದಂತೆ ಹೂಕುಂಡ ಒಡೆಯುವುದು. ಗಡಿಯಾರ ಒಡೆದು ಬೀಳುವುದು. ಗೆಜ್ಜೆ ತೊಟ್ಟ ಹೆಣ್ಣು ಯಾರೋ ರಾತ್ರಿ ಓಡಾಡಿದಂತಾಗಿ ಕೆಲಸದವರು ಬೆಚ್ಚಿ ಬೀಳುವುದು, ಕೊನೆಗೆ ಗಂಗಾಳ ಸೀರೆ ಸೆರಗಿಗೆ ಬೆಂಕಿ ಬೀಳುವುದು. ಇವೆಲ್ಲಾ ನಡೆಯುತ್ತವೆ. ಸೌಮ್ಯಳ ಮೇಲೆ ಎಲ್ಲರ ಸಂಶಯದ ದೃಷ್ಟಿ ಬೀಳುತ್ತದೆ. ತುರ್ತು ಕೆಲಸದ ನಿಮಿತ್ತ ವಾಪಸ್ ಹೋಗಿದ್ದ ಮನೋವಿಜ್ಞಾನಿಯನ್ನು ವಾಪಸ್ ಕರೆಸಿಕೊಳ್ಳಲಾಗುತ್ತದೆ. ಮಾವ ಮನೋವಿಜ್ಞಾನಿಯ ವಿಶ್ಲೇಷಣೆಗಳನ್ನು ಸಲಹೆಗಳನ್ನು ತಿರಸ್ಕರಿಸುತ್ತಾನೆ.

ತೀವ್ರವಾಗಿರುವ ದೆವ್ವದ ಕಾಟವನ್ನು ನಿವಾರಿಸಲು ಮಾವ ಮಂತ್ರವಾದಿ ರಾಮಚಂದ್ರ ಆಚಾರಿಯನ್ನು ಮನೆಗೆ ಕರೆಸುತ್ತಾನೆ. ಮನೋವಿಜ್ಞಾನಿಗೂ- ಮಂತ್ರವಾದಿಗೂ ಕೆಲವು ವಾಗ್ವಾದಗಳು - ತಿಕ್ಕಾಟಗಳು ನಡೆಯುತ್ತವೆ.

ಈ ಮಧ್ಯೆ ರಮೇಶ್ ತನ್ನ ಕೆಲಸದ ನಿಮಿತ್ತ ಗೋಡನ್‌ನಲ್ಲಿ ಒಬ್ಬನೇ ಇದ್ದಾಗ ಗೋಡನ್‌ಗೆ ಬೆಂಕಿ ಬೀಳುತ್ತದೆ. ವಿಜಯ್ ಆತನನ್ನು ಕಾಪಾಡುತ್ತಾನೆ. ಮನೆಯಲ್ಲಿ ಪತ್ರಿಕೆ ಓದುತ್ತಾ ಸೋಫಾ ಮೇಲೆ ಕುಳಿತಿದ್ದ ರಮೇಶ್‌ನ ಮೇಲೆ ಬಾಲ್ಕನಿಯಿಂದ ಗಾಜಿನ ಮೀನು ತೊಟ್ಟಿ ಬೀಳುತ್ತದೆ. ಅದೇ ವಿಜಯ್ ಈಗಲೂ ರಮೇಶ್‌ನನ್ನು ಕಾಪಾಡುತ್ತಾನೆ. ರಮೇಶ್‌ನ ಮಾವನ ಮಗಳು ವಾಣಿಯ ಕೊಲೆಯ ಪ್ರಯತ್ನವೂ ಆಗುತ್ತದೆ. ದೆವ್ವವನ್ನು ಹೋಲುವ (?) ಮಹಿಳೆಯೊಬ್ಬಳು ಅವಳನ್ನು ರೂಮಿನಲ್ಲಿ ಕೂಡಿಹಾಕಿ ಕೊಲ್ಲಲು ಪ್ರಯತ್ನಿಸುತ್ತಾಳೆ. ಈ ಹಲವು ಪ್ರಕರಣಗಳಿಗೆ ಸೌಮ್ಯ (ಪ್ರೇಮ) ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾಗುತ್ತದೆ.

ಮನೋವಿಜ್ಞಾನಿ ವಿಜಯ್ ಸಮಸ್ಯೆಯ ಮೂಲ ಪತ್ತೆ ಹಚ್ಚುತ್ತಾನೆ. ಸಮಸ್ಯೆಯ ಮೂಲ ಸೌಮ್ಯ ಅಲ್ಲ, ಗಂಗಾ. ಆಕೆಗೆ ಮಾನಸಿಕ ಸಮಸ್ಯೆ ಇದೆ. ದಕ್ಷಿಣದ ದಿಕ್ಕಿನ ಕೋಣೆಯನ್ನು ತೆರೆದು ಒಳಗೆ ಹೋದ ಗಂಗಾ ಅಲ್ಲಿ ದೊರೆತ, 'ನರ್ತಕಿ ನಾಗವಲ್ಲಿ'ಯ ಆತ್ಮಕಥೆಯನ್ನು ಓದಿದ್ದಾಳೆ. 'ನಾಗವಲ್ಲಿ' ರಾಜಾ ವಿಜಯ ರಾಜೇಂದ್ರನ ರಾಣಿಯಾಗಿದ್ದಳು. ಆಂಧ್ರದ ಪೆದ್ದಾಪುರದ ಖ್ಯಾತ ನರ್ತಕಿಯಾಗಿದ್ದ ಆಕೆಯನ್ನು ನೋಡಿದ ರಾಜ ಒತ್ತಾಯದಿಂದ ಮದುವೆ ಮಾಡಿಕೊಂಡು ಅರಮನೆಯಲ್ಲಿಟ್ಟುಕೊಂಡಿದ್ದ. ಆಕೆಗೆ ರಾಜನ ಬಗೆಗೆ ಪ್ರೀತಿ ಇರಲಿಲ್ಲ. ಆಕೆಯ ಆ ದಕ್ಷಿಣದ ಕೋಣೆಯ ಕಿಟಕಿಯಿಂದ ದೂರದಲ್ಲಿ ಕಾಣುವ ಮನೆಯೊಂದರಲ್ಲಿ ಅರಮನೆಯ ನೃತ್ಯ ಶಿಕ್ಷಕ ವಾಸವಿದ್ದ. ಇವರಿಬ್ಬರ ಮಧ್ಯೆ ಪ್ರೇಮ ಬೆಳೆದು ಅವರು ರಾಜನಿಗೆ ಗೊತ್ತಿಲ್ಲದಂತೆ ಇದೇ ಕೋಣೆಯಲ್ಲಿ ಸಂಧಿಸುತ್ತಿದ್ದರು. ಇದು ತಿಳಿದ ರಾಜ ನಾಗವಲ್ಲಿಯನ್ನು ಜೀವಂತವಿದ್ದಂತೆ ಮೈಗೆ ಬೆಂಕಿ ಹಚ್ಚಿ ಸುಟ್ಟು ಹಾಕಿದ. ಇದು ಕಥೆ.

ಈ ಕಥೆ ಓದಿದ ಗಂಗಾ ಚಿಕ್ಕಂದಿನಲ್ಲೇ ತಂದೆ ತಾಯಿಗಳಿಂದ ದೂರವಾಗಿ ಅಜ್ಜಿ ಜೊತೆಯಲ್ಲಿ ಬೆಳೆದವಳು. ಆಗಿನಿಂದಲೇ ಮಾನಸಿಕ ತೊಂದರೆ ಎದುರಿಸುತ್ತಿದ್ದವಳು. ಅಜ್ಜಿ ಹೇಳುತ್ತಿದ್ದ ಕಾಲ್ಪನಿಕ - ರಮ್ಯ ಕಥೆಗಳನ್ನು ಗಾಢವಾಗಿ ಮನಸ್ಸಿಗೆ ಹಚ್ಚಿಕೊಳ್ಳುವ ಮಾನಸಿಕ ದೌರ್ಬಲ್ಯ ಆಕೆಗಿತ್ತು. ಈಗ ನಾಗವಲ್ಲಿಯ ಕಥೆಯನ್ನು ಓದಿ ಮರುಗಿ ಮನಸ್ಸಿಗೆ ಹಚ್ಚಿಕೊಂಡು ಗಂಗಾ ಆಗಾಗ ತಾನೇ 'ನಾಗವಲ್ಲಿ'ಯಾಗಿ ಬದಲಾಗುತ್ತಾಳೆ. ಅವಳು ರಾತ್ರಿ ಗಂಡ ನಿದ್ರೆಹೋದ ಮೇಲೆ ದಕ್ಷಿಣ ದಿಕ್ಕಿನ ಕೋಣೆಗೆ ಹೋಗಿ ನಾಗವಲ್ಲಿಯ ವೇಷ ಭೂಷಣ ತೊಟ್ಟುಕೊಂಡು ಅವಳಂತೆ ನೃತ್ಯ ಮಾಡುತ್ತಾಳೆ, ಅಬ್ಬರಿಸುತ್ತಾಳೆ . ಹಿಂದೆ ನೃತ್ಯ ಶಿಕ್ಷಕ ಇದ್ದ ಅದೇ ಮನೆಯಲ್ಲಿ ಈಗಲೂ ಸಹ ಒಬ್ಬ ನೃತ್ಯ ಶಿಕ್ಷಕ (ಡ್ಯಾನ್ಸ್ ಮಾಸ್ಟರ್) ವಾಸವಿದ್ದಾನೆ. ಆತನೇ ತನ್ನ ಪ್ರೇಮಿಯೆಂದು ನಾಗವಲ್ಲಿಯಾಗಿರುವ ಗಂಗಾ ಭಾವಿಸುತ್ತಾಳೆ ಮತ್ತು ಆತನನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಿದ್ದಾಳೆ. ಈ ಪ್ರಯತ್ನದಲ್ಲಿ ಅಡ್ಡ ಬರಬಹುದಾದ ತನ್ನ ಗಂಡ ರಮೇಶ್‌ನನ್ನು ಅವಳೇ ಹಲವು ಬಾರಿ ಕೊಲ್ಲುವ ಪ್ರಯತ್ನ ನಡೆಸಿದ್ದಾಳೆ. ಡ್ಯಾನ್ಸ್ ಮಾಸ್ಟರ್‌ಗೂ- ವಾಣಿಗೂ ನಡುವೆ ಪರಸ್ಪರ ಪ್ರೇಮವಿದೆ. ಆದ್ದರಿಂದಲೇ ಆಕೆ ವಾಣಿಯನ್ನು ಸಹ ಕೊಲ್ಲುವ ಪ್ರಯತ್ನ ಮಾಡಿದ್ದು. ಈ ಸಂಬಂಧದ ಹಲವು ಆರೋಪಗಳು ಸೌಮ್ಯಳ ಮೇಲೆ ಬರುವಂತೆ ಗಂಗಾ ಜಾಣ್ಮೆ ತೋರುತ್ತಿದ್ದಾಳೆ. ಆಕೆ ತನ್ನನ್ನು (ನಾಗವಲ್ಲಿಯನ್ನು) ಕೊಂದ ವಿಜಯರಾಜೇಂದ್ರನ ಮೇಲೆ ಸೇಡು ತೀರಿಸಿಕೊಳ್ಳುವ ಮತ್ತು ಅವನನ್ನೂ ಕೊಲ್ಲುವ ಗಂಭೀರ ಸಂಚು ನಡೆಸಿದ್ದಾಳೆ. ಆದರೆ ಈ ವಿಜಯರಾಜೇಂದ್ರ ಎಲ್ಲಿದ್ದಾನೆ. ಯಾರು?

ಮನೋವಿಜ್ಞಾನಿ ವಿಜಯನೇ ಆಕೆಯ ದೃಷ್ಟಿಯಲ್ಲಿ ವಿಜಯರಾಜೇಂದ್ರ. ಏಕೆಂದರೆ ಸಮಸ್ಯೆಯ ಮೂಲ ಪತ್ತೆ ಹಚ್ಚುವಾಗ ಆತ ಮಧ್ಯರಾತ್ರಿಯಲ್ಲಿ ದಕ್ಷಿಣ ಕೋಣೆಯ ಹತ್ತಿರ ಹೋಗಿದ್ದ. ಆತ ನಾಗವಲ್ಲಿಗೆ ವಿಜಯರಾಜೇಂದ್ರ ವೇಷದಲ್ಲಿಯೇ ಕಾಣಿಸಿಕೊಂಡು ನಾಗವಲ್ಲಿಯ ಸಂಚುಗಳನ್ನು ತಿಳಿದುಕೊಂಡಿರುತ್ತಾನೆ.

ಇಲ್ಲಿಂದಾಚೆಗೆ ಕಥೆ ಬೇರೆಯದೇ ತಿರುವು ಪಡೆಯುತ್ತದೆ. ಇಲ್ಲಿಯವರೆಗೆ ಪರಸ್ಪರ ತಿಕ್ಕಾಟ ನಡೆಸುತ್ತಿದ್ದ ಮಂತ್ರವಾದಿ ಮತ್ತು ಮನೋವಿಜ್ಞಾನಿ ಇಬ್ಬರೂ ಪರಸ್ಪರ ಕೈಜೋಡಿಸುತ್ತಾರೆ. ಪರಸ್ಪರರ ಜ್ಞಾನ ಸಾಮರ್ಥ್ಯವನ್ನು ಸಮಸ್ಯೆ ಬಗೆಹರಿಸಲು ಇಬ್ಬರೂ ಸೇರಿ ಬಳಸುತ್ತಾರೆ.

ವಿಜಯ್‌ನನ್ನೂ (ಮನೋವಿಜ್ಞಾನಿಯನ್ನು) ಕೊಲ್ಲದೆ 'ನಾಗವಲ್ಲಿ' ಆತ್ಮಶಾಂತಿ ಇಲ್ಲ. ಆಕೆಯ ಆತ್ಮಕ್ಕೆ ಶಾಂತಿ ಸಿಗದೆ 'ಗಂಗಾ'ಳ ಮಾನಸಿಕ ಸಮಸ್ಯೆ ಬಗೆಹರಿಯುವುದು ಸಾಧ್ಯವೇ ಇಲ್ಲ. ಹೀಗಾಗಿ ಒಂದು ಜೀವವನ್ನು ಉಳಿಸುವುದಕ್ಕಾಗಿ ಮತ್ತೊಂದು ಜೀವವನ್ನು ಬಲಿ ಕೊಡಬೇಕಾದದ್ದು ಅನಿವಾರ್ಯ! ಈ ನಿಲುವಿಗೆ ಬರುವ ಮನೋವೈದ್ಯ ಆತ್ಮಾರ್ಪಣೆಗೆ ಸಿದ್ಧನಾಗುತ್ತಾನೆ!! ಈ ಹಂತದಲ್ಲಿ ಮಂತ್ರವಾದಿಯ ಸಾಮರ್ಥ್ಯ ಸಹಾಯಕ್ಕೆ ಬರುತ್ತದೆ. ಎಲ್ಲರೂ ಸೇರಿ ರೂಪಿಸುವ ಯೋಜನೆಯಿಂದ ಸಮಸ್ಯೆ ಬಗೆಹರಿಯುತ್ತದೆ.

ದುರ್ಗಾಷ್ಟಮಿಯ ದಿನ ದಕ್ಷಿಣ ದಿಕ್ಕಿನ ಕೋಣೆಯಲ್ಲಿ 'ನಾಗವಲ್ಲಿ'ಯಾಗಿದ್ದ ಗಂಗಾಳನ್ನು ಆಕೆಯ 'ಪ್ರೇಮಿ' ನೃತ್ಯ ಶಿಕ್ಷಕ (ಡಾನ್ಸ್ ಮಾಸ್ಟರ್) ನೃತ್ಯ ಮಾಡುತ್ತಾ....... ಮಾಡುತ್ತಾ.........ಬಂಗಲೆಯಲ್ಲಿ ಮಂತ್ರವಾದಿ ಹಾಕಿದ್ದ ಮಂಡಲದ ಬಳಿಗೆ ಕರೆ ತರುತ್ತಾನೆ. ದೂರದಲ್ಲಿ ನಿಂತಿರುವ 'ವಿಜಯ ರಾಜೇಂದ್ರ'ನ ಮೇಲೆ ಸೇಡು ತೀರಿಸಿಕೊಳ್ಳುವಂತೆ ಕೆರಳಿಸಿ, ಪ್ರಚೋದಿಸಿ 'ನಾಗವಲ್ಲಿ'ಯ ಕೈಗೆ ಉರಿಯುವ ಪಂಜು ಕೊಡುತ್ತಾನೆ ಮಂತ್ರವಾದಿ. ವಿಜಯ ರಾಜೇಂದ್ರನ ಮೇಲೆ ಸೀಮೆಎಣ್ಣೆ ಸುರಿಯಲಾಗುತ್ತದೆ. ವಿಜಯ ರಾಜೇಂದ್ರನ ಬಳಿಯಿಂದ ಮಂಡಲದವರೆಗೂ ಹರಿದು ಬಂದಿರುವ ಸೀಮೆ ಎಣ್ಣೆಗೆ ಬೆಂಕಿ ಹಚ್ಚುತ್ತಾಳೆ ನಾಗವಲ್ಲಿ. ಬೆಂಕಿ ಹೊತ್ತಿ ಉರಿಯುತ್ತಾ ರಾಜನ ಕಡೆಗೆ ನುಗ್ಗುತ್ತದೆ. ಇದೇ ಸಂದರ್ಭಕ್ಕೆ ಮಂತ್ರವಾದಿ ಧೂಪದ ಧೂಳೆಬ್ಬಿಸಿ ವಾತಾವರಣವೆಲ್ಲಾ ಹೊಗೆ ಆವರಿಸುತ್ತದೆ. ವಿಜಯ ರಾಜೇಂದ್ರನ ವೇಷದಲ್ಲಿದ್ದ ವಿಜಯ್ ಜಾಗ ಬದಲಿಸಿ ನೆಲ ಮಾಳಿಗೆಯ ದಾರಿ ಹಿಡಿದು ಬಚಾವಾಗುತ್ತಾನೆ. ಆತನ ಜಾಗದಲ್ಲಿ ಆತನನ್ನೆ ಹೋಲುವ ಬೊಂಬೆಯೆಂದು ಬೆಂಕಿಯಲ್ಲಿ ಉರಿದು ಭಸ್ಮವಾಗುತ್ತದೆ. ನೃತ್ಯ ಮಂತ್ರವಾದಿಯ ಎಳೆದಾಟ, ಹೊಡೆತ ಬಡಿತದಿಂದ ಆಯಾಸಗೊಂಡ ನಾಗವಲ್ಲಿ ಕುಸಿದು ಬಿದ್ದು ಪ್ರಜ್ಞೆ ತಪ್ಪುತ್ತದೆ. ಮತ್ತೆ ಆಕೆಗೆ ಎಚ್ಚರ ಮೂಡಿದಾಗ ಆಕೆ 'ಪರ್‌ಫೆಕ್ಟ್ಲಿ ಆಲ್‌ರೈಟ್' ಆಗಿರುತ್ತಾಳೆ. ಆಕೆ ಮನಸ್ಸು ಹಗುರವಾಗಿರುತ್ತದೆ. 'ಅಮೇರಿಕನ್ ರಿಟರ್ನ್ಡ್ ಗೋಲ್ಡ್ ಮೆಡಲಿಸ್ಟ್ ಸೈಕಿಯಾಟ್ರಿಸ್ಟ್' ವಿಜಯನ ಅಮೋಘ ಚಿಕಿತ್ಸೆ ಫಲಿಸಿ ಪೂರ್ಣ ಯಶಸ್ವಿಯಾಗಿದೆ ಎಂದು ಘೋಷಿಸಲಾಗುತ್ತದೆ. ಇದು ಚಿತ್ರದ ಕಥೆ.

ಈ ಚಿತ್ರದ ನಿರ್ಮಾಪಕರು ದ್ವಾರಕೀಶ್ ನಿರ್ದೇಶನ ಪಿ.ವಾಸುರವರದ್ದು. ಕೇಳಿದರೆ ಮತ್ತೆ ಕೇಳಬೇಕೆನ್ನಿಸುವ ಹಾಡುಗಳು, ಚಲನಚಿತ್ರದ ವರ್ಣ ವೈಭವ, ದೃಶ್ಯ ವೈಭವ, ಚುರುಕು ಸಂಭಾಷಣೆ ಬಿಗಿಯಾದ ನಿರ್ದೇಶನ, ಚಿತ್ರದ ತಾರಾಗಣ, ಚಿತ್ರದ 'ಯಶಸ್ಸಿ'ಗೆ ದೊಡ್ಡ ಕೊಡುಗೆ ನೀಡಿದೆ. ಅದರಲ್ಲಿಯೂ ಈ ಚಿತ್ರದ ಚಿತ್ರೀಕರಣ ಮುಗಿದ ಮೇಲೆ ಚಿತ್ರ ಬಿಡುಗಡೆಯಾಗುವ ಮುಂಚೆಯೇ ಚಿತ್ರದ ನಾಯಕಿ ಸೌಂದರ್ಯ ವಿಮಾನ ಅಪಘಾತದಲ್ಲಿ ಮರಣ ಹೊಂದಿದ್ದು, ಈ ಜನಪ್ರಿಯ ನಟಿಯ ಬಗೆಗೆ ಅನುಕಂಪ ಜನರನ್ನು ಚಿತ್ರದ ಕಡೆಗೆ ಸೆಳೆದಿದೆ. ಆದರೆ ಇಲ್ಲಿ ಪರಿಗಣಿಸಬೇಕಾದ ಮತ್ತೊಂದು ಪ್ರಮುಖ ಅಂಶವಿದೆ. ಅದೇನೆಂದರೆ ದೆವ್ವ, ಭೂತ, ಮಾಟ ಮಂತ್ರಗಳಂತಹ ವಿಚಾರಗಳಲ್ಲಿ ಜನರಿಗೆ ಇರುವ ನಂಬಿಕೆ, ಕುತೂಹಲ ಮತ್ತು ಸೆಳೆತವನ್ನು ಈ ಚಿತ್ರವು ಬಂಡವಾಳ ಮಾಡಿಕೊಂಡಿದೆ. ಮಾತ್ರವಲ್ಲ ತನ್ನ ವ್ಯಾಪಾರಿ ಉದ್ದೇಶಕ್ಕೆ ಈ ಚಿತ್ರ ಮನೋವಿಜ್ಞಾನವನ್ನು 'ಬಳಸಿ'ಕೊಂಡಿದೆ.

ಈ ಚಲನಚಿತ್ರ ಮತ್ತು ಇದು ನೀಡುತ್ತಿರುವ ಸಂದೇಶ ಅತ್ಯಂತ ಅಪಾಯಕಾರಿಯಾಗಿರುವುದು ಇಲ್ಲೇ. ಚಿತ್ರದಲ್ಲಿ 'ಡ್ಯುಯಲ್ ಪರ್ಸನಾಲಿಟಿ'(ದ್ವಂದ್ವ

ಪುಟ 10 ಕ್ಕೆ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH